
ಪುಸ್ತಕ ಪ್ರಪಂಚ

ಸಂಪುಟ ೪೪ ಏಪ್ರಿಲ್ ೧೯೯೪ ಸಂಚಿಕೆ ೮



ವಿಷಯ ಸೂಚಿಕೆ

ಮುಖಚಿತ್ರ : ಸೀತಾಕಾಂತ ಮಹಾಪಾತ್ರ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಸಂಪುಟ ೪೪ ಏಪ್ರಿಲ್ ೧, ೧೯೯೪ ಸಂಚಿಕೆ ೮

ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ: ಸೀತಾಕಾಂತ ಮಹಾಪಾತ್ರ

ಕೆಲವು ವರ್ಷಗಳ ಹಿಂದೆ ಮೆಕ್ಸಿಕೋದ ಕವಿ ಆಕ್ಟೇವಿಯೊ ಪಾಜ್ ಅವರಿಗೆ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ಬಂದಾಗ ಸಂತೋಷವಾಗಿತ್ತು. ಅಪ್ಪಟ ಅಕಡೆಮಿಕರಲ್ಲದ ಈ ಕವಿ ವೃತ್ತಿ ಜೀವನದುದ್ದಕ್ಕೂ ರಾಯಭಾರಿಯಾಗಿದ್ದವರು. ಆ ಸಂಬಂಧದಲ್ಲೇ ಇವರು ಕೆಲಕಾಲ ಭಾರತದಲ್ಲೂ ಬೀಡುಬಿಟ್ಟಿದ್ದರು. ಇಲ್ಲಿನ ಅನುಭವಗಳನ್ನೂ ಸಹ ಪದ್ಯಗಳಲ್ಲಿ ಕಂಡರಿಸಿದ್ದಾರೆ. ಜಗದ್ವಿಖ್ಯಾತ ಕವಿ ಟಿ. ಎಸ್. ಎಲಿಯಟ್ ಬ್ಯಾಂಕ್ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರೇ ಹೊರತು ಯಾವ ವಿಶ್ವವಿದ್ಯಾನಿಲಯದಲ್ಲೂ ಪ್ರಾಧ್ಯಾಪಕರಾಗಿದ್ದವರಲ್ಲ. ಇಂಥ ಉದಾಹರಣೆಗಳನ್ನು ಕೊಡುತ್ತಾಹೋಗಬಹುದು. ಸರಸ್ವತಿಯ ಆರಾಧನೆಗೆ ಇವರು ಅರ್ಹರು, ಇವರು ಅಲ್ಲ ಎಂಬ ಕಟ್ಟುಪಾಡುಗಳಿರುವುದಿಲ್ಲ. ಮನುಕುಲದ ಪಾಡನ್ನು ತುಸು ದೂರದಲ್ಲಿ ನಿಂತು ಗಮನಿಸುತ್ತಾ ಮಾನವೀಯ ಅನುಕಂಪದ ಸೆಲೆಯನ್ನು ಅಂತರಂಗದಲ್ಲಿ ಧಾರಣೆ ಮಾಡುವವರಿಗೆಲ್ಲಾ ಮತ್ತೆ ಹಾಡಿನ ರೂಪದಲ್ಲಿ ಮೆಲುಕು ಹಾಕುತ್ತಾ ಸೃಷ್ಟಿ ರಹಸ್ಯದ ನಾನಾ ಮುಖಗಳನ್ನು ಪರಿಚಯಿಸುವ ಜವಾಬ್ದಾರಿ ಇದ್ದೇ ಇದೆ.

ಇಂಥ ಅಪರೂಪದ ಲೇಖಕರ ಸಾಲಿಗೆ ಸೇರುವವರು ಸೀತಾಕಾಂತ ಮಹಾಪಾತ್ರ. ಆಕ್ಟೇವಿಯೊ ಪಾಜ್‌ರಂಥ ರಾಯಭಾರಿಗೆ ಸೀತಾಕಾಂತ ಮಹಾಪಾತ್ರರಂಥ ಹಿರಿಯ ಐ.ಎ.ಎಸ್. ಅಧಿಕಾರಿಗೆ ಕಾವ್ಯ ಒಲಿಯುವ ಬಗೆ ಹೇಗೆ ಎಂದು ಕೇಳಿದರೆ ಉತ್ತರಿಸುವುದು ಸುಲಭವಲ್ಲ. ಇವರಿರುವಲ್ಲಿಗೇ ಕಾವ್ಯ

ಕನ್ನಿಕೆ ವಯ್ಯಾರದಿಂದ ಬಂದಳೆಂದು ನಂಬುವುದಕ್ಕಾಗುವುದಿಲ್ಲ. ಹಾಗೆ ನೋಡಿದರೆ ಕಾವ್ಯ ಯಾರಿಗೂ ಸರಾಗವಾಗಿ ಒಲಿದು ಬಂದ ಉದಾಹರಣೆ ಇಲ್ಲ. ಒಂದುವರೆ ಶತಮಾನಕ್ಕೆ ಮೊದಲೇ ಕೀಟ್ಸ್ ಹೇಳಿದ ಮಾತುಗಳನ್ನು ನಾವು ಮರೆಯುವುದಾದರೂ ಹೇಗೆ? "ಮರದಲ್ಲಿ ಎಲೆಗಳು ಮೂಡುವಷ್ಟು ಸಲೀಸಾಗಿ ನನ್ನಲ್ಲಿ ಕಾವ್ಯ ಮೈದಾಳದಿದ್ದರೆ ನನಗೆ ಕಾವ್ಯದ ಗೊಡವೆಯೇ ಬೇಡ" ಎಂದು ಕೀಟ್ಸ್ ಹೇಳಿರುವನಾದರೂ ಅವನ ಮಾತುಗಳ ಅಂತರಂಗವನ್ನು ಅರಿಯದಿದ್ದರೆ ತಪ್ಪಾದೀತು. ನೆಲದಾಳದ ಸತ್ವವನ್ನು ಬೇರುಗಳು ಹೀರಿಕೊಂಡು ಕಾಂಡದ ಮೂಲಕ ವೃಕ್ಷದ ಕೊಂಬೆ, ಟಿಸಿಲುಗಳಿಗೆ ಜೀವದ್ರವ ಸಂಚಾರವಾದಾಗಲೇ ಚಿಗುರು ನಗುವುದೆಂದು ಕೀಟ್ಸ್‌ಗೆ ಗೊತ್ತಿತ್ತು. ಮೇಲುನೋಟಕ್ಕೆ ಏನೂ ಆಗುತ್ತಿಲ್ಲವೆಂದು ತೋರಿದರೂ ಅಗೋಚರವಾಗಿ ಮಾಗುವ ಕ್ರಿಯೆ ನಡೆದೇ ಇರುತ್ತದೆ. ಈ ಕಾರಣದಿಂದಲೇ ವೃಕ್ಷದ ಮೈಮೇಲೆ ಎಲೆಗಳು ಏಳುವ ಹಾಗೆ ಕಾವ್ಯ ನನ್ನಲ್ಲಿ ಕಣ್ತೆರೆಯದಿದ್ದರೆ ಅದರ ಗೊಡವೆ ನನಗೆ ಬೇಡ ಎಂದ ಕವಿ. ಹಾಗೆ ಹೇಳುತ್ತಲೇ ಕಾವ್ಯ ಕರ್ಮ ನಿರೀಕ್ಷಿಸುವ ಬೆವರು ಬಸಿಯಲು ನಾನು ಸಿದ್ಧ ಎಂಬ ದೀಕ್ಷೆಗೂ ಬದ್ಧನಾಗುತ್ತಿರುವುದನ್ನು ನಾವು ಗಮನಿಸಬೇಕು. ಸೀತಾಕಾಂತ ಮಹಾಪಾತ್ರರು ಅಧಿಕಾರಶಾಹಿ ಒದಗಿಸಿದ ಸುಖದ ಸುಪ್ಪತ್ತಿಗೆಗೆ ಒಲಿದು ಮುಳುಗಿ ಹೋದವರಲ್ಲ. ತಮ್ಮ ಸ್ಥಾನಮಾನದಿಂದ ಪ್ರಾಪ್ತವಾದ ಸವಲತ್ತುಗಳನ್ನು ಉಪಯೋಗಿಸಿಕೊಂಡು ಒರಿಸ್ಸಾದ ಬುಡಕಟ್ಟು ಜನರ ಜೀವನ ವಿಧಾನವನ್ನು, ನೋವು ನಲಿವುಗಳನ್ನು ಕಾವ್ಯವಾಗಿಸಿದವರು. ಮೌಖಿಕ ಪರಂಪರೆಯಲ್ಲಿ ಹರಿದಿದ್ದ ಕಾವ್ಯವಾಹಿನಿಯನ್ನು ಶಿಷ್ಟ ನುಡಿಗಳ ಆಯಕಟ್ಟಿನಲ್ಲಿ ಹಿಡಿದಿಡುವಾಗಲೂ ಮೂಲ ಧಾಟಿ ಮುಕ್ಕಾಗದಂತೆ ಎಚ್ಚರ ವಹಿಸಿರುವುದು ಇವರ ಬೌದ್ಧಿಕ ಪ್ರಾಮಾಣಿಕತೆಗೆ ದ್ಯೋತಕ. ಬುಡಕಟ್ಟು ಜನಾಂಗದ ಬಗ್ಗೆ ಇವರಿಗೆ ಅಷ್ಟೊಂದು ಅಕ್ಕರೆ, ಗೌರವ ಮತ್ತು ಪೂಜ್ಯಭಾವನೆ.

ನಾಗರೀಕ ಜಗತ್ತಿನ ಧಾರ್ಷ್ಟ್ಯ, ಗತ್ತುಗಳನ್ನು ಗಂಟುಕಟ್ಟಿಟ್ಟು ಬುಡಕಟ್ಟು ಪ್ರಪಂಚವನ್ನು ಪ್ರವೇಶಿಸುವ ಮಹಾಪಾತ್ರರು ಅಲ್ಲಿನ ರೀತಿರಿವಾಜುಗಳನ್ನು ದಾಖಲಿಸುವಾಗ ಏಕಕಾಲದಲ್ಲಿ ಒಬ್ಬ ಸಂಶೋಧಕನ ವಸ್ತುನಿಷ್ಠತೆಯನ್ನೂ, ಒಬ್ಬ ಸೂಕ್ಷ್ಮ ಕವಿಯ ಅನುಕಂಪವನ್ನೂ ಪ್ರದರ್ಶಿಸಿ ಚಕಿತಗೊಳಿಸುತ್ತಾರೆ. ನಾಲ್ಕೂ ದಶಕಗಳ ದೀರ್ಘಕಾಲದ ತಮ್ಮ ಅಧ್ಯಯನದ ಕೇಂದ್ರವಾಗಿರುವ ಬುಡಕಟ್ಟು ಜನರ ಬಗ್ಗೆ, ನಾಗರೀಕ ಪ್ರಪಂಚಕ್ಕೆ ತಿಳಿದಿರದ ಆ ಲೋಕದ ಸಂಗತಿಗಳನ್ನು ತಿಳಿಸುವಾಗ ಸಮುದ್ರದಾಳಕ್ಕೆ ಮುಳುಗಿ ಎದ್ದವರು ತಾವು

ಕಂಡ ಜಲಾಂತರಂಗದ ವಿಸ್ಮಯಗಳನ್ನು ವಿವರಿಸುವಾಗ ಒದಗಿಸುವ ರೋಮಾಂಚನವನ್ನು ತರುತ್ತಾರೆ. ಪ್ರಾಯಶಃ ನಮ್ಮ ಅರಿವಿನ ಸೀಮೆಯನ್ನು ವಿಸ್ತರಿಸಲು ಹೆಣಗುವ ಪ್ರತಿಯೊಬ್ಬ ಶೋಧಕನೂ ಇದೇ ಬಗೆಯಾದ ಹೊಣೆ ಹೊತ್ತವನಾಗಿರುತ್ತಾನೆ. ಮಹಾಪಾತ್ರರು ಬಾನುಲಿಯಲ್ಲಿ ಮಾತನಾಡಲಿ, ಕಿರು ತೆರೆಯ ಮೇಲೆ ಕಾಣಿಸಿಕೊಳ್ಳಲಿ, ವೃತ್ತಪತ್ರಿಕೆಗಳ ಸಂದರ್ಶನಗಳ ಮೂಲಕ ದರ್ಶನ ಕೊಡಲಿ, ಎಲ್ಲ ಕ್ಷಣಗಳಲ್ಲೂ ಒಂದೇ ಬಗೆಯಾದ ಹುಮ್ಮಸ್ಸು, ತಿಳಿಸಿ ಹೇಳುವ ಉತ್ಕಟತೆ ಎದ್ದು ಕಾಣುತ್ತದೆ. ನೋಡಿದೇಟಿಗೆ ಸೆರೆ ಹಿಡಿಯುವ ರೂಪು ಇವರದಲ್ಲ; ಹಾಗಿರುವುದರಿಂದಲೋ ಏನೋ ಇವರ ವಾಣಿಯಲ್ಲಿ ಅಷ್ಟೊಂದು ಮಾರ್ದವತೆ, ಅನುಭವಕ್ಕೆ ಅಷ್ಟೊಂದು ಗಾಢತೆ ಇರುವುದು.

ಬಹಳ ಚಿಕ್ಕವರಾಗಿದ್ದಾಲೇ ಮಹಾಪಾತ್ರ ಕಾವ್ಯಕ್ಕೆ ಕಿವಿ ತೆರೆದು ಕುಳಿತ ವರು. ಚಿತ್ರೋತ್‌ಪ್ರೋಲಾ ನದಿಯ ದಂಡೆಯ ಮೇಲಿನ ಒಂದು ಪುಟ್ಟಗ್ರಾಮ ದಲ್ಲಿ ಇವರು ಹುಟ್ಟಿ ಬೆಳೆದವರು. ಭಕ್ತ ಜನಗಳ ಸಮೂಹಕ್ಕೆ ಗ್ರಾಮದ ರಸಿಕ ರೊಬ್ಬರು ಮಹಾಭಾರತ ಕಥೆಯನ್ನು ವಿವರಿಸಿ ಹೇಳುವಾಗ ಬಾಲಕ ಮಹಾಪಾತ್ರರಿಗೆ ಪುಳಕವಾದದ್ದೆಷ್ಟೋ ಬಾರಿ. ಅರ್ಧ ಶತಮಾನ ಕಳೆದ ನಂತರ ಸೀತಾಕಾಂತ ಮಹಾಪಾತ್ರರು ಸರ್ವಾಲಂಕೃತವಾದ ತಮ್ಮ ಕಛೇರಿಯಲ್ಲಿ (ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆಯಲ್ಲಿ ಅವರು ಹಿರಿಯ ಕಾರ್ಯದರ್ಶಿ) ಕುಳಿತು ನಾನಾ ಭಾಗಗಳಿಂದ ಬರುವ ಅಭಿನಂದನಾ ಕರೆಗೆ ದೂರವಾಣಿಯಲ್ಲಿ ಉತ್ತರಿಸುತ್ತಾರೆ. ನಾಡಿನ ಅತ್ಯಂತ ಶ್ರೇಷ್ಠ ಸಾಹಿತ್ಯ ಪ್ರಶಸ್ತಿಯನ್ನು ಗೆದ್ದಿರುವ ಇಂದು ತಮಗೇನನ್ನಿಸುತ್ತದೆ ಎಂದು ಕೇಳಿದರೆ ಅವರನ್ನುತ್ತಾರೆ: "ನನ್ನ ಮಟ್ಟಿಗೆ ಹೇಳುವುದಾದರೆ, ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸುವುದು ನಾನು ಭೇಟಿಯಾಗದ ಒಬ್ಬ ಅಗಂತುಕ ಕಾವ್ಯಪ್ರೇಮಿಯಿಂದ ಬಂದ ಪ್ರಶಂಸಾ ಪತ್ರದಷ್ಟೇ ತೂಕದ ಅನುಭವ. ವ್ಯತ್ಯಾಸವೇನೆಂದರೆ, ಈ ಪ್ರಶಸ್ತಿಯನ್ನು ಕೊಡುವವರು ಘನವಿದ್ವಾಂಸರು, ನನ್ನ ಕಾವ್ಯದಲ್ಲಿ ಏನೋ ವೈಶಿಷ್ಟ್ಯವಿದೆ ಯೆಂದು ಮೆಚ್ಚಿದವರು."

ಘನಪಂಡಿತರ ಪ್ರಶಂಸೆಯಾಗಲೀ ಅಥವಾ ಒಬ್ಬ ಆಗುಂತುಕ ಕವ್ಯಾಭ್ಯಾಸಿಯ ಮೆಚ್ಚಿಗೆಯಾಗಲೀ ಒಂದಂಶವನ್ನಂತೂ ಪ್ರಕಟಪಡಿಸುತ್ತವೆ: ಅದೇನೆಂದರೆ ಸೀತಾಕಾಂತರ ಕಾವ್ಯ ಯಶಸ್ವಿಯಾಗದೆ, ಗೆದ್ದಿದೆ. ಕಾವ್ಯದ ಕ್ರಿಯೆಯೇನೆಂದು ಕೇಳಿದರೆ ಅವರು ವಿಶದಪಡಿಸುವುದು ಹೀಗೆ: "ಒಂದು ಪದ್ಯ ಇತರರೊಡನೆ

ಮಾತಾಡಬೇಕು. ಸಂವಹನ ಬಹಳ ಮುಖ್ಯ. ಒಂದು ಪದ್ಯವನ್ನು ಬರೆದು ಮುಗಿಸಿದ ನಂತರ ಅದು ನಿರಂತರತೆಯ ಕಡೆ ಪ್ರಯಾಣ ಬೆಳೆಸುತ್ತದೆ; ಈ ಪ್ರಯಾಣದಲ್ಲಿ ಕಲ್ಪನೆಯ ಮಾರ್ಗವಾಗಿ ವಾಸ್ತವತೆಯ ಪುನರ್‌ನಿರ್ಮಾಣ ಮಾಡಿಕೊಂಡು ಸಮಗ್ರವಾಗಿ ಭಾವನೆಗಳನ್ನು ಒಳಗೊಳ್ಳುತ್ತಾ ಓದುಗನನ್ನು ಕವಿಯ ಜೊತೆ ಬೆಸೆಯುತ್ತದೆ."

ಕಾವ್ಯ ಸಂವಹನವನ್ನು ಸಾಧಿಸಬೇಕೆಂದು ಸೀತಾಕಾಂತರು ಹೇಳುತ್ತಾರಾದರೂ ಈ ಸಂವಹನ ಸುಲಭಸಾಧ್ಯವಲ್ಲವೆಂದು ಕೂಡ ಅವರಿಗೆ ಗೊತ್ತು. ಅವರೇ ತಿಳಿಸುವಂತೆ: "ಕಾವ್ಯದಲ್ಲಿಯಾದರೆ ಭಾಷೆ ಮಾಂತ್ರಿಕವಾಗಿ ಬಳಕೆಯಾಗುತ್ತದೆ. ಆದ ಕಾರಣ ಇದು ಭಾಷೆಯನ್ನು ಪಾರದರ್ಶಕವಾಗಿ ಬಳಸುವ ಕರ್ಮಕ್ಕೆ ಪಕ್ಕಾಗುವುದಿಲ್ಲ. ಭಾಷೆಯನ್ನು ನಾವು ತುಂಬಾ ಪಾರದರ್ಶಕವಾಗಿ ಬಳಸುವುದು ಘೋಷಣೆಗಳಲ್ಲಿ. ಅದಕ್ಕೆ ಅವು ತಟ್ಟನೆ ಅರ್ಥವಾಗುವುದು. ಆದರೆ ಪದ್ಯವೊಂದರಲ್ಲಿ ಭಾಷೆ ಪದರಪದರಗಳಲ್ಲಿ ಲೀನವಾಗಿರುತ್ತದೆ; ಪಾಶ್ವಿ‌ಕ ಪಾರದರ್ಶಕತೆಗೆ ಮಾತ್ರ ಇಲ್ಲಿ ಮಾನ್ಯತೆ."

ಶೀಘ್ರ ಸಂವಹನದ ಈ ಕಾಲದಲ್ಲಿ ಈ ಮಾತುಗಳು ಬಹಳ ಅರ್ಥ ಪಡೆದುಕೊಳ್ಳುತ್ತವೆ; ವಿದ್ಯುನ್ಮಾನ ಮಾಧ್ಯಮದ ಭರಾಟೆಯಲ್ಲಿ ಬರೆದ ಅಕ್ಷರದ ಮಹತ್ವ ಮಸುಳಿಸುವ ಸಂದರ್ಭದಲ್ಲಿ ಸೀತಾಕಾಂತರ ವಿಚಾರಗಳು ಮನನಯೋಗ್ಯವಾಗಿವೆ. ಮುಂದುವರಿದು ಅವರು ಹೇಳುತ್ತಾರೆ: "ಪದಗಳನ್ನು ಹೆಚ್ಚು ಪಾರದರ್ಶಕಗೊಳಿಸುವ ತುಡಿತ ಇಂದು ಎಲ್ಲೆಡೆಯೂ ಕಾಣುತ್ತಿದೆ. ಒಂದು ಪದಾರ್ಥವನ್ನೋ ಅಥವಾ ಒಂದು ಸಿದ್ಧಾಂತವನ್ನೋ ಮಾರಲು ಹವಣಿಸುವ ಕೃತ್ರಿಮವಾದ ಪಾರದರ್ಶಕತೆ ಇದು. ಆಲೋಚನೆ ಮತ್ತು ಕಲ್ಪನೆಯ ಸ್ಥಾನವನ್ನು ಕಸಿದುಕೊಂಡು ನಮ್ಮ ಭಾವನೆಗಳನ್ನೇ ವಿಕೃತಗೊಳಿಸುವಂಥ ಹುನ್ನಾರು ಇದು. ಆದರೆ ಒಂದು ಒಳ್ಳೆಯ ಪದ್ಯದಿಂದ ಓದುಗನಿಗೆ ತಿಳಿಯುವುದೇನೆಂದರೆ ಕವಿಯ ಭಾವನೆ ಎಂದೂ ಅನನ್ಯ ಹಾಗೆಯೇ ಸಾರ್ವಕಾಲಿಕ."

ಮಹಾಪಾತ್ರರ ಕವನಗಳಲ್ಲಿ ಚರಿತ್ರೆ ಮತ್ತು ಪುರಾಣಗಳ ಅನುರಣನೆ ನಿರಂತರವಾಗಿ ಕೇಳಿ ಬರುತ್ತದೆ. ದೈನಂದಿನ ಸುಖ ದುಃಖವನ್ನು ಬದುಕಿನ ಗುರಿಯೊಡನೆ ಬೆಸೆಯುವಷ್ಟು ವೈಶಾಲ್ಯಕ್ಕೆ, ಕ್ಷಣವನ್ನು ಚರಿತ್ರೆಗೆ ತಳುಕು ಹಾಕುವಷ್ಟು ವ್ಯಾಪ್ತಿಗೆ ಚಾಚುವ ಈ ಕವನಗಳಲ್ಲಿ ಗೇಯ ಗುಣವಿದ್ದೇ ಇದೆ. ಅಜ್ಜಿಯ ಶವಸಂಸ್ಕಾರಕ್ಕಾಗಿ ಹುಟ್ಟಿದೂರಿಗೆ ಹೋಗುವ ನಿರೂಪಕ ನೆನೆಯು

ತಾನೆ: "ನಮ್ಮ ಊರಿಗೆ ಯಮನೂ ತಡವಾಗಿ ಬರುತ್ತಾನೆಂದು ಅವಳು ಹೇಳುತ್ತಿದ್ದಳು ಆದರೆ ಅವನು ಬಂದೇ ಬಂದಿದ್ದ

ಒಳಮನೆಗೆ ನಡೆದು ಬಿಳಿ ಬಟ್ಟೆಯನ್ನು ಎತ್ತಿ। ಚರಿತ್ರೆಯ ಮುಖವನ್ನು ದಿಟ್ಟಿಸಿ ನೋಡಿದೆ."

"ಅಜ್ಜಿ". "ಕೃಷ್ಣನ ಸಾವು" ಎಂಬ ಪದ್ಯದಲ್ಲಿ ಸ್ವಂತ ದುಃಖವು ಲೋಕದ ದುಃಖದಿಂದ ಢಾಳಾಗಿ ಎದ್ದು ಕಾಣುತ್ತದೆ. ಜರನ ಬಾಣಕ್ಕೆ ಈಡಾಗಿ ಜಗತ್ತನ್ನು ಸೃಷ್ಟಿಸಿದ ಕೃಷ್ಣ ಅಸುನೀಗಿದಾಗ, "ಕದ್ದು ತಿಂದ ಚಿಟುಕಿ ಮಣ್ಣು ಇನ್ನೂ ಹಾಗೇ ಇದೆ ಬಾಯಲ್ಲಿ। ಕದ್ದ ಬೆಣ್ಣೆ। ಬೆಳದಿಂಗಳಲ್ಲಾಡಿದ ಪ್ರೇಮದಾಟ। ಯಮುನಾತೀರದಲ್ಲಿ ತೋರಿದ ಥರಥರದ ಚಮತ್ಕಾರ।" ಆದರೆ ಜೀವನ ನಡೆಯಬೇಕು ತಾನೆ? "ವೃತ್ತ ಪತ್ರಿಕೆಗಳಲ್ಲಿ ಅಚ್ಚಾದುವು ಆತುರಾತುರವಾಗಿ ಶ್ರದ್ಧಾಂಜಲಿ। ಅವಗಡದ ಅಕಾಲಿಕ ಸಾವುಗಳು। ತೇವಾದ ಸ್ಥಳವನ್ನು ತುಂಬಲಾಗದ ಕಷ್ಟ। ಆದಾಗ್ಯೂ ಇನ್ನು ಮೇಲೆ। ಗಂಡಂದಿರು ನೆಮ್ಮದಿಯಿಂದ ನಿದ್ರಿಸುತ್ತಾರೆ...."ಕವಿಯ ಪ್ರಾರ್ಥನೆ ಮಾತ್ರ ಇಷ್ಟು: "ಪ್ರತಿಯುಗದಲ್ಲೂ ನನ್ನ ಶರ ನಿನ್ನ ಶರೀರದಿಂದ ಬಿಡುಗಡೆಗೊಳಿಸಲಿ। ಹಾಗೆಯೇ ನಿನ್ನ ವಂಚನೆಯಿಂದಲೂ ಕೂಡ। ಯುಗಯುಗಳುದ್ದಕ್ಕೂ ನಾ ರೋದಿಸುವೆನಾಗಿ...."

ಕಾವ್ಯಕ್ಕೆ ಪುರಾಣದ ಆವರಣವನ್ನು ಮಹಾಪಾತ್ರರು ಆಗಾಗ್ಗೆ ಹೊಂದಿಸುವ ಪರಿಪಾಠವೇಕೆಂದರೆ, ಪ್ರತ್ಯೇಕವಾದದ್ದಕ್ಕೆ ಸಾರ್ವಕಾಲಿಕತೆಯ ಹರಹನ್ನು ಕಲ್ಪಿಸಿ ಅಂತಿಮವಾಗಿ ಸಾಧಾರಣ ಬದುಕಿಗೆ ವಿಶಾಲವಾದ ಪರಿಪ್ರೇಕ್ಷವನ್ನು ಒದಗಿಸುವುದು ಅವರ ಸೃಷ್ಟಿಕಾರ್ಯದ ಅನವರತದ ವಿಧಾನವಾಗಿದೆ. ಕವಿಯ ಮಾತಿನಲ್ಲಿ ದಾಖಲಿಸುವುದಾದರೆ: "ಆಧುನಿಕ ಬದುಕಿನ ಅರ್ಥವನ್ನು ನಾನು ಕಂಡುಕೊಳ್ಳುವುದು ಕಳೆದುಹೋದದ್ದರ ಮೂಲಕವಾಗಿ. ನನ್ನ ದೃಷ್ಟಿಯಲ್ಲಿ ಒಬ್ಬ ಕವಿಯು ಸೃಜನಾತ್ಮಕತೆಯ ಅಂತಿಮ ಸೀಮೆಯನ್ನು ತಲುಪುವುದು ಅವನು ಯಾವುದಾದರೂ ಒಂದು ಅನುಭವವನ್ನು ಅದು ಲಕ್ಷ್ಯದಿಂದ ಚಲಿಸದಂತೆ ಉಡ ಹಿಡಿದ ಹಾಗೆ ಹಿಡಿಯುವ ಮೂಲಕವಾಗಿ. ಆಗ ಆ ಅನುಭವ ಅವನಿಗೆ ಅಂಗೈನೆಲ್ಲಿಯ ಹಾಗೆ ಸ್ಪಷ್ಟವಾಗುತ್ತದೆ. ಯಾವ ಅನುಭವವೂ ಸ್ಪಷ್ಟವಾಗಿ ಒಮ್ಮೆಗೇ ಮೈದಾಳಿಬಿಡುವುದಿಲ್ಲ. ಮಿಂಚಿ ಮಾಯವಾಗುವ ಜಾತಕವೇ ಅನುಭವಗಳದ್ದು." ಹೀಗೆ ಮಿಂಚಿ ಮಾಯವಾಗುವ ಕ್ಷಣಿಕವಾದ ಅನುಭವಗಳಿಗೆ ಬಲೆಯೊಡ್ಡಿ ಕುಳಿತು ಅವುಗಳನ್ನು ಶಾಶ್ವತತೆಯ ಎರಕದಲ್ಲಿ ಹೊಯ್ದು ನಿರಂತರತೆಯಲ್ಲಿ ತೇಲಿಬಿಡುವ ಕ್ರಿಯೆಯನ್ನು ಮಹಾಪಾತ್ರರು

ಮಾಡುತ್ತಾರೆ. "ಒಂದು ವೃಕ್ಷದಲ್ಲಿ ಅಥವಾ ಒಂದು ಶಿಲೆಯಲ್ಲಿ, ಯಾರಾದರೂ ಅವುಗಳ ಆತ್ಮವೆಲ್ಲಿದೆ ಎಂದು ಹುಡುಕಿದರೆ ಪ್ರಾಯಶಃ ಅವುಗಳ ಕಥೆ ನಮಗೆ ದಕ್ಕಬಹುದು. ಭೌತಿಕವಾದದ್ದರಲ್ಲಿ ಅದಿಭೌತಿಕವಾದದ್ದನ್ನು ಅರಸುವ ಕ್ರಮವೇ ಇದು."

ನಿಸರ್ಗದ ನಾನಾ ಮುಖಗಳನ್ನೂ, ಗ್ರಾಮ ಜೀವನದ ಸೊಬಗನ್ನೂ ವೈವಿಧ್ಯಮಯವಾಗಿ ಸೆರೆ ಹಿಡಿದಿರುವ ಮಹಾಪಾತ್ರರು ಭೂಮಿ ಮತ್ತು ಆಕಾಶಗಳ ಅನಂತ ಸೌಂದರ್ಯವನ್ನು ನೋಡಿ ದಣಿಯದ ಕವಿ. ಭೂಮ ವಾದುಪಕ್ಕೆ ಬಾಯಿ ಕೊಡುವಂತೆಯೇ ವ್ಯಕ್ತಿ ನೆಲೆಯ ನೋವು ನಲಿವುಗಳನ್ನು ನುಡಿಯಲ್ಲಿ ಕಂಡರಿಸಿದ್ದಾರೆ. ಏಕೆಂದರೆ, "ಕಾಲ ಮತ್ತು ಕಾಲದ ಚಲನೆಯನ್ನು ಹಿಡಿದಿಡುವುವು ಪದಗಳೇ; ಪ್ರೇಮವನ್ನು, ಆತಂಕವನ್ನು ಅರ್ಥ ಮೂಡಿಸುವುವು ಪದಗಳೇ, ಹಾಗೆಯೇ ಸಾವನ್ನೂ ಅದರ ಗಾಂಭೀರ್ಯವನ್ನೂ ಬಿಂಬಿಸುವಂಥವು ಪದಗಳೇ." ಈ ಕವಿಗೆ "ಪದವೆಂಬುದು ಬರೀ ಸೌಂಜ್ಞೆಯಲ್ಲ, ಹಾವಭಾವವಲ್ಲ ಅದು ವಾಸ್ತವತೆಯನ್ನು ಸಮಸ್ತ ವರ್ಣಗಳಲ್ಲಿ ಸಂಕೀರ್ಣವಾಗಿ ಪಡಿಮೂಡಿಸುವ ಮಾನವನ ಆತ್ಮವೇ."

ಪದಗಳೊಂದಿಗೆ ಹದವಾಗಿ ನುಡಿಯುತ್ತಾ ಬಂದ ಕವಿ ಆಧುನಿಕ ಬದುಕಿನ ಮಾಯಾ ಲೋಕವನ್ನು ಅರಿಯುವಲ್ಲಿ ಸೆಣಸಾಡಿದವರು. ಅವರ ಕವನ ಸಂಕಲನಗಳ ಹೆಸರುಗಳೇ ಅವರ ಈ ಬಗೆಯ ಸೂಕ್ಷ್ಮ ಸಮರಕ್ಕೆ ಸಾಕ್ಷಿಯಾಗಿವೆ. 'ಮೌನ ಹಿಂಸೆ' ("ಕ್ವಯಿಟ್ ವಯಲೆನ್ಸ್"), 'ಕರೆಮೊಯ್ಯುವ ಶೂನ್ಯದೂರ' ("ದಿ ಎಮ್ಟಿ ಡಿಸ್ಟೆನ್ಸ್ ಕ್ಯಾರೀಸ್"), 'ಆ ಇನ್ನೊಂದು ಮೌನ' ("ದ ಅದರ್ ಸೈಲೆನ್ಸ್"), 'ಮರದ ಕತ್ತಿ' ("ದ ವುಡನ್ ಸ್ವಾರ್ಡ್"), 'ಎಲ್ಲಿಯೂ ನಿಲ್ಲದೆ' ("ಸ್ಟೇಯಿಂಗ್ ಇನ್ ನೋವೇರ್"), 'ಅರ್ಥದ ಹಾದಿ' ("ದ ಕರ್ವ್ ಆಫ್ ಮೀನಿಂಗ್"), 'ಬರಿಗಾಲಲ್ಲಿ ವಾಸ್ತವಕ್ಕೆ' ("ಬೇರ್‌ಫುಟ್ ಇನ್‌ಟು ರಿಯಾಲಿಟಿ"), 'ಆಪ್ತತೆಯ ಹಾವಭಾವ' ("ಜೆಸ್ಚರ್ಸ್ ಆಫ್ ಇನ್‌ಟಿಮಸಿ"), 'ಬೇಸಗೆಯಲ್ಲಿ ವೃದ್ಧ' ("ಓಲ್ಡ್ ಮ್ಯಾನ್ ಇನ್ ಸಮ್ಮರ್"), 'ವೃಷ್ಟಿಯ ಹಗಲು' ("ಎ ಮಾರ್ನಿಂಗ್ ಆಫ್ ರೇನ್"), 'ಕೃಷ್ಣನ ಸಾವು' ("ಡೆತ್ ಆಫ್ ಕೃಷ್ಣ") ಇವು ಇಂಗ್ಲಿಷ್ ಭಾಷೆಯಲ್ಲಿ ರಚಿತವಾದ ಕವನ ಸಂಕಲನಗಳಾದರೆ ಒರಿಯಾ ಭಾಷೆಯಲ್ಲಿ ಬರೆದ ಸಂಕಲನಗಳು ಈ ರೀತಿ ಇವೆ: 'ದೀಪ್ತಿ ಓ ದ್ಯುತಿ' ("ಹೊಳಪು ಮತ್ತು ಬೆಳಕು"), 'ಅಷ್ಟಪದಿ, ಸಬ್ದರ ಆಕಾಶ್' ("ಅಕ್ಷರಗಳ ಆಕಾಶ್"), 'ಸಮುದ್ರ, ಚಿತ್ರನದಿ, ಭಿನ್ನ ಆಕಾಶ್, ಭಿನ್ನ ದೀಪ್ತಿ, ನಿಃಸಂಗ ಮನಿಷ ಇತ್ಯಾದಿ.

ಮಹಾಪಾತ್ರರು ಒರಿಯಾ ಭಾಷೆಯಲ್ಲಿ ಬರೆದ ಕವನಗಳನ್ನು ಭಾರತೀಯ ಭಾಷೆಗಳಿಗೆ ಅನುವಾದ ಮಾಡಲಾಗಿದೆ; ಯೂರೋಪಿಯನ್ ಭಾಷೆಗೂ ಅನುವಾದಗೊಂಡಿವೆ. ಮೂಲಭೂತವಾಗಿ ಕವಿಯೆಂದು ಅವರು ಪ್ರಸಿದ್ಧರಾಗಿರುವರಾದರೂ ಅವರು ಸಾಹಿತ್ಯ ವಿಮರ್ಶೆ, ಸಾಮಾಜಿಕ ಚಿಂತನೆ ಮತ್ತು ಕಲಾ ವಿಮರ್ಶೆಗೆ ಸಂಬಂಧಿಸಿದ ಗ್ರಂಥಗಳನ್ನೂ ರಚಿಸಿದ್ದಾರೆ. "ಪದದಿಂದ ಆಚೆ : ಪರಂಪರೆಯ ವಿವಿಧ ಭಾವ" (೧೯೭೩) ಎಂಬ ಅವರ ಇತ್ತೀಚಿನ ಗ್ರಂಥದಲ್ಲಿ ಸೌಂದರ್ಯ ಮೀಮಾಂಸೆ, ಸಂಸ್ಕೃತಿ ಮತ್ತು ಸಾಮಾಜಿಕ ಮಾನವಶಾಸ್ತ್ರಕ್ಕೆ ಸಂಬಂಧಿಸಿದಂಥ ಗಂಭೀರವಾದ ಲೇಖನಗಳಿವೆ. ಅವರ ಮೊದಲನೆಯ ಕವನ ಸಂಕಲನ "ದೀಪ್ತಿ, ಓ ದ್ಯುತಿ" ೧೯೬೩ರಲ್ಲಿ ಪ್ರಕಟವಾದ ನಂತರ, ಈಗಾಗಲೇ ಪಟ್ಟಿ ಮಾಡಿರುವಂತೆ, ನಿರಂತರವಾಗಿ ಕವನ ಸಂಕಲನಗಳು ಒಂದಾದ ಮೇಲೊಂದರಂತೆ ಬೆಳಕು ಕಂಡಿವೆ. ಸುದೈವದಿಂದ ಸೀತಾಕಾಂತರ ಕಾವ್ಯದ ಹಿರಿಮೆಯನ್ನು ಸಕಾಲದಲ್ಲಿ ಗಮನಿಸಿದ ವಿಮರ್ಶಕರು ಮುಕ್ತಕಂಠದಿಂದ ಹೊಗಳಿದ್ದಾರೆ. ಅನೇಕ ಪ್ರಶಸ್ತಿಗಳೂ ಅವರಿಗೆ ಲಭಿಸಿವೆ. ಅವರ ಸಾಧನೆಗೆ ಕಳಶಪ್ರಾಯವಾಗಿ ಈಗ ಜ್ಞಾನಪೀಠ ಪ್ರಶಸ್ತಿ ಸಂದಿದೆ.

ಗ್ರಾಮಜೀವನವನ್ನು ಕಾವ್ಯದಲ್ಲಿ ಅವರು ಅಷ್ಟು ಸಮರ್ಥವಾಗಿ ಹಿಡಿದಿಡಲು ಸಾಧ್ಯವಾದದ್ದು ಒರಿಸ್ಸಾದ ತೀರದ ಒಂದು ಗ್ರಾಮದಲ್ಲಿ ಅವರು ಹುಟ್ಟಿ ಬೆಳೆದದ್ದರಿಂದ. "ಅಜ್ಜಿ" ಕವನದ ಕೊನೆಯ ಸಾಲುಗಳು ಇದನ್ನೇ ಸ್ಪಷ್ಟಪಡಿಸುತ್ತವೆ: "ಒಳಮನೆಗೆ ಹೋಗಿ ಬಿಳಿಬಟ್ಟೆಯನ್ನು ಮೇಲೆತ್ತಿದೆ। ಚರಿತ್ರೆಯ ಮುಖದರ್ಶನವಾಯಿತು। ಆಕಾಶದಷ್ಟು ಅಗಲ। ಭೂಮಿಯ ಹಾಗೆ ಮೂಕ। ಮತ್ತೊಮ್ಮೆ ಮೌನ ನಿಟ್ಟುಸಿರೆಳೆಯಿತು। ಇರುಳ ಮರೆಯಲ್ಲಿ ಮಿಡತೆಗಳು, ಬಿದಿರುಮೆಳೆಗಳಲ್ಲಿ ಮಿಂಚುಹುಳುಗಳು। ಆಕಾಶದಲ್ಲೊಂದಷ್ಟು ಅಲಂಕೃತ ಚುಕ್ಕೆಗಳು। ಮರಳಿ ಹೊರಳಿದ್ದವು ಮೊದಲಿನ ಹಾಗೆ। ಇಲ್ಲಿ ಸಗಣಿ ಸಾರಿಸಿದ ಗೋಡೆಯ ಮೇಲೆ ಅಸಂತುಷ್ಟ ನೆರಳುಗಳು ನರ್ತಿಸಿದ್ದವು।" ಗ್ರಾಮಾಂತರ ಒರಿಸ್ಸಾದ ಮಾಂತ್ರಿಕ ಲಯಗಳನ್ನು ಇದೇ ಪ್ರಕಾರವಾಗಿ "ಪೂರ್ವ", "ನಿಮ್ಮ ಊರು", "ವೃಷ್ಟಿ ಹಗಲು", "ರೈತ", "ನಮ್ಮ ಊರು", "ಗ್ರಾಮದ ಸ್ಮಶಾನ" ಮುಂತಾದ ಕವನಗಳಲ್ಲಿ ಕೇಳಿಸುತ್ತಾರೆ.

ತಮ್ಮ ಕವನಗಳನ್ನು ತಾವೇ ಇಂಗ್ಲೀಷಿಗೆ ಅತ್ಯಂತ ಸಮರ್ಪಕವಾಗಿ ಭಾಷಾಂತರಿಸಿದ್ದಾರೆ. ಬದುಕಿನ ಅರ್ಥಗಳನ್ನು ಪದಗಳಲ್ಲೇ ಸೆರೆಹಿಡಿಯಬೇಕೆಂದು ಅವರು ನಂಬಿರುವುದರಿಂದ ಎರಡು ಭಾಷೆಗಳಲ್ಲಿ ಸಲೀಸಾಗಿ ಸೃಜನಾತ್ಮಕತೆ

ಯನ್ನು ಪ್ರದರ್ಶಿಸುವುದು ಅಸಾಧ್ಯವೆಂದೇ ತೀರ್ಮಾನಿಸುತ್ತಾರೆ. "ಪದಗಳ ಮೂಲಕವೇ ಪರಮಾತ್ಮನ ದರ್ಶನ" ಎಂಬುದು ಸೀತಾಕಾಂತರ ಒಂದು ಪ್ರಸಿದ್ಧ ನುಡಿ. ಒಂದು ಘಟ್ಟದಲ್ಲಿ ಟಿ. ಎಸ್. ಎಲಿಯಟ್ ಕೂಡ ಫ್ರೆಂಚ್ ಭಾಷೆಯಲ್ಲಿ ಪದ್ಯ ಬರೆಯುತ್ತಿದ್ದನಂತೆ. ಈ ವ್ಯಾಪಾರದ ಖಾಲಿತನ ಅರಿವಾದಾಗ ಎಲಿಯಟ್ ಈ ರೀತಿ ಬರೆಯುತ್ತಾನೆ: "ಒಬ್ಬ ಕವಿ ಎರಡು ಭಾಷೆಗಳಲ್ಲಿ ಉನ್ನತವಾದ ಕಾವ್ಯವನ್ನು ಅಷ್ಟೇ ಏಕೆ, ಸುಮಾರಾಗಿರುವ ಕಾವ್ಯವನ್ನು ಬರೆದ ಉದಾಹರಣೆ ನನ್ನ ಗಮನಕ್ಕೆ ಬಂದಿಲ್ಲ". ಸೀತಾಕಾಂತ ಮಹಾಪಾತ್ರರು ಟಿ. ಎಸ್. ಎಲಿಯಟ್‌ನ ಈ ಮಾತುಗಳನ್ನು ನೆನೆದು ಇದೇ ನಿಜವಾದ ತಿಳಿವಳಿಕೆ ಎಂದು ಹೇಳುತ್ತಾರೆ. ಕಾವ್ಯಲೋಕದಲ್ಲಿ ಅನನ್ಯ ಸಾಧನೆ ಮಾಡಿ ಜ್ಞಾನಪೀಠ ಪ್ರಶಸ್ತಿ ಗಳಿಸಿರುವ ಮಹಾಪಾತ್ರರ ಮಾದರಿ ಯುವ ಜನಾಂಗಕ್ಕೆ ಕಣ್ತೆರೆಸುವಂತಿದೆ. ಎರಡು ದೋಣಿಯಲ್ಲಿ ಕಾಲು ಹಾಕಿಯೂ ಯಶಸ್ಸು ಗಳಿಸಬಹುದೆಂಬ ಹುಸಿ ಗರ್ವ ತೋರುವವರಿಗೆ ಮಾತೃಭಾಷೆಯ ಮಹತ್ವವನ್ನು ಅರಿಯುವ ವ್ಯವಧಾನ ಇರುವುದಿಲ್ಲ. ಅಂಥ ಸಂದರ್ಭಗಳಲ್ಲಿ ನಾವು ಸೀತಾಕಾಂತರ ಮಾತುಗಳನ್ನು ನೆನೆಯಬೇಕು. ವಸಾಹತೋತ್ತರ ಪರ್ವಕಾಲದಲ್ಲಿ ಲೇಖಕನ ಸಾಮಾಜಿಕ ಜವಾಬ್ದಾರಿಗಳನ್ನು ತಿಳಿಸಲು ಮುಂದಾಗಿರುವ ಆಫ್ರಿಕನ್ ಬರಹಗಾರರ ಮಾರ್ಗ ವನ್ನು ತಿಳಿಯಬೇಕು. ಒಮ್ಮೆ ಇಂಗ್ಲೀಷಿಗೆ ಮಾರು ಹೋಗಿದ್ದವರು ಈಗ ಮತ್ತೆ ತಮ್ಮ ತಮ್ಮ ಮಾತೃಭಾಷೆಗಳಲ್ಲಿ ಸಾಹಿತ್ಯ ಸೃಷ್ಟಿ ಮಾಡತೊಡಗಿ ದ್ದಾರೆ. "ಮನಸ್ಸಿನ ನಿರ್ವಸಾಹತೀಕರಣಕ್ಕೆ ಇದೊಂದೇ ಮದ್ದೆಂದು" ಅವರು ಒಕ್ಕೊರಲಿನಲ್ಲಿ ಹೇಳುತ್ತಿದ್ದಾರೆ. ತಮ್ಮ ನೆಲದ ಹಾಡನ್ನು ತಾವೇ ಹಾಡ ಬೇಕೆಂದು ಹೊರಡುವವರಿಗೆಲ್ಲಾ ಅಪಜಯವೆಂಬುದಿಲ್ಲ. ಬೇರೊಬ್ಬರು ದಾಖಲು ಮಾಡುತ್ತಾರೆಂದು ಐ.ಎ.ಎಸ್‌ನ ಐಷಾರಾಮದ ಜಡಬದುಕಿಗೆ ಬಲಿಯಾಗದೆ ಅರಿವಿನಾಚೆ ಪವಡಿಸಿದ್ದ ಬುಡಕಟ್ಟು ಪ್ರಪಂಚವನ್ನು "ಮುಖ್ಯ ಪ್ರವಾಹದ" ಮಂದಿಗಾಗಿ ಅನಾವರಣಗೊಳಿಸಿದ ಕೀರ್ತಿ, ಗೌರವಗಳು ಮಹಾಪಾತ್ರರಿಗೆ ಸಲ್ಲಬೇಕು.

ಹೊಸ ತಲೆಮಾರಿನ ಉಪಮನ್ಯು ಚಟರ್ಜಿಯಂಥ ಐ.ಎ.ಎಸ್. ಅಧಿಕಾರಿ ಗಳು, ವಿಕ್ರಮ್ ಸೇಠ್, ಅಮಿತವ್ ಘೋಷ್‌ರಂಥ ಉತ್ಸಾಹೀ ಅನ್ವೇಷಕರು ತಮ್ಮ ಅನುಭವಗಳನ್ನು ಸೃಜನಾತ್ಮಕವಾಗಿ ದಾಖಲುಗೊಳಿಸುತ್ತಿರುವರಾದರೂ ಅವರ ಕಾಲುಗಳು ಸೀತಾಕಾಂತ ಮಹಾಪಾತ್ರರ ಹಾಗೆ ಈ ನೆಲದ ಪರಂಪರೆ ಯಲ್ಲಿ ಭದ್ರವಾಗಿ ನಿಂತವಲ್ಲ. ಹರಿವ ಪ್ರವಾಹದಲ್ಲಿ ತೇಲುತ್ತಾ ಅಷ್ಟಿಷ್ಟು

ಸಾಮಗ್ರಿಯನ್ನು ಹಸಿಬೆಗೆ ಹಾಕಿಕೊಂಡು ತಮ್ಮ ಸಾಮರ್ಥ್ಯಕ್ಕಿಂತ ಅನೇಕ ಪಟ್ಟು 'ಅರ್ಥ ಸಂಚಯ'ಕ್ಕೆ ತೊಡಗಿರುವವರು. ಒಂದು ಹಳೆಯ ಪ್ರತಿಮೆಯನ್ನೇ ಮೆಲುಕು ಹಾಕಿ ಹೇಳುವುದಾದರೆ ಸೀತಾಕಾಂತರಂಥ ಹಿರಿಯ ಕವಿಗಳು ಹರಿದು ಹೋಗುವ ಈ ಪ್ರವಾಹದ ಮಧ್ಯೆ ಬಂಡೆಯಾಗಿ ಕುಳಿತಿರುವವರು. "ವೃಕ್ಷದ, ಶಿಲೆಯ ಆತ್ಮವನ್ನರಿತರೆ ಸಾಕು ಎಷ್ಟೊಂದು ಸಂಗತಿಗಳು ಸಿಕ್ಕುತ್ತವೆ" ಎಂದು ಕವಿ ತಿಳಿಸಿದ್ದನ್ನೇ ನೆನೆಯುವುದಾದರೆ ವರ್ತಮಾನದ ಸಂಕೀರ್ಣತೆಯ ಮಧ್ಯೆ ತಿಳಿಗೊಳಿಸುವ ಅರ್ಥವನ್ನು ದಕ್ಕಿಸಿಕೊಳ್ಳಲು ಕವಿ ಇರುವಲ್ಲಿಗೆ ನಾವು ತೆರಳಬೇಕು. ಏಕೆಂದರೆ, "ತಲೆ ತಗ್ಗಿಸಿ ಪ್ರಾರ್ಥನೆಗೆ ಕುಳಿತ । ಕವಿ ಆಲಿಸುತ್ತಾನೆ ಮೌನದಲ್ಲಿ । ಪದಗಳು ಪದ್ಯವಾಗುವಲ್ಲಿ".

ಐವತ್ತಾರರ ಹರಯದ ಈ ಕವಿ ಭಾರತೀಯ ಕಾವ್ಯಕ್ಷೇತ್ರವನ್ನು ಇನ್ನಷ್ಟು ಸಮೃದ್ಧಿಗೊಳಿಸಲು ನೂರ್ಕಾಲ ಬಾಳಲಿ ಎಂದು ಹಾರೈಸೋಣ.

ಸಿ. ನಾಗಣ್ಣ



ಜಗತ್ತಿನಲ್ಲಿ ಎಲ್ಲವದಲ್ಲೂ ಅಂಜಿಕೆ ತುಂಬಿದೆ. ಆದರೆ ಅಂಜಿಕೆಯಿಲ್ಲದ ವಿಷಯವೊಂದಿದೆ. ಅದೇ ವೈರಾಗ್ಯ.

—ಭರ್ತೃಹರಿ

ಓದಿದವ ದೊಡ್ಡವನಾಗಬಲ್ಲ

ಓದಿದವ ಬುದ್ಧಿವಂತನಾಗುತ್ತಾನೆ, ಬುದ್ಧಿವಂತ ದೊಡ್ಡವನಾಗುತ್ತಾನೆ ಎಂಬುದಕ್ಕೆ ಅಮೆರಿಕದ ಹಿಂದಿನ ಇಬ್ಬರು ಅಧ್ಯಕ್ಷರ ಹೆಸರನ್ನು ನಿದರ್ಶನವಾಗಿ ನೀಡಬಹುದು. ಥಾಮಸ್ ಜಫರ್‌ಸನ್ ಮತ್ತು ಏಬ್ರಹಾಂ ಲಿಂಕನ್ ಅವರೇ ಆ ಹೆಸರುಗಳು. ಒಬ್ಬ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಶ್ರಮಿಸಿ, ಸ್ವಾತಂತ್ರ್ಯ ಮಂತ್ರವನ್ನು ರಚಿಸಿದವನು ; ಮತ್ತೊಬ್ಬ ಅಂತರ್ಯುದ್ಧ ನಡೆದಾಗ, ರಾಷ್ಟ್ರದ ಐಕ್ಯವನ್ನು ರಕ್ಷಿಸಿದವನು. ಬಾಲ್ಯದಲ್ಲಿಯೇ ಒಬ್ಬ ತಂದೆಯನ್ನು ಕಳೆದು ಕೊಂಡರೆ, ಮತ್ತೊಬ್ಬ ತಾಯಿಯನ್ನು ಕಳೆದುಕೊಳ್ಳುತ್ತಾನೆ. ಇಪ್ಪತ್ತೈದು ವರ್ಷದವರಿದ್ದಾಗಲೇ ಇಬ್ಬರೂ ಶಾಸನಸಭೆಯನ್ನು ಪ್ರವೇಶಿಸುತ್ತಾರೆ.

ಆದರೆ ಜಫರ್‌ಸನ್ ಶ್ರೀಮಂತ ಮನೆತನದಲ್ಲಿ ಹುಟ್ಟಿದರೆ, ಲಿಂಕನ್ ಬಡತನದ ಮನೆಯಲ್ಲಿ ಹುಟ್ಟುತ್ತಾನೆ. ಅದರಿಂದಾಗಿ ಜಫರ್‌ಸನ್‌ನಿಗೆ ಉತ್ತಮ ಶಿಕ್ಷಣ ದೊರೆಯುತ್ತದೆ ; ಲ್ಯಾಟಿನ್ ಫ್ರೆಂಚ್ ಮೊದಲಾದ ಭಾಷೆಗಳನ್ನು ಕಲಿಯುವ ಅವಕಾಶ ದೊರೆಯುತ್ತದೆ. ಲಿಂಕನ್ ನಿರಕ್ಷರಿಗಳ ಮಗನಾದ್ದ ರಿಂದ, ಔಪಚಾರಿಕ ಶಿಕ್ಷಣದ ಅವಕಾಶವಿಲ್ಲದೆ, ಸ್ವಯಂ ಶಿಕ್ಷಣಕ್ಕೆ ಜೋತು ಬೀಳಬೇಕಾಗುತ್ತದೆ. ಇಬ್ಬರೂ ಬಾಲ್ಯದಲ್ಲಿ ಕಾಲ ಕಳೆಯದೆ, ಹದಿನೈದು ಗಂಟೆ ಓದುತ್ತಾರೆ. ಭಾಷೆಯನ್ನು ಚೆನ್ನಾಗಿ ಕಲಿಯಬೇಕೆಂಬ ಛಲದಿಂದ ವ್ಯಾಕರಣದಲ್ಲಿ ಸಿದ್ಧಿಯನ್ನು ಪಡೆಯುತ್ತಾರೆ. ಜಫರ್‌ಸನ್ ಎಲ್ಲಿ ಹೋದರೂ ಅವನ ಕೈಯಲ್ಲಿ ಗ್ರೀಕ್ ವ್ಯಾಕರಣ ಇದ್ದೇ ಇರುತ್ತದೆ. ಇಬ್ಬರಲ್ಲೂ ಓದುವ ಹಸಿವು ದಿನೇ ದಿನೇ ಹೆಚ್ಚುತ್ತದೆ.

ಐದು ವರ್ಷದವನಿದ್ದಾಗಲೇ ಜಫರ್‌ಸನ್ ತನ್ನ ತಂದೆಯ ಗ್ರಂಥಭಂಡಾರ ವನ್ನೆಲ್ಲ ಓದಿ ಮುಗಿಸಿದ್ದನೆಂಬ ಕತೆಯಿದೆ. ಆ ಕತೆ ನಿಜವೆಂಬುದಕ್ಕೆ ಅವನು ಮಾಡಿಕೊಂಡಿದ್ದ ಟಿಪ್ಪಣಿಗಳು ಸಾಕ್ಷಿಗಳಾಗಿವೆ. ಲಿಂಕನ್ನನ ಮನೆಯಲ್ಲಿದ್ದದ್ದು ಬೈಬಲ್ ಒಂದೇ. ಅವನ್ನು ಹಲವು ಸಲ ಓದುತ್ತಾನೆ. ಓದುವ ಚಟವಿದ್ದರೂ ಪುಸ್ತಕಗಳನ್ನು ಕೊಳ್ಳಲು ಕೈಯಲ್ಲಿ ಕಾಸಿಲ್ಲ. ಎರವಲು ತಂದು ಹಗಲಿರುಳು ಓದಿ ಮುಗಿಸಿ, ಹಿಂದಿರುಗಿಸುತ್ತಾನೆ. ಇಬ್ಬರೂ ಅಷ್ಟೇ ; ಊಟವನ್ನು ಮರೆ ತಾರು ; ನಿದ್ದೆಯನ್ನು ತ್ಯಜಿಸಿಯಾರು ; ಓದು ಅವರ ಬದುಕಿನ ಭಾಗವಾಗು

* ವಿವಿಧ ಮೂಲಗಳಿಂದ

ತ್ತದೆ, ಎಳವೆಯಲ್ಲಿ. ಓದಿನ ಮೂಲಕ ಅವರು ಒಳ್ಳೆಯ ಶಿಸ್ತುಗಾರರಾಗುತ್ತಾರೆ.

ಓದಿನ ಮೂಲಕ ತಮ್ಮ ಜೀವನ ಧ್ಯೇಯವನ್ನು ಕೈಗೂಡಿಸಿಕೊಳ್ಳಬೇಕೆಂಬುದು ಆ ಇಬ್ಬರದೂ ಇಚ್ಛೆ. ಕ್ರಮಬದ್ಧವಾದ ಓದಿನಿಂದ ಜಫರ್‌ಸನ್ ದೊಡ್ಡ ವಿದ್ವಾಂಸನಾಗುತ್ತಾನೆ, ಮಹಾ ಬುದ್ಧಿವಂತನಾಗುತ್ತಾನೆ. ತಾನು ರಾಜಕೀಯಕ್ಕೆ ಹೊಂದುವುದಿಲ್ಲವೆಂದು ಸಹ ಜಫರ್‌ಸನ್‌ನ ಅಂತರಾತ್ಮ ಒಮ್ಮೊಮ್ಮೆ ನುಡಿಯುತ್ತದೆ. ಆದರೆ ವಿಧಿವಿಲಾಸ ಅವನನ್ನು ರಾಜಕೀಯಕ್ಕೆ ನೂಕುತ್ತದೆ. ಅಲ್ಲಿಯೂ ಅವನು ತನ್ನ ಮೇಧಾವಿತನದ ಮುದ್ರೆಯೊತ್ತುತ್ತಾನೆ. ಬಡತನದಿಂದಾಗಿ ಲಿಂಕನ್ ಹಗಲೆಲ್ಲ ಕೊಡಲಿ ನೇಗಿಲು ಹಿಡಿಯಬೇಕಾಗಿತ್ತು. ಆದರೂ ಕುತೂಹಲದ ಕಾವಿನಿಂದಾಗಿ ಓದಿನಲ್ಲಿ ಅವನ ಆಸಕ್ತಿ ದಿನೇ ದಿನೇ ಕೆರಳುತ್ತದೆ; ರಾತ್ರಿ ಬಹಳ ಹೊತ್ತಿನ ತನಕ ಓದುತ್ತಾನೆ. ಶಾಲೆಗೆ ಹೋಗದೆ, ಶಿಕ್ಷಕರ ಮಾರ್ಗದರ್ಶನವಿಲ್ಲದೆ, ಸ್ವಯಂ ಶಿಕ್ಷಣದಿಂದಲೇ, ಅವನು ಮೇಧಾವಿಯೆಂದು ಸುತ್ತಮುತ್ತಣವರ ಮನ್ನಣೆಗೆ ಪಾತ್ರನಾಗುತ್ತಾನೆ. ಓದು ಬುದ್ಧಿಗೆ ಸಾಣೆಯೆಂಬುದನ್ನು ಇಬ್ಬರೂ ತಿಳಿಯುತ್ತಾರೆ.

ವರ್ತಮಾನ ಪತ್ರಿಕೆಗಳ ಓದು ಮತ್ತು ಜಫರ್‌ಸನ್‌ನ ಸ್ವಾತಂತ್ರ್ಯ ಮಂತ್ರದ ಬಾಯಿಪಾಠ ಲಿಂಕನ್‌ನನ್ನು ರಾಜಕೀಯದ ಕಡೆಗೆ ಸೆಳೆಯುತ್ತವೆ. ಚಿಕ್ಕಂದಿನಲ್ಲಿ ಕಲಿತ ಕಾವ್ಯ ಜೀವನದುದ್ದಕ್ಕೂ ಅವನ ನೆರವಿಗೆ ಬರುತ್ತದೆ. ವಕೀಲಿ ವೃತ್ತಿಯಿರಲಿ, ರಾಜಕೀಯಕ್ಕೆ ಧುಮುಕಲಿ, ಅಧ್ಯಕ್ಷಸ್ಥಾನದಲ್ಲಿರಲಿ, ಅವನು ಕಾವ್ಯಗಳಿಂದ ಲೀಲಾಜಾಲವಾಗಿ ಸೂಕ್ತಿಗಳನ್ನು ಉದ್ಧರಿಸುತ್ತಾನೆ. ಕವಿ ಬರ್‌ನ್ಸ್‌ನ ಕವಿತೆಗಳನ್ನೆಲ್ಲ ಅವನು ಗಟ್ಟಿಮಾಡಿದ್ದನಂತೆ, ನಿದ್ದೆಯಲ್ಲಿಯೂ ಆ ಕವಿತೆಗಳನ್ನು ಕನವರಿಸುತ್ತಿದ್ದನಂತೆ. ದೊಡ್ಡವನಾದ ಮೇಲೆ ಶೇಕ್ಸ್‌ಪಿಯರ್ ಅವನ ಸಹಚರನಾಗುತ್ತಾನೆ. ಸುತ್ತಮುತ್ತಣವರ ಇರವನ್ನು ಲೆಕ್ಕಿಸದೆ ಅವನು ಯಾವಾಗಲೂ ಗಟ್ಟಿಯಾಗಿ ಓದುತ್ತಿದ್ದನಂತೆ. ಕಿವಿಯ ಮೂಲಕ ಮನಸ್ಸನ್ನು ಹೊಕ್ಕ ಸಂಗತಿಗಳು ಭದ್ರವಾಗಿ ಬೇರೂರುತ್ತವೆಂಬುದು ಅವನ ನಂಬಿಕೆ.

ಜಫರ್‌ಸನ್‌ನ ಜ್ಞಾನ ವಿಸ್ತಾರ ವ್ಯಾಪಕತೆ ಗಹನತೆಗಳು ಸಮಕಾಲೀನ ಅಮೆರಿಕನ್ನರನ್ನು ಮಾತ್ರವಲ್ಲ, ಯೂರೋಪಿನ ಮೇಧಾವಿಗಳನ್ನು ಸಹ ದಂಗುಗೊಳಿಸಿದ್ದುವು. ವ್ಯಾಸಂಗ ಸಂಶೋಧನೆಗಳಿಗೆ ಪರ್ಯಾಯ ಮಾರ್ಗಗಳಿಲ್ಲವೆಂಬುದು ಅವನ ದೃಢ ಸಿದ್ಧಾಂತವಾಗಿತ್ತು. ಅವನು ವಕೀಲನಾಗಿರಲಿ,

ವಾಸ್ತುಶಿಲ್ಪಿಯಾಗಿರಲಿ, ರೈತನಾಗಿರಲಿ, ಶಾಸಕನಾಗಿರಲಿ, ಕ್ರಾಂತಿಕಾರಿ ಮುತ್ಸದ್ದಿಯಾಗಿರಲಿ, ಪುಸ್ತಕಗಳು ಅವನ ನಿತ್ಯ ವ್ಯವಹಾರದ ಹಾಗೂ ಸಾಧನೆಯ ಸಲಕರಣೆಗಳಾಗುತ್ತವೆ. ಜಫರ್‌ಸನ್‌ನ ಖಾಸಗಿ ಗ್ರಂಥಾಲಯ ಆ ಕಾಲಕ್ಕಾಗಲೇ ಜನಜನಿತ ಸುದ್ದಿಯಾಗಿತ್ತು. ೧೮೧೪ರಲ್ಲಿ ಬ್ರಿಟಿಷ್ ಸೈನ್ಯ ಕಾಂಗ್ರೆಸ್ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದಾಗ, ಅವನ ಗ್ರಂಥಾಲಯವನ್ನು ಕೊಂಡುಕೊಳ್ಳಲಾಯಿತಂತೆ. ಯಾವುದಾದರೂ ಸಮಸ್ಯೆ ತಲೆದೋರಿದಾಗ, ಅಥವಾ ಪ್ರಶ್ನೆಯನ್ನೆದುರಿಸಬೇಕಾದಾಗ ಅವನು ಗ್ರಂಥಗಳ ಮರೆಹೋಗುತ್ತಿದ್ದನಂತೆ. ಹೀಗಾಗಿ ಯಾವಾಗಲೂ ಅವನು ಗ್ರಂಥಾಲಯದಲ್ಲಿ ಗ್ರಂಥಗಳನ್ನು ಹರಡಿಕೊಂಡಿರುತ್ತಿದ್ದನಂತೆ.

ಶಾಸಕನಾಗಿ ವಾಷಿಂಗ್‌ಟನ್‌ಗೆ ಬಂದ ನಂತರ ಕಾಂಗ್ರೆಸ್ ಗ್ರಂಥಾಲಯವೇ ಲಿಂಕನ್‌ನ ಯಾತ್ರಾಕ್ಷೇತ್ರವಾಗುತ್ತದೆ. ಕುಡಿತ ಹೊಗೆಸೇವನೆ ಮೊದಲಾದ ಯಾವ ದುಶ್ಚಟಗಳೂ ಅವನ ಬಳಿ ಸುಳಿಯುತ್ತಿರಲಿಲ್ಲ, ಯಾವ ಮತೀಯ ಪಂಥಕ್ಕೂ ಅವನು ದಾಸನಾಗಿರಲಿಲ್ಲ. ಬಿಡುವಿದ್ದಾಗಲೆಲ್ಲ ಗ್ರಂಥಾಲಯವೇ ಅವನ ಆಶ್ರಯಸ್ಥಾನವಾಗುತ್ತದೆ. ಜತೆಯವರು ಅವನನ್ನು 'ಪುಸ್ತಕ ಕೀಟ' ಎಂದು ಕರೆಯುತ್ತಿದ್ದುದೂ ಉಂಟು. ಶಾಸನಸಭೆಯಲ್ಲಿ ಭಾಷಣ ಮಾಡಬೇಕಾದರೆ ವ್ಯಾಸಂಗ ಮತ್ತು ಶೋಧನೆ ಅತ್ಯಗತ್ಯವೆಂದು ಅವನು ಹೇಳುತ್ತಾನೆ. ನಮ್ಮ ಶಾಸಕರಿಗೂ ಅಲ್ಲಿಯ ಶಾಸಕರಿಗೂ ಎಷ್ಟೊಂದು ಅಂತರ! ನಮ್ಮವರು ಓದದೆಯೇ ಬರೆಯದೆಯೇ ರಾಜಕೀಯ ಮಾಡುತ್ತಾರೆ. ವ್ಯಾಸಂಗಾಭಿರುಚಿಯಾಗಲೀ ಜ್ಞಾನಾಸಕ್ತಿಯಾಗಲೀ ಅವರಿಗಿದ್ದಿದ್ದರೆ ಇಂದು ರಾಜಕೀಯ ಕ್ಷೇತ್ರದಲ್ಲಿ ನಾರುತ್ತಿರುವ ಕಾಮಿಸ್ಯವಿರುತ್ತಿರಲಿಲ್ಲ. ಆ ಗ್ರಂಥಾಲಯದ ಬಹುಭಾಗ ಆ ಕಾಲಕ್ಕೆ ಜಫರ್‌ಸನ್‌ನದಾಗಿದ್ದದ್ದರಿಂದ, ಲಿಂಕನ್‌ನಿಗೆ ಅವರ ಬಗ್ಗೆ ಗೌರವ ಪ್ರೀತಿ. ಅದನ್ನು ಸಂಪೂರ್ಣವಾಗಿ ಸೂರೆಗೊಳ್ಳಬೇಕೆಂಬುದು ಅವನ ಅಪೇಕ್ಷೆ.

ರಾಜಕೀಯಕ್ಕಿಳಿಯುವ ಮುನ್ನ ಇಬ್ಬರೂ ವಕೀಲರು. ವಕೀಲಿವೃತ್ತಿಯನ್ನು ಕೈಗೊಳ್ಳುವ ಮುನ್ನ ಅವರು ಅದಕ್ಕೆ ಬೇಕಾದ ವ್ಯಾಸಂಗವನ್ನು ಶ್ರದ್ಧೆಯಿಂದ ಪೂರೈಸುತ್ತಾರೆ. ಎರಡು ಮೂರು ವರ್ಷ ಕಾನೂನು ಗ್ರಂಥಗಳನ್ನೋದಿಕೊಂಡು ಪರಿಣತಿ ಪಡೆಯುತ್ತಾರೆ. ವಕೀಲರಾದ ನಂತರ ಇಬ್ಬರೂ ಬೇರೆ ದಾರಿ ಹಿಡಿಯುತ್ತಾರೆ. ಜಫರ್‌ಸನ್‌ನ ಕಾನೂನು ವ್ಯಾಸಂಗ ಅನಂತರವೂ ಮುಂದುವರಿಯುತ್ತದೆ. ಹಿರಿಯ ತಲೆಮಾರಿನ ಸುಪ್ರಸಿದ್ಧ ವಕೀಲರ ಗ್ರಂಥಸ್ಥ ಅಭಿಪ್ರಾಯಗಳನ್ನೂ ಹಳೆಯ ತೀರ್ಪುಗಳನ್ನೂ ಮೇಲಿಂದ

ಮೇಲೆ ಓದಿಕೊಳ್ಳುತ್ತಾನೆ. ಕಾನೂನು ಜ್ಞಾನವೇ ವಕೀಲನ ಬಂಡವಾಳ ವೆಂಬುದು ಅವನ ಮತ. ವಕೀಲನಾದ ನಂತರ ಲಿಂಕನ್ ಓದಿನ ಕಡೆಗೆ ಹೆಚ್ಚು ಗಮನ ಹರಿಸುವುದಿಲ್ಲ. ವ್ಯವಹಾರಾನುಭವ ಮತ್ತು ಹೃದಯರಾಗ ಅವನ ಯಶಸ್ಸಿನ ರಹಸ್ಯವಾಗುತ್ತವೆ.

ಲಿಂಕನ್ ಅಧ್ಯಕ್ಷನಾಗಿದ್ದಾಗ ಕಥನ ಸಾಮರ್ಥ್ಯ ಮತ್ತು ವಿನೋದಸ್ವಭಾವ ಗಳ ಮೂಲಕ ಜನಮನವನ್ನು ಗೆದ್ದುಕೊಳ್ಳುತ್ತಾನೆ. ಇಂಗ್ಲಿಷ್ ಕಾವ್ಯದಿಂದ ಸಮೃದ್ಧವಾಗಿ ಉದ್ಧರಣೆಗಳನ್ನು ಬಳಸಿಕೊಂಡು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತಾನೆ. ಶೇಕ್ಸ್‌ಪಿಯರ್‌ನ ಬಗ್ಗೆ ಅವನಿಗೆ ಅಪಾರ ಒಲವು; ಆ ಮಹಾನುಭಾವ ಅವನ ನಿತ್ಯಸಂಗಾತಿಯಾಗುತ್ತಾನೆ. ಗಂಡಾಂತರಗಳೊದಗಿ ದಾಗ, ಸಮಸ್ಯೆಗಳು ತಲೆದೋರಿದಾಗ, ಮನಸ್ಸಿಗೆ ಅಶಾಂತಿಯುಂಟಾದಾಗ ಶೇಕ್ಸ್‌ಪಿಯರ್ ಅವನ ಭರವಸೆಯು, ಶಕ್ತಿಸಂಚಯದ ಮತ್ತು ಸಂಯಮ ಸಮಾಧಾನಗಳ ಚಿಲುಮೆಯಾಗುತ್ತಾನೆ.

ತರುಣ ಜಫರ್‌ಸನ್‌ನ ಕಾವ್ಯಾಸಕ್ತಿಯೂ ತೀವ್ರವಾದದ್ದೇ. ಹೋಮರ್, ಹೊರೇಸ್, ವರ್ಜಿಲ್ ಮತ್ತು ಓಸಿಯನ್‌ರ ಮೇರು ಕೃತಿಗಳನ್ನು ಮೇಲಿಂದ ಮೇಲೆ ಓದುತ್ತಾನೆ. ಶೇಕ್ಸ್‌ಪಿಯರ್‌ನಲ್ಲಿ ಅವನಿಗೆ ಗಾಢವಾದ ಪ್ರೀತಿ. ಅವನ ಕೃತಿಗಳನ್ನೊಮ್ಮೆ ಓದಿ ಕೈಬಿಡುವುದಲ್ಲ, ಮತ್ತೆ ಮತ್ತೆ ಓದಬೇಕು, ಮೆಲುಕು ಹಾಕಬೇಕು, ಮನನಮಾಡಿಕೊಳ್ಳಬೇಕು ಎಂದವನು ತಿಳಿಯುತ್ತಾನೆ. ಅವನ ಗ್ರಂಥ ಭಂಡಾರದಲ್ಲಿ ಶೇಕ್ಸ್‌ಪಿಯರ್‌ನ ನಾಟಕಗಳ ಅನೇಕ ಮುದ್ರಣಗಳು ಸಂಗ್ರಹಗೊಂಡಿದ್ದುವು. ಆದರೆ ಅಧ್ಯಕ್ಷನಾಗುತ್ತಿದ್ದಂತೆ ಅವನ ಕಾವ್ಯಪ್ರೇಮ ಇಳಿಮುಖವಾಗುತ್ತದೆ. ಕ್ರಿಸ್ತನ ಸುವಾರ್ತೆಗಳ ವಾಚನವನ್ನಂತು ಮುಂದು ವರಿಸುತ್ತಾನೆ.

ಅಮೆರಿಕೆಯಲ್ಲಿಯೆ ಜಫರ್‌ಸನ್‌ನ ಪುಸ್ತಕಭಂಡಾರ ಹೆಸರುವಾಸಿ ಯಾದದ್ದು. ಅದಕ್ಕಾಗಿ ಅವನು ಅಪಾರ ಹಣ ಮತ್ತು ವೇಳೆಯನ್ನು ವಿನಿಯೋಗಿಸುತ್ತಾನೆ. ಹೊಸ ಪುಸ್ತಕ ಕಣ್ಣಿಗೆ ಬಿದ್ದ ಕೂಡಲೇ ಅದನ್ನು ತನ್ನ ಗ್ರಂಥಾಲಯಕ್ಕೆ ತಂದುಕೊಳ್ಳುತ್ತಾನೆ. ಇಪ್ಪತ್ತಾರನೆಯ ವಯಸ್ಸಿಗೆ ಅವನ ಬಳಿ ಅಪಾರ ಗ್ರಂಥ ಸಂಗ್ರಹವಿತ್ತು. ಬೆಂಕಿಯ ಅಪಘಾತದಿಂದಾಗಿ ಒಮ್ಮೆ ಹಲವು ಗ್ರಂಥಗಳು ಸುಟ್ಟುಹೋಗುತ್ತವೆ. ಕೇವಲ ಮುಂದಿನ ಮೂರು ವರ್ಷ ಗಳಲ್ಲಿ ಹಿಂದಿನ ನಾಲ್ಕರಷ್ಟು ದೊಡ್ಡದಾದ ಭಂಡಾರವನ್ನು ಬೆಳೆಸಿಕೊಳ್ಳುತ್ತಾನೆ. ಅವನ ಗ್ರಂಥಪ್ರೇಮ ಆಗಿನ ಕಾಲಕ್ಕೆ ಅಮೆರಿಕೆಯಲ್ಲಿ ಗಾದೆಮಾತಾಗಿತ್ತು.

ಬಡತನ ಹಾಗೂ ಸಾಲಗಳ ಬವಣೆಯಿಂದಾಗಿ ಲಿಂಕನ್ ಸ್ವಂತ ಗ್ರಂಥಾಲಯವನ್ನು ಬೆಳೆಸಲಾಗಲಿಲ್ಲ. ಅವನು ಪುಸ್ತಕಗಳನ್ನು ಕೊಳ್ಳುತ್ತಿದ್ದನೆನ್ನುವುದಕ್ಕೆ ದಾಖಲೆಗಳು ದೊರೆಯುತ್ತಿಲ್ಲ. ಗ್ರಂಥಸಂಚಯದ ಚಟವೂ ಅವನಿಗಿದ್ದಂತಿಲ್ಲ. ದಕ್ಷಿಣ ಇಂಡಿಯಾನಾದ ಸ್ಪ್ರಿಂಗ್‌ಫೀಲ್ಡ್‌ನಿಂದ ವಾಷಿಂಗ್‌ಟನ್‌ಗೆ ತೆರಳಿದಾಗ, ತನ್ನಲ್ಲಿದ್ದ ಕೆಲವೇ ಪುಸ್ತಕಗಳನ್ನು ತನ್ನ ಗೆಳೆಯನೊಬ್ಬನಿಗೆ ಕೊಟ್ಟುಬಿಡುತ್ತಾನೆ.

ಮಹಾಸಿದ್ಧಿಯ ನಡುವೆಯೇ ಲಿಂಕನ್ ಹತನಾಗುತ್ತಾನೆ. ಅಧ್ಯಕ್ಷಾಧಿಕಾರ ಮುಗಿದ ನಂತರ ಜಫರ್‌ಸನ್ ಹಲವು ವರ್ಷ ಸನ್ಯಾಸಿಯಂತಿದ್ದರೂ, ಕ್ರಿಯಾಶೀಲನಾಗಿ ಬದುಕು ಸಾಗಿಸುತ್ತಾನೆ. ಮಾಂಟಿಸಿಲೋದ ಯೋಗಿ ಎಂದು ಸಹ ಜನ ಅವನನ್ನು ಕರೆಯುತ್ತಾರೆ. ಖಾಸಗಿ ಜೀವನಕ್ಕೆ ವಾಪಸಾದದ್ದು ಅವನಿಗೆ ಸಂತೋಷದ ವಿಷಯವೇ ಆಗಿತ್ತು. ಕುಟುಂಬ ಜೀವನ, ಕೃಷಿ ಕ್ಷೇತ್ರದ ಅಭಿವೃದ್ಧಿ ಮತ್ತು ಗ್ರಂಥ ವ್ಯಾಸಂಗ, ಇವು ಕೊನೆಗಾಲದಲ್ಲಿ ಅವನಿಗೆ ಪ್ರಿಯವಾಗಿದ್ದ ಹವ್ಯಾಸಗಳು. ಕೌಟುಂಬಿಕ ಕಲಹದಿಂದಾಗಿ, ಕೃಷಿ ಅಭಿವೃದ್ಧಿಗಾಗಿ ಕೂಲಿ ಕೊಡಲು ಮಾಡಿದ ಸಾಲದಿಂದಾಗಿ ಅವನಿಗೆ ನಿರಾಶೆಯಾಗುತ್ತದೆ ಆದರೆ ಪುಸ್ತಕಗಳು ಮಾತ್ರ ಅವನಿಗೆ ನಿರಾಶೆಯುಂಟುಮಾಡುವುದಿಲ್ಲ; ಅವುಗಳಲ್ಲಿ ಶಾಂತಿ ಸಮಾಧಾನಗಳನ್ನು ಕಂಡುಕೊಳ್ಳುತ್ತಾನೆ. 'ಗ್ರಂಥಗಳಿಲ್ಲದೆ ನಾನು ಬದುಕಲಾರೆ' ಎಂದೊಮ್ಮೆ ಅವನು ತನ್ನ ಮಿತ್ರನಿಗೆ ಬರೆದ ಪತ್ರದಲ್ಲಿ ಹೇಳಿಕೊಳ್ಳುತ್ತಾನೆ.

ಜಫರ್‌ಸನ್‌ನಷ್ಟು ಬಹು ಪ್ರಮಾಣದಲ್ಲಿ ಲಿಂಕನ್ ಓದಿಕೊಳ್ಳದಿದ್ದರೂ, ಆ ಶ್ರಮಜೀವಿ ಪಡೆದ ಜ್ಞಾನಕ್ಕೆ, ಗಳಿಸಿದ ಸಂಸ್ಕಾರಕ್ಕೆ ಗ್ರಂಥಗಳೇ ಕಾರಣವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅಪೂರ್ವವಾದ, ಆತ್ಯಾಕರ್ಷಕವಾದ ಅವನ ಗದ್ಯಶೈಲಿಯ ಸೌಂದರ್ಯಕ್ಕೆ ಅವನ ವ್ಯಾಸಂಗವೇ ಕಾರಣವೆಂಬುದು ನಿಜ. ಅವನ ಮಾನವೀಯ ಸಂವೇದನಾ ಸಾಮರ್ಥ್ಯವನ್ನು ಅರಳಿಸುವಲ್ಲಿ, ಅವನ ಮಹತ್ವಾಕಾಂಕ್ಷೆಯನ್ನು ರೂಪಿಸಿ, ಅವನನ್ನು ಔನ್ನತ್ಯಕ್ಕೇರಿಸಿದ ಅನುಭವ ಸಂಕೀರ್ಣತೆಯನ್ನು ಒದಗಿಸುವಲ್ಲಿ ಬರ್ನ್ಸ್ ಮತ್ತು ಶೇಕ್ಸ್‌ಪಿಯರ್‌ನ ಕೃತಿಗಳ ಪ್ರಭಾವವೇ ಕಾರಣವೆಂಬುದನ್ನು ಯಾರೂ ಮರೆಯುವಂತಿಲ್ಲ. ಅವನ ವ್ಯಾಸಂಗದಲ್ಲಿ ವಿಸ್ತಾರವಾಗಲಿ ವ್ಯಾಪಕತೆಯಾಗಲಿ ಇರಲಿಲ್ಲವಾದರೂ, ತಾನು ಓದಿದ್ದನ್ನೆಲ್ಲ ಅವನು ನೆನಪಿಟ್ಟುಕೊಳ್ಳುತ್ತಿದ್ದನು; ಆಗಾಗ್ಗೆ ನೆನಪಿನಿಂದ ವಾಕ್ಯಗುಚ್ಛಗಳನ್ನು ಮಾತ್ರವಲ್ಲ, ಪುಟಪುಟಗಳನ್ನೇ


ಉದ್ಧರಿಸುತ್ತಿದ್ದನು. ವ್ಯಾಸಂಗವೊಂದು ರಥದಂತೆ, ಹಡಗಿನಂತೆ, ವಿಮಾನದಂತೆ ಊರಿಂದೂರಿಗೆ ದೇಶದಿಂದ ದೇಶಕ್ಕೆ ಜ್ಞಾನಪ್ರಪಂಚದ ಎಲ್ಲ ಕಡೆಗಳಿಗೂ ಯಾತ್ರಿಕರನ್ನು ಕೊಂಡೊಯ್ಯುತ್ತದೆಂಬುದಕ್ಕೆ ಈ ಇಬ್ಬರು ಮಹನೀಯರ ಜೀವನವೇ ಜ್ವಲಂತ ಸಾಕ್ಷಿಯಾಗಿದೆ. ಅವರ ಬುದ್ಧಿ ಸಾಮರ್ಥ್ಯಕ್ಕಾಗಿ ಕಲ್ಪನಾ ಪ್ರತಿಭೆಗಾಗಿ ನಾವವರನ್ನು ಗೌರವಿಸುತ್ತೇವೆ. ಇಂದಿಗೂ ಅವರ ಆಲೋಚನೆಗಳು, ಭಾವನೆಗಳು ಮತ್ತು ಪರಿಪಕ್ವಾನುಭವಗಳು ಮನುಕುಲವನ್ನು ತಿದ್ದುತ್ತಿವೆ, ಸಮೃದ್ಧಗೊಳಿಸುತ್ತಿವೆ. ಅವರ ಈ ಮಹತ್ವಕ್ಕೆ ಓದು ಅವರ ಬದುಕಿನ ಒಂದು ಪ್ರಮುಖಭಾಗವಾಗಿದ್ದದ್ದೇ ಕಾರಣವೆಂಬುದರಲ್ಲಿ ಲವಲೇಶವೂ ಅನುಮಾನವಿಲ್ಲ.

ವ್ಯಾಸಂಗಾಂಶವೊಂದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಈ ಇಬ್ಬರು ಮಾನವ ರತ್ನಗಳೊಡನೆ ಇಪ್ಪತ್ತನೆಯ ಶತಮಾನದ ಇಬ್ಬರು ಭಾರತೀಯ ಮಹಾ ನಾಯಕರನ್ನು ಹೋಲಿಸಬಹುದೆಂದು ತೋರುತ್ತದೆ. ಆ ಇಬ್ಬರೆಂದರೆ ಮಹಾತ್ಮ ಗಾಂಧೀಜಿ ಮತ್ತು ಬಾಬಾಸಾಹೇಬ್ ಅಂಬೇಡ್ಕರ್. ಗಾಂಧೀಜಿ ಲಿಂಕನ್‌ನಂತೆ ಹೆಚ್ಚು ಓದಲಿಲ್ಲ; ಆದರೆ ಓದಿದ್ದೆಲ್ಲ ಅವರ ಜೀವದ್ರವ್ಯವಾಗುತ್ತದೆ. ಭಾರತ ರಾಮಾಯಣ ಟಾಲ್‌ಸ್ಟಾಯ್ ಮತ್ತು ರಸ್ಕಿನ್‌ರ ಕೃತಿಗಳು ಅವರ ಜೀವನವನ್ನು ರೂಪಿಸುತ್ತವೆ, ಅನುಭವವನ್ನು ಪೋಷಿಸುತ್ತವೆ, ಆಲೋಚನಾ ಸಾಮರ್ಥ್ಯವನ್ನು ಹರಿತಗೊಳಿಸುತ್ತವೆ, ಅವರ ವ್ಯಕ್ತಿತ್ವವನ್ನೇ ಮಹತ್ತಿನೆತ್ತರಕ್ಕೆ ಎತ್ತುತ್ತವೆ. ಅಂಬೇಡ್ಕರ್ ಜಫರ್‌ಸನ್‌ನಂತೆ ಓದುಗುಳಿ, ಪುಸ್ತಕಪ್ರೇಮಿ, ವಿದ್ಯಾಸಾಗರರು. ಅಮೆರಿಕದ ಆ ಯೋಗಿಯಂತೆ ಅಂಬೇಡ್ಕರ್‌ರೂ ದೊಡ್ಡಗ್ರಂಥ ಭಂಡಾರವನ್ನು ಹೊಂದಿದ್ದರು. ಪುಸ್ತಕಗಳೇ ಅವರ ಪ್ರಾಣ; ಅವಿಲ್ಲದಿದ್ದರೆ ತಾವು ಅನಾಥರಾಗುತ್ತೇವೆಂದು ಹೇಳಿಕೊಳ್ಳುತ್ತಿದ್ದರು. ಅವರ ವಿದ್ವತ್ತಿನ ಆಯಾಮಗಳು ಹಲವು. ಈ ವಿಷಯದಲ್ಲವರು ಜಫರ್‌ಸನ್‌ನನ್ನೂ ಮೀರಿಸುತ್ತಾರೆನ್ನುವುದಕ್ಕೆ ಅವರು ಬಿಟ್ಟು ಹೋಗಿರುವ ಕೃತಿ ಸಂಪತ್ತೇ ನಿತ್ಯಸಾಕ್ಷಿಗಳಾಗುಳಿದಿವೆ. ರಾಜಕೀಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜವಿಜ್ಞಾನ, ಭಾರತೀಯ ಕಾವ್ಯ ಪುರಾಣಗಳು—ಇವೆಲ್ಲವೂ ಅವರ ವ್ಯಾಸಂಗ ವಿಷಯಗಳಾಗುತ್ತವೆ. ವಿದ್ವತ್ತಿನಲ್ಲಿ ಅವರಿಗೆ ಸರಿಗಟ್ಟುವವರು ಜಗತ್ತಿನಲ್ಲಿಯೇ ವಿರಳ. ಓದಿದ್ದನ್ನೆಲ್ಲ ಅವರು ಅರಗಿಸಿಕೊಳ್ಳುತ್ತಾರೆ; ಭಾವಾನುಭವ ಚಿಂತನೆಗಳ ರೂಪದಲ್ಲಿ ಹೊರಹೊಮ್ಮುತ್ತದೆ. ಅವರಿಗೊಮ್ಮೆ ಕಣ್ಣು ನೋವು ಬಂದಾಗ ಓದುವ ಕಣ್ಣುಗಳಿಲ್ಲದಿದ್ದರೆ ಬದುಕಿ ಪ್ರಯೋಜನ

ವೇನು ಎಂದು ತಳಮಳಗೊಳ್ಳುತ್ತಾರೆ. ಪುಸ್ತಕಗಳೇ ಅವರ ಜೀವನಾಧಾರ; ಅವರ ಸಕಲ ಶ್ರೇಯಸ್ಸುಗಳಿಗೆ ಅವೇ ಮೂಲ; ಅವೇ ಅವರಿಗೆ ದುಃಖನಾಶಕ ರೋಗನಾಶಕ ಶಕ್ತಿಗಳು; ಅವರಿಗೆ ಸದಾ ಚೈತನ್ಯವನ್ನು ನೀಡುವ ಸ್ಫೂರ್ತಿಯ ಚಿಲುಮೆಗಳೂ ಅವೇಯೇ.

ಜಗತ್ತಿನ ಮಹಾನುಭಾವರೆಲ್ಲ ಓದಿನಿಂದ ದೊಡ್ಡವರಾದರೆಂಬುದನ್ನು ಭಾರತೀಯ ಯುವಕರು ಮನಗಾಣಬೇಕಾಗಿದೆ.*

ದೇಜಗೌ



ಕಾಲ ಕೆಟ್ಟಿತೆಂದು ಹೇಳುತ್ತಾರೆ. ಆದರೆ ಕಾಲ ಕೆಡದು. ಅದೇ ಸೂರ್ಯ ಚಂದ್ರರು, ಅದೇ ಭೂಮಿ, ಅದೇ ಲೋಕ, ಅದೇ ಕಾಲ, ಆದರೆ ಕೆಡುವುದು ಜನರ ನಡೆನುಡಿ, ಆಚಾರ ವಿಚಾರಗಳು ಮಾತ್ರ.

—ಸ್ವಾಮಿ ವಿವೇಕಾನಂದ

ಕತೆಯಾಗಿದ್ದ ಕತೆಗಾರ ಅಶ್ವತ್ಥ

ಮನುಷ್ಯ ಚಿಕ್ಕಂದಿನಲ್ಲಿ ಕತೆ ಕೇಳುತ್ತಾನೆ. ದೊಡ್ಡವನಾದ ಮೇಲೆ ಕತೆ ಹೇಳುತ್ತಾನೆ, ಕೊನೆಗೆ ಸತ್ತಮೇಲೆ ತಾನೆ ಕತೆಯಾಗಿಬಿಡುತ್ತಾನೆ. ಆದರೆ ಕೆಲವರು ಬದುಕಿರುವಾಗಲೇ ಕತೆಯಾಗಿಬಿಡುತ್ತಾರೆ. ಅಂಥ ಮಹಾನುಭಾವರಲ್ಲಿ ಮೊನ್ನೆ ತಾನೆ ತೀರಿಕೊಂಡ ಕತೆಗಾರ ಅಶ್ವತ್ಥರೂ ಒಬ್ಬರು.

ಅವರನ್ನು ಹತ್ತಿರದಿಂದ ನೋಡಿದವರಿಗೆ ಇಂಥ ಮನುಷ್ಯ ಈ ಭೂಮಿಯಲ್ಲಿನ್ನು ಹುಟ್ಟಿ ಎನ್ನಬಹುದು. ಅವರನ್ನು ನೆನೆದಾಗಲೆಲ್ಲ ನನಗೆ ಭಗವದ್ಗೀತೆಯ ಈ ಶ್ಲೋಕ ನೆನಪಾಗುತ್ತದೆ.

'ಊರ್ಧ್ವಮೂಲಮಧಃ ಶಾಖಾಮಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸವೇದವಿತ್ ॥

ಎಂದರೆ ಪರಬ್ರಹ್ಮ ತಲೆಕೆಳಗಾಗಿರುವ ಅಶ್ವತ್ಥವೃಕ್ಷವಂತೆ. ಬೇರು ಮೇಲೆ ಕೊಂಬೆ ಕೆಳಗೆ ಇತ್ಯಾದಿ. ಈ ಪ್ರತಿಮೆ ನನ್ನ ತಲೆಯಲ್ಲಿ ಸ್ಥಿರವಾಗಿ ಕುಳಿತಿದೆ. ಪರತತ್ವ ಲೋಕ ವ್ಯತಿರಿಕ್ತವಾದುದು. ಅಶ್ವತ್ಥರನ್ನು ನೆನೆದಾಗಲೆಲ್ಲ ಈ ಅರಳಿಯ ಮರದ ಚಿತ್ರ ನನ್ನ ಕಣ್ಣೆದುರಿಗೆ ನಿಲ್ಲುತ್ತದೆ.

ಕನ್ನಡದ ನವೋದಯ ಕಾಲದ ಹಿರಿಯ ಲೇಖಕರ ಪಂಕ್ತಿಗೆ ಸೇರಿದ ಅವರು ಕತೆ, ಕವಿತೆ, ನಾಟಕ, ಕಾದಂಬರಿ, ಪ್ರಬಂಧ ಈ ರೀತಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ. ಮನೋಹರ ಗ್ರಂಥಮಾಲೆಯ ಬೆಳ್ಳಿಹಬ್ಬದ ಸಂದರ್ಭದಲ್ಲಿ ನಡೆದ ಸ್ಪರ್ಧೆಯಲ್ಲಿ ಕಾದಂಬರಿ, ಸಣ್ಣಕತೆ, ಖಂಡಕಾವ್ಯ, ವ್ಯಕ್ತಿಚಿತ್ರ ಮತ್ತು ನಾಟಕ ಈ ಐದೂ ಪ್ರಕಾರಗಳಲ್ಲಿ ಪ್ರಥಮ ಪುರಸ್ಕಾರ ಗಳಿಸಿದ ಹೆಗ್ಗಳಿಕೆ ಅವರದು. ಆದರೂ ಅವರು ಪ್ರಸಿದ್ಧರಾಗಿರುವುದು ಕತೆಗಾರರೆಂದೇ. ಈವರೆವಿಗೆ ಅವರು ಸುಮಾರು ೨೦೦ ಸಣ್ಣಕತೆಗಳನ್ನು ಬರೆದಿದ್ದಾರೆ. ಮುನಿಯನ ಮಾದರಿ, ಮರ್ಯಾದೆ ಮಹಲು, ರಂಗನಾಯಕಿ, ಹಂಬಲ, ಬರಡಸಿರಿ ಮತ್ತು ನಂಜುಂಡಾಯಣ ಈ ಆರು ಕಾದಂಬರಿಗಳನ್ನು, ನಾಲ್ಕು ಮಿನಿ ಕಾದಂಬರಿಗಳು, ಒಂದು ಖಂಡಕಾವ್ಯ, ಹದಿನೆಂಟು ನಾಟಕಗಳು, ಒಂದು ಪ್ರಬಂಧ ಸಂಕಲನ ಮತ್ತು ಒಂದು ಸಂಕಲನಕ್ಕಾಗುವಷ್ಟು ಭಾವಗೀತೆಗಳನ್ನು ಬರೆದಿದ್ದಾರೆ. ಈ ರೀತಿ ಕನ್ನಡ ಸಾಹಿತ್ಯ ಭಂಡಾರಕ್ಕೆ ಅವರು ಸಲ್ಲಿಸಿದ ಕಾಣಿಕೆ ಅಪಾರ.

ಕನ್ನಡದ ವರಕವಿ ಪುಟ್ಟಪ್ಪನವರಿಗೂ ಇವರಿಗೂ ಯಾವುದೋ ಬಾದರಾಯಣ ಸಂಬಂಧವಿರುವಂತೆ ಕಾಣುತ್ತದೆ. ಪುಟ್ಟಪ್ಪನವರ ಊರಾದ ತೀರ್ಥಹಳ್ಳಿಯವರು ಇವರ ಪೂರ್ವಿಕರು. ಅಲ್ಲಿಯ ಮತ್ತೊಬ್ಬ ಪುಟ್ಟಪ್ಪನವರು ಇವರ ತಾತ. ಪುಟ್ಟಪ್ಪನವರ ತಂದೆ ನರಹರಿ ಪುರಾಣಿಕರು ಪುರಾಣ ಹೇಳುವುದರಲ್ಲಿ ಆ ಸುತ್ತಿಗೆಲ್ಲ ಪ್ರಸಿದ್ಧರು. ಮನೆಯವರೊಂದಿಗೆ ಯಾವುದೋ ಮನಸ್ತಾಪದಿಂದಾಗಿ ತೀರ್ಥಹಳ್ಳಿಯನ್ನು ತೊರೆದು ಚಿಕ್ಕಮಗಳೂರು ಜಿಲ್ಲೆಯ ಕೂದುವಳ್ಳಿಗೆ ಬಂದು ನೆಲೆಸಿದರಂತೆ. ಅಲ್ಲಿ ಪ್ಲೀಡರ್ ಆಗಿ ಚೆನ್ನಾಗಿ ಹಣ ಸಂಪಾದನೆ ಮಾಡಿ ಹೆಸರು ಗಳಿಸಿದರು. ಅವರ ಮಗ ಸೋಮಶೇಖರರಾವ್ ಇಲ್ಲವೆ ಸೋಮಯ್ಯನವರೇ ಅಶ್ವತ್ಥರ ತಂದೆ. ಮಲತಾಯಿಯಿಂದಾಗಿ ಸೋಮಯ್ಯನವರು ಹೆಚ್ಚು ಓದ ಲಾಗಲಿಲ್ಲ. ಹೇಗೋ ಟ್ರೈನಿಂಗ್ ಮುಗಿಸಿ ಪ್ರಾಥಮಿಕ ಶಾಲೆಯ ಅಧ್ಯಾಪಕ ರಾದರು. ಅವರಿಗೆ ಇಬ್ಬರು ಹೆಣ್ಣುಮಕ್ಕಳು. ಬಹುಕಾಲ ಪುತ್ರಸಂತಾನವಾಗ ದಿರಲು ಅಶ್ವತ್ಥ ಪ್ರತಿಷ್ಠೆ ಮಾಡಿಸಿದ ಮೇಲೆ ಹುಟ್ಟಿದ್ದರಿಂದ ಮಗುವಿಗೆ ಅಶ್ವತ್ಥ ನಾರಾಯಣರಾವ್ ಎಂದು ಹೆಸರಿಡಲಾಯಿತು. ಅವರು ಹುಟ್ಟಿದ್ದು ೧೯೧೨ನೇ ಇಸವಿ ಜೂನ್ ೧೮ನೇ ತಾರೀಖು. ಅಶ್ವತ್ಥರ ತಾಯಿ ಲಕ್ಷ್ಮೀದೇವಮ್ಮ ಒಳ್ಳೆಯ ಹಾಡುಗಾತಿ. ಸಮಯ ಸಂದರ್ಭಕ್ಕೆ ತಕ್ಕಂತೆ ತಾನೇ ಹಾಡುಕಟ್ಟಿ ಹಾಡುತ್ತಿದ್ದರಿಂದ ಹಾಡಿನ ಅಚ್ಚಮ್ಮ ಎಂದು ಪ್ರಸಿದ್ಧರಾಗಿದ್ದರು. ಕಥನಕಲೆ ಮುತ್ತಾತ ಪುರಾಣಿಕರಿಂದ ಬಂದರೆ ಕಾವ್ಯ ಹಾಗೂ ಕಲ್ಪನಾಶಕ್ತಿ ತಾಯಿ ಯಿಂದ ಬಂದಿರಬೇಕು. ಆದರೆ ಅಶ್ವತ್ಥರಿಗೆ ತಾಯಿಯ ಸುಖ ಬರೆದಿರಲಿಲ್ಲ. ಅವರು ಎರಡು ವರ್ಷದ ಮಗುವಾಗಿದ್ದಾಗಲೇ ತಾಯಿ ತೀರಿಕೊಂಡರು. ಅನಂತರ ಅವರ ದೊಡ್ಡಮ್ಮ ಹಾಗೂ ದೊಡ್ಡಪ್ಪ ಕೆರಗೋಡು ಕೃಷ್ಣರಾಯರು ಅವರನ್ನು ಸಾಕಿದರು. ಕೃಷ್ಣರಾಯರು ಪೋಲೀಸ್ ಇನ್ಸ್‌ಪೆಕ್ಟರ್, ಶಿಸ್ತಿನ ಸಿಪಾಯಿ. ಅವರ ಕೈಕೆಳಗೆ ಬೆಳೆದ ರಾಯರು ಸಹಜವಾಗಿಯೇ ಶಿಸ್ತುಸಂಯಮ ಗಳನ್ನು ಮೈಗೂಡಿಸಿಕೊಂಡರು.

ರಾಯರು ವಿದ್ಯಾರ್ಥಿಯಾಗಿದ್ದಾಗ ತುಂಬ ಧಾರ್ಮಿಕರು, ಸಂಧ್ಯಾವಂದನೆ, ಪೂಜೆಯಿಲ್ಲದೆ ಊಟವಿಲ್ಲ. ಮುಂದೆ ಅವರು ಕಾಲೇಜು ಸೇರಿದಾಗ ಎಂ. ಎನ್. ರಾಯ್, ಮಾರ್ಕ್ಸ್ ಮೊದಲಾದವರಿಂದ ಪ್ರಭಾವಿತರಾಗಿ ಸಂಪೂರ್ಣವಾಗಿ ವಿಚಾರವಾದಿಗಳಾಗಿ, ಸಾಮ್ಯವಾದಿಗಳಾಗಿ ಪರಿಣಮಿಸಿದರು. ಅವರ ಪ್ರಕಾರ ದೇವರು ಮೌಢ್ಯ, ಭಯ ಮತ್ತು ಆಶೆ ಈ ಮೂರು ಕಾಲಮೇಲೆ ನಿಂತಿರುವ ಮನುಷ್ಯಕೃತಮೂರ್ತಿ. ಈ ಹೊತ್ತಿಗಾಗಲೇ ಕನ್ನಡದ ನವೋದಯದ ಚುಂಬಕ

ಗಾಳಿ ಎಲ್ಲೆಲ್ಲೂ ಬೀಸುತ್ತಿತ್ತು. ಸಹಜವಾಗಿಯೇ ರಾಯರು ಅದಕ್ಕೆ ಮೈ ಒಡ್ಡಿದರು. ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ ಮೊದಲಾದವರ ಮಾಂತ್ರಿಕ ಪ್ರಭಾವಕ್ಕೆ ಒಳಗಾಗಿ ಕನ್ನಡದಲ್ಲಿ ಬರೆಯಬೇಕೆಂದು ಹಂಚಿಕೆ ಹಾಕುತ್ತಿದ್ದರು. ಇದೇ ಸಮಯದಲ್ಲಿ 'Our Kinsman' ಎಂಬ ಕಾದಂಬರಿಯನ್ನು ಅವರು ಇಂಗ್ಲೀಷಿನಲ್ಲಿ ಬರೆದರಂತೆ. ಏನೆಲ್ಲ ಪ್ರಯತ್ನ ಮಾಡಿದರೂ ಅದಕ್ಕೆ ಪ್ರಕಾಶಕರು ದೊರೆಯಲಿಲ್ಲ. ಅಂತೂ ಒಟ್ಟಿನಲ್ಲಿ ರಾಯರು ಕನ್ನಡಕ್ಕೆ ಒಲಿದರು.

ರಾಯರು ಬೆಂಗಳೂರಿನಲ್ಲಿ ಇಂಜಿನೀಯರಿಂಗ್ ವಿದ್ಯಾರ್ಥಿಯಾಗಿದ್ದಾಗ ಮಹಾತ್ಮಾ ಗಾಂಧೀಜಿಯವರ ಅಸಹಕಾರ ಚಳುವಳಿಯ ಪ್ರಭಾವಕ್ಕೊಳಗಾದರು. ಗಾಂಧೀಜಿ ಬೆಂಗಳೂರಿಗೆ ಬಂದಿದ್ದಾಗ ವಿದ್ಯಾರ್ಥಿಗಳಿಂದ ಹಣ ಕೂಡಿಸಿ ಅವರಿಗೆ ಅರ್ಪಿಸಿ ಅವರ ಮುಂದೆ ಸ್ವದೇಶಿಯ ದೀಕ್ಷೆ ತೊಟ್ಟರು. ಅಪ್ಪಟ ಗಾಂಧೀವಾದಿಗಳಾಗಿದ್ದರು. ಕೊನೆಯವರೆಗೂ ಅವರು ಖಾದೀಧಾರಿಗಳಾಗಿದ್ದರು.

ಇಂಜನೀಯರಿಂಗ್ ವಿದ್ಯಾರ್ಥಿಯಾಗಿದ್ದಾಗ ಬನಾರಸ್ ವಿಶ್ವವಿದ್ಯಾಲಯಕ್ಕೆ ಟೂರ್ ಹೋಗಿದ್ದಾಗ ಮಾಳವೀಯರು ಹೊಸದಾಗಿ ಸ್ಥಾಪಿಸಲಾಗಿದ್ದ ತಮ್ಮ ವಿಶ್ವವಿದ್ಯಾನಿಲಯಕ್ಕೆ ನಿಮ್ಮ ಕಾಣಿಕೆ ಏನು? ಎಂದು ಕೇಳಿದಾಗ ಅವರು ನಿಮ್ಮ ವಿಶ್ವವಿದ್ಯಾನಿಲಯದಲ್ಲಿ ಸಿವಿಲ್ ಇಂಜನೀಯರಿಂಗ್ ವಿಭಾಗ ತೆರೆದರೆ ತಾವು ಅಧ್ಯಾಪಕರಾಗಿ ಸೇವೆ ಸಲ್ಲಿಸುವುದಾಗಿ ಹೇಳಿದರು. ಆಗ ಅಲ್ಲಿ ಸಿವಿಲ್ ಇಂಜನೀಯರಿಂಗ್ ವಿಭಾಗ ಇರಲಿಲ್ಲ.

ಬಿ. ಇ. ಮುಗಿಸಿ ಅವರು ಕಲ್ಕತ್ತೆಗೆ ಹೋಗಿ ಮಿಲಿಟರಿ ಇಂಜನೀಯರಿಂಗ್ ಸರ್ವಿಸ್‌ನಲ್ಲಿ ಕೆಲಸಕ್ಕೆ ಸೇರಿದರು. ಆಗ ಅವರು ಬ್ರಿಟೀಷರ ವಿರುದ್ಧ ಭೂಗತ ಚಳುವಳಿಯಲ್ಲಿ ಭಾಗವಹಿಸಿದರು. ಕುಂಬಾರ್ ಮತ್ತು ಪಾಕನೀಕರ್ ಅವರ ಒಡನಾಡಿಗಳು. ಇದು ಪತ್ತೆ ಆಗಿ ಅವರೆಲ್ಲ ಜೈಲಿಗೆ ಹೋಗುವಂಥ ಪರಿಸ್ಥಿತಿ ಬಂದಿತು. ಆದರೆ ಅವರ ಮೇಲಧಿಕಾರಿ ಆಂಗ್ಲನಾದರೂ ಇವರ ದಕ್ಷತೆ, ಪ್ರಾಮಾಣಿಕತೆ ಹಾಗೂ ಸನ್ನಡತೆಗೆ ಮಾರು ಹೋಗಿದ್ದ. ಆದ್ದರಿಂದ ಅವರಿಗೆ ಒಳ್ಳೆಯ ಸರ್ಟಿಫಿಕೇಟ್ ಕೊಟ್ಟು, ಉಪಾಯವಾಗಿ ಕೆಲಸದಿಂದ ಬಿಡುಗಡೆ ಮಾಡಿದ.

ಅಲ್ಲಿಂದ ರಾಯರು ಮುಂಬಯಿಯ ಹಿಂದೂಸ್ಥಾನ್ ಕನ್‌ಸ್ಟ್ರಕ್ಷ್ ಕಂಪೆನಿ ಸೇರಿದರು. ಈ ನಡುವೆ ಅವರು ತಾವು ಎತ್ತಿ ಆಡಿಸಿದ ಅಕ್ಕನ ಮಗಳು ಲಲಿತಮ್ಮನವರನ್ನು ಮದುವೆಯಾಗಿ ಸಂಸಾರ ಹೂಡಿದ್ದರು. ಏಳುನೂರು ರೂಪಾಯಿ ಸಂಬಳ; ಒಳ್ಳೆಯ ಸ್ಥಾನಮಾನ. ಆದರೆ ಅಷ್ಟರಲ್ಲೇ ಬನಾರಸ್ ಹಿಂದೂ

ವಿಶ್ವವಿದ್ಯಾನಿಲಯದಲ್ಲಿ ಸಿವಿಲ್ ಇಂಜಿನೀಯರಿಂಗ್ ವಿಭಾಗ ತೆರೆಯಿತು. ತಾವು ಕೊಟ್ಟ ಮಾತನ್ನು ನೆನೆದು ತಾವಾಗಿಯೇ ೧೫೫ ರೂ. ಸಂಬಳಕ್ಕೆ ಹೋಗಿ ಸೇರಿದರು.

ಕಾಶಿ ಹಿಂದೂ ಧರ್ಮದ ಹೃದಯಪೀಠವಾದರೂ ಗೂಂಡಾಗಳ ಕೆಂಜಗದ ಗೂಡು. ರಾಯರು ಅಲ್ಲಿ ಕಬೀರನ ವೈಚಾರಿಕತೆಯನ್ನು ಮೈಗೂಡಿಸಿಕೊಂಡರು. ಅಲ್ಲಿಯ ವಿದ್ಯಾರ್ಥಿಗಳಿಗೆ ರಾಯರು ಒಂದು ಒಗಟು. ಅವರ ಶಿಸ್ತು, ಪ್ರಾಮಾಣಿಕತೆ ಮತ್ತು ವಿದ್ವತ್ತಿನ ಮುಂದೆ ಅವರೆಲ್ಲ ತಲೆಬಾಗಿದರು. ದಾರಿ ತಪ್ಪುತ್ತಿದ್ದ ನೂರಾರು ವಿದ್ಯಾರ್ಥಿಗಳು ರಾಯರ ಪ್ರಭಾವದಿಂದ ಒಳ್ಳೆಯ ವಿದ್ಯಾರ್ಥಿಗಳಾಗಿ ಉನ್ನತಸ್ಥಾನದಲ್ಲಿದ್ದು ಅವರ ಹೆಸರು ಹೇಳಿ ದೀಪ ಹಚ್ಚುತ್ತಾರೆ.

ಸಂತ ಕಬೀರ ಜೀವನದುದ್ದಕ್ಕೂ ಅಂಧಶ್ರದ್ಧೆ ಹಾಗೂ ಮೂಢರೂಢಿಗಳಿಗೆ ವಿರೋಧವಾಗಿ ಹೋರಾಡಿದ. ಕಾಶಿಯಲ್ಲಿ ಸತ್ತರೆ ಮೋಕ್ಷ ಅದರ ಹತ್ತಿರದಲ್ಲಿರುವ ಮಗಹರ್‌ನಲ್ಲಿ ಸತ್ತರೆ ಮುಂದಿನ ಜನ್ಮದಲ್ಲಿ ಕತ್ತೆಯಾಗಿ ಹುಟ್ಟುತ್ತಾರೆ ಎಂಬ ನಂಬಿಕೆ ಈಗಲೂ ಇದೆ. ಅದನ್ನು ಸುಳ್ಳು ಮಾಡಲೆಂದೇ ಕಬೀರ ತನ್ನ ಕಡೆಗಾಲದಲ್ಲಿ ಮಗಹರ್‌ಗೆ ಹೋಗಿ ಸತ್ತ. ರಾಯರ ಒಳಮನದ ಮೇಲೆ ಈ ಪ್ರಭಾವ ವಿರಬೇಕು.

ಅಲ್ಲಿರುವವರೆಗೂ ಕನ್ನಡಿಗರು ಯಾರೇ ಹೋಗಲಿ ಅವರಿಗೆ ತೆರೆದ ಬಾಗಿಲಿನ ಸ್ವಾಗತ, ಅಲ್ಲಿದ್ದುಕೊಂಡೇ ಅವರು ಕನ್ನಡದಲ್ಲಿ ಬರಹವನ್ನು ನಿರಂತರವಾಗಿ ಮಾಡುತ್ತಿದ್ದರು. ಆದರೂ ಅವರಿಗೆ ಕನ್ನಡ ನೆಲದ ಸೆಳೆತ. ಕೊನೆಗೆ ರಾಯರ ಮಗ ಎಂ.ಎಸ್ಸಿ. ಮುಗಿಸಿ ಕೆಲಸಕ್ಕೆ ಸೇರಿದ. ಅವರು ಇನ್ನೇನು ಪ್ರೊಫೆಸರ್ ಆಗುತ್ತಿದ್ದರು. ಇನ್ನೂ ಒಂಬತ್ತು ವರ್ಷ ಸರ್ವೀಸ್ ಇತ್ತು. ಆದರೆ ಅವರು ನಿರ್ಲಿಪ್ತರಾಗಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಯಾಕೆ? ಎಂದರೆ ನನ್ನ ಮಗ ಈಗ ಸಂಪಾದನೆ ಮಾಡುವ ಹಾಗಾದ. ಆದ್ದರಿಂದ ನನಗೆ ನೌಕರಿ ಬೇಕಿಲ್ಲ. ಊರಿಗೆ ಹೋಗಿ ನಾನು ಬರಹದಿಂದ ಬದುಕಬಲ್ಲೆ. ಸಹೋದ್ಯೋಗಿಗಳು, ವಿಶ್ವವಿದ್ಯಾಲಯದ ಅಧಿಕಾರಿಗಳು ರಾಯರು ರಾಜೀನಾಮೆ ವಾಪಸ್ ತೆಗೆದುಕೊಳ್ಳುವಂತೆ ಶತಪ್ರಯತ್ನ ಮಾಡಿದರು. ವಿದ್ಯಾರ್ಥಿಗಳು ಅತ್ತರು, ಕರೆದರು. ಆದರೆ ರಾಯರು ಕದಲಲಿಲ್ಲ. 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ' ಎಂಬಂತೆ ಸಿದ್ಧಾಂತದ ಮಾತು ಬಂದಾಗ ರಾಯರು ವಜ್ರ ಕಠೋರರು. ಉಳಿದ ವೇಳೆ ಅವರ ಮನಸ್ಸು ಹೂವಿಗಿಂತ ಮೃದು.

ಕಾಶಿಯಿಂದ ಮರಳಿದ ಮೇಲೆ ಮೈಸೂರಿನ ಸರಸ್ವತೀಪುರಂನಲ್ಲಿ ವಾಸ್ತವ್ಯ. ವೃತ್ತಿಯಿಂದ ಇಂಜಿನಿಯರ್ ಆದ ರಾಯರ ಜೀವನ, ದಿನಚರಿ, ಎಲ್ಲ ಯೋಚಿತ, ವ್ಯವಸ್ಥಿತ, ಎಲ್ಲಿಲ್ಲದ ಒಪ್ಪಓರಣ. ಅವರು ಗಾಂಧೀವಾದಿಯೆಂದು ಹೇಳಿದೆ. ಸರಳತೆ ಕೆಲವೊಮ್ಮೆ ಶುಷ್ಕವೋ ಎನ್ನುವಷ್ಟು. ಮನೆಯಲ್ಲಿ ಒಂದು ಸೋಫಾ ಆಗಲಿ, ಯಾವುದೋ ಭಾವಚಿತ್ರವಾಗಲೀ, ಕೊನೆಗೆ ಒಂದು ಕ್ಯಾಲೆಂಡರ್ ಕೂಡ ಇಲ್ಲ. ಆದರೆ ರಾಯರು ಹೊರಕ್ಕೆ ಬಂದರೆ ಅವರ ಮುಗುಳ್ನಗೆಯಿಂದ ಇಡೀ ಮನೆ ಬೆಳಗುತ್ತಿತ್ತು. ಬೆಳಗೆದ್ದ ಕೂಡಲೆ ಚಂಕ್ರಮಣ, ಮಳೆ ಬಂದರೆ ಕೊಡೆ ಹಿಡಿದಾದರೂ ವಾಕಿಂಗ್ ಹೋದಾರು. ಆದರೆ ಅದರಲ್ಲಿ ವ್ಯತ್ಯಯ ಕೂಡದು. ಅನಂತರ ವ್ಯಾಯಾಮ. ಅನಂತರ ಉಪಹಾರ, ಅನಂತರ ಬರವಣಿಗೆ, ಬಂದವರೊಡನೆ ಮಾತುಕತೆ.

ಮಾಸ್ತಿಯವರ ಶಿಷ್ಯರಾದ ರಾಯರಿಗೆ ಗ್ರಾಮೀಣ ಜನರೆಂದರೆ ಎಲ್ಲಿಲ್ಲದ ಪ್ರೀತಿ, ಚಂಕ್ರಮಣಕ್ಕೆ ಹೊರಟಾಗ ಮಧ್ಯೆ ಮಧ್ಯೆ ಮಂಟಪೋತ್ಸವ. ಅವಳು ಮೊಸರಿನ ಮಂಗಮ್ಮನಿರಬಹುದು, ಕಸಮುಸರೆಯ ಕಮಲಇರಬಹುದು. ಜೋಗ್ಯೋರ ಅಜ್ಜಪ್ಪ ಇರಬಹುದು, ಇಲ್ಲವೆ ಮುನಿಯ ಇರಬಹುದು. ಎಲ್ಲರೊಡನೆ ಅವರ ಯೋಗಕ್ಷೇಮ, ಮಳೆಬೆಳೆ ಕುರಿತು ಮಾತುಕತೆ, ಮಾತು ಮಿತ, ಅನವಶ್ಯಕ ಕಾಡುಹರಟೆಯಲ್ಲಿ ಅವರಿಗೆ ನಂಬಿಕೆಯಿರಲಿಲ್ಲ.

ಹಾದಿಯ ಕಾದಂಬರೀ ಸಾರ್ವಭೌಮ ಪ್ರೇಮಚಂದರು ಒಮ್ಮೆ ಕವಯಿತ್ರಿ ಮಹಾದೇವಿ ವರ್ಮಾ ಅವರನ್ನು ನೋಡಲು ಅಲಹಾಬಾದಿಗೆ ಹೋಗಿದ್ದರಂತೆ. ಅವರ ಮನೆಗೆ ಹೋದಾಗ ಆಕೆ ಸ್ನಾನ ಮಾಡುತ್ತಿದ್ದಾರೆಂದು ಅಡಿಗೆಯವಳು ಹೇಳಿದಳು. ಸರಿ, ನೀನೇ ಬಾ, ಅಲ್ಲಿ ಕೂಡು ಎಂದು ಅಲ್ಲೇ ಇದ್ದ ಒಂದು ಮರದ ಕೆಳಗಿನ ಕಲ್ಲುಬೆಂಚಿನ ಮೇಲೆ ಕುಳಿತು 'ನಿನ್ನ ಕತೆಯೇನು ಹೇಳು' ಎಂದು ಅವಳ ಕಷ್ಟ ಸುಖ ಎಲ್ಲ ವಿಚಾರಿಸಿಕೊಂಡು ಮಾತಾಡುತ್ತ ಕುಳಿತುಕೊಂಡರು. ಸ್ನಾನ ಮುಗಿಸಿ ಹೊರ ಬಂದ ಮಹಾದೇವಿ ವರ್ಮಾಗೆ ಅಡಿಗೆಯವಳ ಜೊತೆ ಹಳ್ಳಿಗನಂತೆ ಕುಳಿತು ಮಾತನಾಡುತ್ತಿದ್ದ ಪ್ರೇಮಚಂದರನ್ನು ಕಂಡು ಅಶ್ಚರ್ಯ ಹಾಗೂ ಖೇದವಾಯಿತಂತೆ. ಆಕೆ ಹೇಳಿದರು 'ನೀವು ಯಾರು ಎಂದು ಹೇಳದೆ ತುಂಬ ಅನ್ಯಾಯ ಮಾಡಿದಿರಿ'. 'ನಾನು ಯಾರು ಎಂದು ಹೇಳಿದ್ದರೆ ನಿಮ್ಮ ಅಡಿಗೆಯವಳು ನನ್ನ ಹತ್ತಿರ ಇಷ್ಟು ಸಲೀಸಾಗಿ ಮಾತಾಡುತ್ತಿದ್ದಳೆ?' ಪ್ರೇಮಚಂದರು ಕೇಳಿದರು.

ಕಥಾಕಾರ ಶಿರೋಮಣಿ ಪ್ರೇಮಚಂದರು ತಮ್ಮ ಕತೆಗೆ ವಸ್ತುವನ್ನು ಈ

ರೀತಿ ಸಂಗ್ರಹಿಸುತ್ತಿದ್ದರು ಎನ್ನುತ್ತಾರೆ ಮಹಾದೇವಿ ವರ್ಮಾ. ರಾಯರದೂ ಅದೇ ಜಾಯಮಾನ. ನಾನು ದೊಡ್ಡ ಸಾಹಿತಿ, ಪ್ರೊಫೆಸರ್ ಆಗಿದ್ದವನು ಈ ಹಳ್ಳಿಯ ಜನರೊಂದಿಗೆ ಮಾತನಾಡುವುದೆ? ಎಂಬ ದೊಡ್ಡಸ್ತಿಕೆ, ಬಿಂಕ, ಹಮ್ಮು-ಬಿಮ್ಮು ಅವರಲ್ಲಿರಲಿಲ್ಲ.

ರಾಯರು ಅದ್ವೈತವಾದಿಗಳು. ಜೀವ-ಜೀವಗಳ ನಡುವೆ ಅದ್ವೈತ, ಮಾತು ಕೃತಿಗಳ ನಡುವೆ ಅದ್ವೈತ. ಸಾಮ್ಯವಾದಿಗಳಾದ ಅವರು ಸೌಮ್ಯ ಸಾಮ್ಯವಾದಿಗಳು. ದ್ವಂದ್ವ, ದ್ವೈತವನ್ನು ಅವರು ಕಂಡವರೇ ಅಲ್ಲ. ಜಾತಿ, ಪಂಥಗಳಲ್ಲಿ ನಂಬಿಕೆಯಿಲ್ಲದ ಅವರ ಮನೆಯಲ್ಲಿ ಒಳಗು ಹೊರಗೂ ಕೆಲಸ ಮಾಡುತ್ತಿದ್ದವಳು ಹರಿಜನ ಹೆಣ್ಣು ಮಗಳು. ರಾಯರ ಮಡದಿಗೆ ಅನಾರೋಗ್ಯವಾಗಿದ್ದಾಗ ಅವರು ಆಕೆಗೆ ಹೇಳುತ್ತಿದ್ದರು 'ಮಾದಮ್ಮ ಒಂದು ಪಾವು ಅಕ್ಕಿ ತೊಳೆದು ಒಲೆಯ ಮೇಲಿಟ್ಟುಬಿಡಮ್ಮ'.

ವಿಚಾರವಾದಿಗಳಾದ ರಾಯರು ತಮ್ಮ ತಂದೆ ತೀರಿಕೊಂಡಾಗ ಅವರ ಕರ್ಮಾದಿಗಳನ್ನು ಮಾಡಲಿಲ್ಲ. ಅದಕ್ಕೆ ಅವರ ನೆಂಟರಿಷ್ಟರು ಮಾಡಿದ ವಿರೋಧವನ್ನು ಅವರು ಲಕ್ಷಿಸಲಿಲ್ಲ. ಒಂದು ದಿನ ಅನಾಥಾಲಯದ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಿದರು. ತಂದೆ ಸತ್ತಮೇಲೆ ಅವರು ಮಾಡಿದ ಮೊದಲ ಕೆಲಸವೆಂದರೆ ರೇಷನ್ ಆಫೀಸಿಗೆ ಹೋಗಿ ಅವರ ಹೆಸರು ತೆಗೆಸಿ ಹಾಕಿಸಿದ್ದು.

ಮಗನ ಮದುವೆ ಗೊತ್ತಾದಾಗ ಅವರು ಹೆಣ್ಣಿನ ಕಡೆಯವರಿಗೆ ಕೆಲವು ಷರತ್ತುಗಳನ್ನು ಹಾಕಿದರು. ಮದುವೆಯಲ್ಲಿ ಗಂಡಿಗೆ ವರದಕ್ಷಿಣೆ, ವರೋಪಚಾರ ಏನನ್ನು ಕೊಡಕೂಡದು. ಲಗ್ನಪತ್ರಿಕೆ ಅಚ್ಚುಹಾಕಿಸುವುದು ಕೂಡದು, ಚಪ್ಪರ, ವಾಲಗ ಯಾವುದೂ ಬೇಡ. ನಾವು ಎಂಟೇ ಜನ ಬೆಳಿಗ್ಗೆ ಎಂಟಕ್ಕೆ ಬರುತ್ತೇವೆ. ಸಂಜೆ ನಾಲ್ಕಕ್ಕೆ ಎಲ್ಲ ಮುಗಿಯಬೇಕು. ಹೆಚ್ಚು ಹಣ ಖರ್ಚು ಮಾಡಕೂಡದು, ಹೆಚ್ಚು ಜನ ಬೇಡ. 'ನಿಮಗೆ ಬೇಡವಾದರೆ ನಮಗೆ ಬೇಡವೆ?' ಎಂದು ಅವರು ಕೇಳಿದರು. ಆದರೆ ರಾಯರು ಪಟ್ಟು ಬಿಡಲಿಲ್ಲ. ಅಂತರಂಗ ಬಹಿರಂಗಗಳೊಂದಿಗೆ ಅವರು ಎಂದೂ ಚದುರಂಗವಾಡಿದವರಲ್ಲ. ಅನ್ಯಾಯದೊಂದಿಗೆ ರಾಜಿಮಾಡಿಕೊಂಡವರಲ್ಲ. ಒಮ್ಮೆ ಅವರು ತಮ್ಮ ಮನೆಯಲ್ಲಿ ಒಂದು ರೂಮು ಕಟ್ಟಿಸಿದರು. ಅದಕ್ಕೆ ಕ್ರಾಸ್ ವೆಂಟಿಲೇಷನ್ ಬರುವಂತೆ ಒಂದು ಕಡೆ ಗೋಡೆ ಮುಂಚಾಚುವಂತೆ ಪ್ಲಾನು ಬರೆದಿದ್ದರು. ನಗರಾಭಿವೃದ್ಧಿ ಪ್ರಾಧಿಕಾರದವರು ಅದನ್ನು ಒಪ್ಪಲಿಲ್ಲ. ಆಗ ಕಂಟ್ರಾಕ್ಟರ್ ಹೇಳಿದ 'ಸರ್ ಒಂದು ನೂರು ರೂ.

ಕೊಟ್ಟುಬಿಡಿ, ನಾನು ಎಲ್ಲ ಸರಿಪಡಿಸುತ್ತೇನೆ', ಅದಕ್ಕೆ ರಾಯರು ಹೇಳಿದರು. 'ನಾನು ಲಂಚ ತಗೊಂಡವನಲ್ಲ, ಕೊಟ್ಟವನಲ್ಲ. ಕೊಡುವರೇ ಇಲ್ಲದ ಮೇಲೆ ತಗೊಳ್ಳುವರು ಎಲ್ಲಿಂದ ಬಂದಾರು? ಇವೆಲ್ಲಕ್ಕೂ ನಮ್ಮ ಸ್ವಾರ್ಥವೇ ಕಾರಣ. ಅವರಿಂದ ಪ್ಲಾನ್ ಹೇಗೆ ಅಪ್ರೂವ್ ಆಗಿದೆಯೋ ಹಾಗೇ ಕಟ್ಟುಬಿಡಿ ಕ್ರಾಸ್ ವೆಂಟಿಲೇಷನ್ ಇಲ್ಲದಿದ್ದರೂ ಚಿಂತೆಯಿಲ್ಲ'. ಅಂತೂ ಹಾಗೇ ಕಟ್ಟಿ ಮುಗಿಸಿದರು.

ಅವರ ಕಾದಂಬರಿ 'ರಂಗನಾಯಕಿ'ಯನ್ನು ಚಲನಚಿತ್ರ ಮಾಡಿದ ಪುಟ್ಟಣ್ಣ ಕಣಗಾಲ್ ಅವರಿಗೆ ೨೫ ಸಾವಿರ ರೂ. ತಂದು ಕೊಟ್ಟರು. ರಾಯರು ಕೂಡಲೆ ಆದಾಯ ತೆರಿಗೆಯ ಕಛೇರಿಗೆ ಹೋಗಿ ತಮಗೆ ಇಂತಿಷ್ಟು ಆದಾಯ ಬಂದಿರುವುದಾಗಿಯೂ, ಅದಕ್ಕೆ ತೆರಿಗೆ ಲೆಕ್ಕಹಾಕಿ ತೆಗೆದುಕೊಳ್ಳಿ' ಎಂದರು. ಅಲ್ಲಿಯ ಗುಮಾಸ್ತರು, 'ನೀವೇನೂ ಸಂಬಳಗಾರರಲ್ಲ, ವ್ಯಾಪಾರಿಗಳಲ್ಲ, ಎಂದೋ ಒಂದಿಷ್ಟು ಹಣ ಬಂತು ಎಂದು ಯಾಕೆ ತಲೆ ಕೆಡಿಸಿಕೊಳ್ಳುತ್ತೀರಿ? ಹೋಗಿ ಸಾರ್' ಎಂದ. ಆಗ ರಾಯರು ಕೆರಳಿ ಹೇಳಿದರು 'ನಿಮ್ಮಂಥವರಿಂದಲೇ ನಮ್ಮ ದೇಶ ಹಾಳಾಗಿರುವುದು'. ಕೊನೆಗೆ ಮೇಲಧಿಕಾರಿಯನ್ನು ನೋಡಿ ಟ್ಯಾಕ್ಸ್ ಕಟ್ಟಿಯೇ ಅವರು ಮನೆಗೆ ಮರಳಿದರು.

ರಾಯರಿಗೆ ಕೀರ್ತಿ, ಪ್ರಶಸ್ತಿ, ಸಭೆ, ಸಮಾರಂಭವೆಂದರೆ ಎಲ್ಲಿಲ್ಲದ ಅಲರ್ಜಿ. ರಾಜ್ಯ ಸಾಹಿತ್ಯ ಅಕಾಡೆಮಿಯವರು ಅವರಿಗೆ ಸನ್ಮಾನ ಮಾಡಬಯಸಿದಾಗ ಅವರು ವಿನಯಪೂರ್ವಕವಾಗಿ ನಿರಾಕರಿಸಿದರು. ಆದರೆ ಅಧ್ಯಕ್ಷರಾಗಿದ್ದ ಡಾ॥ ಹಾ. ಮಾ. ನಾಯಕರೂ ಹಟವಾದಿಗಳು. ಅವರ ಮನೆಗೇ ಬಂದು ಪ್ರಶಸ್ತಿ ತಂದುಕೊಟ್ಟರು. ರಾಯರು ಆ ಶಾಲನ್ನು ಅವರಿಗೇ ಹೊದ್ದಿಸಿ, 'ಈ ಹಣವನ್ನು ಬೇರೆ ಯಾವುದಕ್ಕಾದರೂ ಸದುಪಯೋಗ ಮಾಡಿಕೊಳ್ಳಿ' ಎಂದು ಹಿಂದಿರುಗಿಸಿದರು.

ಅಜಾತಶತ್ರುವಾಗಿದ್ದ ರಾಯರು ಯಾರ ಬಗೆಗೂ ಕೆಟ್ಟ ಮಾತುಗಳನ್ನು ಆಡಿದವರಲ್ಲ. ಕುವೆಂಪು, ಬೇಂದ್ರೆ, ಕಾರಂತ ಮೊದಲಾದವರ ಬಗೆಗೆ ಎಲ್ಲಿಲ್ಲದ ಗೌರವ. ಇಷ್ಟೆಲ್ಲ ತಿಳಿದು ರಾಯರು ನಿರಸನಿ, ಸಿನಿಕ್ ಎಂಬ ಭಾವನೆ ಬರಬಹುದು. ಆದರೆ ಹಾಗಲ್ಲ. ದೇವರಲ್ಲಿ ನಂಬಿಕೆಯಿಲ್ಲನೆಂದ ಮಾತ್ರಕ್ಕೆ ಅವರು ಆಸ್ತಿಕರನ್ನು ನಿಂದಿಸುವುದಾಗಲೀ, ಕುಚೋದ್ಯ, ಲೇವಡಿ ಮಾಡಿದವರಲ್ಲ. ಸರಸ, ಸಜ್ಜನಿಕೆ, ಶುಚಿರುಚಿ ಅವರ ಸಾಹಿತ್ಯದಂತೆ ಬದುಕಿನಲ್ಲೂ ಹಾಸುಹೊಕ್ಕಾಗಿತ್ತು. ಗಣಪತಿ ಹಬ್ಬ ಬಂದರೆ ಬೀದಿಯ ಮಕ್ಕಳು ಗಣಪತಿ ಕೂರಿಸಿದ್ದೀರಾ? ಎಂದು ಬಂದರೆ,

ಅವರನ್ನು ಮುದ್ದಿಸಿ ನಗಿಸಿ ಅವರಿಗೆಲ್ಲ ಒಂದೊಂದು ಚಾಕ್‌ಲೇಟ್ ಕೊಟ್ಟು ಕಳುಹಿಸುತ್ತಿದ್ದರು. ಬೀದಿಯಲ್ಲಿ ಯಾರಿಗೆ ಏನು ತೊಂದರೆಯಾದರೂ ರಾಯರು ಅಲ್ಲಿಗೆ ಮೊದಲು ಹಾಜರು. ಹಾಗೆಯೇ ಮಕ್ಕಳ ಸಾಧನೆಯನ್ನು ಕಂಡರೆ ಮೊದಲು ಹೋಗಿ ಅವರನ್ನು ಅಭಿನಂದಿಸುವರು. ನನ್ನ ಮಗಳು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ.ಯಲ್ಲಿ ರ್‍ಯಾಂಕ್ ಬಂದಾಗ ಬೆಳಕು ಹರಿಯುವ ಹೊತ್ತಿಗೆ ಬಂದು ಅಭಿನಂದಿಸಿದರು. ಅದೇ ಆಕೆಯ ಮದುವೆಗೆ ಬನ್ನಿ ಎಂದು ಇನ್ನಿಲ್ಲದಂತೆ ಕರೆದೆ, ದಮ್ಮಯ್ಯಗುಡ್ಡೆ ಹಾಕಿದೆ. ಆದರೆ ಅವರದು ಒಂದೇ ಮಾತು, 'ನೀವು ಮದುವೆಯಲ್ಲಿ ಶಕ್ತಿ ಮೀರಿ ಖರ್ಚು ಮಾಡುತ್ತೀರಿ. ಮದುವೆಯೋ ಮನೆಹಾಳೋ ಎಂಬಂತೆ ನಮ್ಮ ಜನ ಮಾಡಿಕೊಳ್ಳುತ್ತಾರೆ. ನನಗೆ ಅದನ್ನು ನೋಡಲಾಗುವುದಿಲ್ಲ. ದಯವಿಟ್ಟು ಕ್ಷಮಿಸಿ'.

ಹೀಗೆ ಅವರು ಮದುವೆ ಮೊದಲಾದ ಯಾವ ಸಮಾರಂಭಕ್ಕೂ ಹೋಗುತ್ತಿರಲಿಲ್ಲ. ಯಾರ ಮನೆಗೆ ಹೋದರೂ ಒಂದು ಲೋಟ ಕಾಫಿಯನ್ನು ಒಲ್ಲರು. ಒಮ್ಮೆ ನಾನು, ಅವರು ಕಾಯಿಲೆ ಬಿದ್ದಿದ್ದ ನಮ್ಮ ಗುರುಗಳಾದ ತ. ಸು. ಶ್ಯಾಮರಾಯರ ಮನೆಗೆ ಹೋಗಿದ್ದೆವು. ಶ್ಯಾಮರಾಯರು ನನಗೆ ಹೇಳಿದರು 'ಅಯ್ಯ ಅಶ್ವತ್ಥರಿಗೆ ಒಂದು ಲೋಟ ಕಾಫಿ, ಇಲ್ಲವೆ ಹಾಲು ಕುಡಿಸಲು ವಿಫಲನಾಗಿದ್ದೇನೆ. ನೀನು ಏನಾದರೂ ಮಾಡಿ ಒಪ್ಪಿಸು'. ಅವರಿಗೆ ಹೇಳಿದೆ 'ಸರ್ ನನಗೆ ಕಾಫೀ ಬೇಕು. ನೀವು ಕುಡಿದರೆ ನಾನು ಕುಡಿಯುತ್ತೇನೆ'. ಆದರೆ ಅವರು ಒಪ್ಪಲಿಲ್ಲ. 'ನೀವು ಕುಡಿಯಿರಿ. ನನ್ನನ್ನು ಮಾತ್ರ ಕ್ಷಮಿಸಿರಿ' ಎಂದು ಕಟ್ಟುನಿಟ್ಟಾಗಿ ಹೇಳಿಬಿಟ್ಟರು.

ರಾಯರ ದಾಂಪತ್ಯ ಸೀತಾರಾಮರ ದಾಂಪತ್ಯ. ಅವರ ಮನಸ್ಸಿನಲ್ಲಿದ್ದುದು ಇವರ ಬಾಯಲ್ಲಿ. ಇವರ ಬಾಯಲ್ಲಿದ್ದುದು ಅವರ ಮನಸ್ಸಿನಲ್ಲಿ. ಅಲ್ಲೂ ಅದ್ವೈತವೇ ವಿಜೃಂಭಿಸುತ್ತಿತ್ತು. ಕುವೆಂಪು ಅವರಂತೆಯೇ ಎತ್ತರದ ನಿಲುವಿನ ಸ್ಫುರದ್ರೂಪಿಗಳಾದ ರಾಯರು, ಚೆಲುವು, ಒಲವು ಹಾಗೂ ಸತ್ಯದ ಆರಾಧಕರು. ಇವೆಲ್ಲವನ್ನೂ ಮೀರಿದ್ದು ಅವರ ಸಾಮಾಜಿಕ ಕಳಕಳಿ; ತತ್ವನಿಷ್ಠೆ. ಅವರು ತಮ್ಮ ಆತ್ಮಕಥೆಯನ್ನು ಮೂರನೆಯ ವ್ಯಕ್ತಿಯಾಗಿ ಬರೆಯಬೇಕೆಂದು ಹಂಚಿಕೆ ಹಾಕಿಕೊಂಡಿದ್ದರು. ಆದರೆ ಅದು ಆಗಲಿಲ್ಲ, ಆದರೆ ಅವರು ಬರೆದಿರುವ ಉಯಿಲು ಅವರ ಬಾಳಿನ ಭಾಷ್ಯದಂತಿದೆ. ತಮಗೆ ಯಾವ ಅಪರಕರ್ಮಗಳನ್ನು ಮಾಡಕೂಡದೆಂದು ಹೇಳಿದ ಅವರು, ತಮ್ಮ ಚರ-ಸ್ಥಿರ ಆಸ್ತಿಯನ್ನೆಲ್ಲ 'ಲಲಿತಾಶ್ವತ್ಥ

ಟ್ರಸ್ಟ್' ಎಂಬ ಟ್ರಸ್ಟಿಗೆ ಮಾಡಿದ್ದಾರೆ. ಸಾಹಿತ್ಯ ಹಾಗೂ ಸಮಾಜಸೇವೆಗೆ ನೆರವಾಗುವಂತೆ ಶಾಶ್ವತವಾದ ವ್ಯವಸ್ಥೆ ಮಾಡಿದ್ದಾರೆ.

ರಾಯರು ಆಗಾಗ್ಗೆ ಹೇಳುತ್ತಿದ್ದರು: 'A gentleman is one who takes less from the society and gives more to it'. ಈ ದೃಷ್ಟಿಯಿಂದ ಅವರು ನಿಜಕ್ಕೂ ಸಜ್ಜನರು.

ಮ. ಸು. ಕೃಷ್ಣಮೂರ್ತಿ



ಜನನ ಮರಣಗಳೆರಡೂ ಸ್ವಾಭಾವಿಕ ಸೃಷ್ಟಿ ನಿಯಮ. ಆದ್ದರಿಂದ ಅವೆರಡರ ಬಗ್ಗೆಯೂ ಸಂತಸ, ದುಃಖಗಳು ಅನವಶ್ಯಕ.

—ಗೀತಾ

ಸರ್ವ ತ್ಯಾಗಿಯಾದವನಿಗೆ ಈ ಸೃಷ್ಟಿಯಲ್ಲಿ ಎಲ್ಲಿ, ಹೇಗೆ ಸಂಚರಿಸಿದರೂ ಆಶೆ-ಅಂಜಿಕೆಗಳ ಕಾಟವಿಲ್ಲ.

—ಬುದ್ಧ

ವಿಷವೈದ್ಯ ಕೇಂದ್ರಕ್ಕೊಂದು ಕರೆ

ಆಗ ಪ್ರತಿಕ್ಷಣವೂ ಮಹತ್ವದ್ದಾಗಿ ಪರಿಣಮಿಸುತ್ತದೆ....

ತುಂಬ ಗಡಿಬಿಡಿಯಲ್ಲಿರುವ ನ್ಯೂಯಾರ್ಕ್ ನಗರದ ಕಛೇರಿಯೊಂದರಲ್ಲಿನ ದೂರವಾಣಿ ಒಮ್ಮೆ ಮಾತ್ರವೇ ಸದ್ದು ಮಾಡುತ್ತದೆ. "ವಿಷವೈದ್ಯ ಕೇಂದ್ರ. ನಾನೇನಾದರೂ ನಿಮಗೆ ಸಹಾಯ ಮಾಡಬಹುದೆ?" ಕಂಪ್ಯೂಟರ್ ಒಂದರ ಕಡೆಗೆ ತನ್ನ ಕುರ್ಚಿಯನ್ನು ತಿರುಗಿಸಿಕೊಳ್ಳುತ್ತ, ರಿಚರ್ಡ್ ವೀಸ್‌ಮನ್ ಚುರುಕಾಗಿ ಕೇಳುತ್ತಾರೆ. ಕಂಪ್ಯೂಟರಿನ ವರ್ಣಮಾಲೆಯ ಕೆಲವು ಅಕ್ಷರಗಳನ್ನು ಒತ್ತುತ್ತ ಒತ್ತುತ್ತಲೇ, ಆ ವಿಷವೈದ್ಯ ಕೇಂದ್ರದ ನಿರ್ದೇಶಕರಾಗಿರುವ ವೀಸ್‌ಮನ್ ಅವರು ಆ ಕರೆ ಮಾಡಿದ ವ್ಯಕ್ತಿಯನ್ನು ಉದ್ದೇಶಿಸಿ ಕೆಲವೊಂದು ತಟಕ್ಕನೆ ಉತ್ತರಿಸಬೇಕಾಗಿರುವ ಪ್ರಶ್ನೆಗಳನ್ನು ಹಾಕುತ್ತಾರೆ.

ಈ ದೂರವಾಣಿ ಮಾರ್ಗದ ಇನ್ನೊಂದು ಬದಿಯಲ್ಲಿ ಇರುವವರು ತುರ್ತು ಚಿಕಿತ್ಸಾ ಕೋಣೆಯಲ್ಲಿ ಕರ್ತವ್ಯದ ಮೇಲಿರುವ ವೈದ್ಯರು. ಕೈ-ಮಂಚಕ್ಕೆ ಬಿಗಿದು ಕಟ್ಟಲಾಗಿರುವ ಹಾಗೂ ತೀವ್ರವಾಗಿ ಕಂಪಿಸುತ್ತ ಇರುವ ಐದು ವರ್ಷದ ಹುಡುಗನೊಬ್ಬನಿಗೆ ನೆರವಾಗಲು ಆ ವೈದ್ಯರು ಕೊನೆಯುಗಳಿಗೆಯ ಸಾಹಸ ಮಾಡುತ್ತಿದ್ದಾರೆ. ತನ್ನ ಅಜ್ಜಿ ಬಳಸುತ್ತಿದ್ದ ಕ್ಷಯರೋಗದ ಔಷಧಿಯನ್ನು—ಐಸೋನಿಯಾಜಿಡ್ ಎಂಬ ಔಷಧಿಯನ್ನು—ಆ ಹುಡುಗ ಕುಡಿದು ಬಿಟ್ಟಿದ್ದಾನೆ. ಸಾವಿರಾರು ವಿಷಮಯ ವಸ್ತುಗಳ ಬಗೆಗಿನ ಮಾಹಿತಿಯನ್ನು ಕಂಪ್ಯೂಟರ್ ಜಾಲಾಡಿ, ಮಹತ್ವದ ಮಾಹಿತಿಯನ್ನು ಕಂಪ್ಯೂಟರ್ ತೆರೆಯ ಮೇಲೆ ಬಿಂಬಿಸುವವರೆಗಿನ ಕೆಲವು ಕ್ಷಣಗಳನ್ನು ಅವರು ಆತಂಕದಿಂದಲೇ ಕಾಯುತ್ತಾರೆ: "ತೀವ್ರವಾದ ವಿಷಪ್ರಾಶನದ ಸ್ಥಿತಿ—ಪ್ರತ್ಯೌಷಧ: ಅನ್ನಾಂಗ ಬಿ-೬."

ವೀಸ್‌ಮನ್ ತುರ್ತಾಗಿ ಕೇಳುತ್ತಾರೆ: "ನಿಮ್ಮಲ್ಲಿ ಅನ್ನಾಂಗ ಬಿ-೬ ಏನಾದರೂ ಇದೆಯೆ?

ಡಾಕ್ಟರ್ ಹೇಳುತ್ತಾರೆ: "ಇಲ್ಲಿಯೇ ಈಗಲೇ ಸಿಕ್ಕುತ್ತಿಲ್ಲ!"

ವೀಸ್‌ಮನ್ ಅಬ್ಬರಿಸುತ್ತಾರೆ: "ಈ ಕ್ಷಣವೇ ಒಂದಿಷ್ಟು ಅನ್ನಾಂಗ ಬಿ-೬ನ್ನು ನೀವು ಪತ್ತೆ ಮಾಡಬೇಕು. ನಿಮ್ಮ ಆಸ್ಪತ್ರೆಯಲ್ಲಿ ಎಲ್ಲಿಯಾದರೂ ಬಿ-೬ ಇದ್ದಿರಲೇಬೇಕು."

೧೯೮೩ರ ಸೆಪ್ಟೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟಿನ' ಮಾಸ ಪತ್ರಿಕೆಯಲ್ಲಿ ಪ್ರಕಟವಾದ "ಡಯಲ್ ದಿ ಪಾಯಿಜನ್ ಸೆಂಟರ್" ಎಂಬ ಹೋವರ್ಡ್ ಕೋಹ್ನ್ ಅವರ ಲೇಖನದ ಸರಳ ಅನುವಾದ.

ಕ್ಷಣಗಳು ಉರುಳುತ್ತ ಸಾಗುತ್ತಿದ್ದರೂ, ವೀಸ್‌ಮನ್ ದೂರವಾಣಿ ಗ್ರಾಹಕವನ್ನು ಕೈಯಲ್ಲಿ ಹಿಡಿದುಕೊಂಡೇ ಇರುತ್ತಾರೆ. ಇತ್ತ ಬಾಲಕನ ಜೀವ ಚಿಹ್ನೆಗಳು ಲಯತಪ್ಪುವ ಲಕ್ಷಣಗಳು ಕಾಣಿಸಿಕೊಳ್ಳತೊಡಗಿವೆ. ಕೊನೆಗೆ ವೈದ್ಯರು ಹೇಳುತ್ತಾರೆ: "ಒಂದಿಷ್ಟು ಬಿ–೬ನ್ನು ಪತ್ತೆಮಾಡಿದೆ." ವೀಸ್‌ಮನ್ ಅವರ ಸೂಚನೆಗಳನ್ನು ಅನುಸರಿಸಿ, ಆ ವೈದ್ಯರು ಬಿ–೬ ಅನ್ನಾಂಗದ ದ್ರವವನ್ನು ಆ ಬಾಲಕನ ರಕ್ತನಾಳಕ್ಕೆ ಚುಚ್ಚಿ ಹರಿಸುತ್ತಾರೆ. ಹುಡುಗನ ಕಂಪನ ಕಡಿಮೆಯಾಗಿ, ನಿದ್ರೆಯ ಸ್ಥಿತಿಗೆ ಬರುತ್ತಾನೆ.

ದೂರವಾಣಿ ಗ್ರಾಹಕವನ್ನು ನೇತುಹಾಕುತ್ತ, ವೀಸ್‌ಮನ್ ಅವರು ಸಮಾಧಾನದ ಉಸಿರು ಬಿಡುತ್ತಾರೆ. ಆ ಬಾಲಕ ಬದುಕಿ ಉಳಿಯುತ್ತಾನೆ ಎಂಬುದು ಅವರಿಗೆ ಈಗ ಖಚಿತವಾಗಿದೆ.

ನ್ಯೂಯಾರ್ಕಿನ ಈ ವಿಷವೈದ್ಯ ಕೇಂದ್ರಕ್ಕೆ ಹಾಗೂ ಅಮೆರಿಕಾ ಸಂಯುಕ್ತ ಸಂಸ್ಥಾನದ ಉದ್ದಕ್ಕೂ ಹರಡಿಕೊಂಡಿರುವ ಈ ಬಗೆಯ ವಿಷವೈದ್ಯ ಕೇಂದ್ರಗಳಿಗೆ ಪ್ರತಿ ದಿನವೂ ಇಂಥ ನೂರಾರು ಕರೆಗಳು ಬರುತ್ತಲೇ ಇರುತ್ತವೆ. ನ್ಯೂಯಾರ್ಕಿನ ಅತಿ ಸಾಹಸದ ತೀವ್ರ ಶಿಸ್ತಿನ ಈ ಕೇಂದ್ರಗಳ ವಾತಾವರಣದಲ್ಲಿ ಬಿಗುವಿನ ಸನ್ನಿವೇಶವೇನಾದರೂ ಇದ್ದಲ್ಲಿ, ಅದಕ್ಕೆ ಸಮುದ್ದೇಶವೇ ಕಾರಣವಾಗಿರುತ್ತದೆ: ಮನುಷ್ಯನನ್ನು ಕೊಂದುಬಿಡಬಲ್ಲ ಅಥವಾ ಗಂಭೀರವಾದ ಅಪಾಯವನ್ನು ಉಂಟುಮಾಡಬಲ್ಲ ಕನಿಷ್ಠ ೩೫,೦೦೦ ವಿಷವಸ್ತುಗಳಿವೆ. ಒಬ್ಬರಲ್ಲ ಒಬ್ಬರು, ಒಂದಲ್ಲ ಒಂದು ಕಡೆ, ಯಾವಾಗಲಾದರೂ ಈ ಮರಣಾಂತಿಕವಾದ ವಸ್ತುಗಳನ್ನು ಸೇವಿಸಿಬಿಟ್ಟಿರುತ್ತಾರೆ. ೧೯೫೬ರಲ್ಲಿ ಈ ಕೇಂದ್ರವನ್ನು ಸ್ಥಾಪಿಸಿದಾಗ, ಇಲ್ಲಿಯ ತಜ್ಞರು ವರ್ಷವೊಂದಕ್ಕೆ ಸುಮಾರು ೬,೦೦೦ ಕರೆಗಳಿಗೆ ಉತ್ತರಿಸಿದ್ದರು, ಇಂದು ಈ ತಜ್ಞರಿಗೆ ಬೆಂಬಲವಾಗಿ ನಿಂತಿರುವ ೧೪ ಮಂದಿ ವಿಷವೈದ್ಯ ಪರಿಣತರಿಗೆ ಹಾಗೂ ವೈದ್ಯಕೀಯ ಸಲಹೆಗಾರರಿಗೆ ಪ್ರತಿತಿಂಗಳೂ ಸುಮಾರು ಇಷ್ಟೇ ಸಂಖ್ಯೆಯ ಕರೆಗಳು ಬರುತ್ತ ಇರುತ್ತವೆ.

ಔಷಧ ಶಾಸ್ತ್ರಜ್ಞರೂ, ವಿಷವೈದ್ಯಶಾಸ್ತ್ರಜ್ಞರೂ ಆಗಿರುವ ೩೯ ವರ್ಷ ವಯಸ್ಸಿನ ವೀಸ್‌ಮನ್ ಅವರು ಐಸೋನಿಯಾಜಿಡ್ ವಿಷದ ಪ್ರತ್ಯೌಷಧ ಬಗೆಗಿನ ಮಹತ್ವದ ಮಾಹಿತಿಯನ್ನು 'ವಿಷಪ್ರತ್ಯೌಷಧ ಸಂಕೇತ ವ್ಯವಸ್ಥೆ' (Poisonindese System)ಯಿಂದ ಹುಡುಕಿ ತೆಗೆದಿದ್ದರು. ಇದು ಜಗತ್ತಿನಾದ್ಯಂತ ಹರಡಿಕೊಂಡಿರುವ ವಿಷ-ನಿಯಂತ್ರಣ ಕೇಂದ್ರಗಳಿಗಾಗಿಯೇ ಇರುವ ದೂರವಾಣಿ-ದತ್ತಾಂಶ-ಸೇವಾ ವ್ಯವಸ್ಥೆ (on-line data service)

ಮಾರಕ ವಸ್ತುಗಳ ಸಂಖ್ಯೆ ಪ್ರತಿ ವರ್ಷವೂ ಹೆಚ್ಚುತ್ತಲೇ ನಡೆದಿರುತ್ತದೆ. ಹೀಗಾಗಿ, 'ವಿಷ-ಪ್ರತ್ಯೌಷಧ ಸಂಕೇತ ವ್ಯವಸ್ಥೆ'ಯನ್ನು ಸತತವಾಗಿ ಆಧುನಿಕೀಕರಿಸುತ್ತಲೇ ಇರಬೇಕಾಗುತ್ತದೆ. ಇಷ್ಟಾಗಿಯೂ, ಈ ಸಂಬಂಧವಾದ ಕರೆಗಳಿಗೆ ಉತ್ತರಿಸುವ ವ್ಯಕ್ತಿಗಳು ಅನಿರೀಕ್ಷಿತ ಸನ್ನಿವೇಶಗಳನ್ನು ನಿರೀಕ್ಷಿಸಬೇಕಾಗಿ ಬರುವಂಥ ಸ್ಥಿತಿಯಲ್ಲಿಯೂ ಇರುತ್ತಾರೆ.

ಆಭರಣ ತಯಾರಕರಲ್ಲಿ ತರಬೇತಿ ಪಡೆಯುತ್ತಿದ್ದಂಥ ವ್ಯಕ್ತಿಯೊಬ್ಬನನ್ನು ಆಸ್ಪತ್ರೆಯ ತುರ್ತು ಚಿಕಿತ್ಸಾ ಕೋಣೆಗೆ ಧಾವಿಸಿ ಕರೆತರಲಾಗಿದೆ. ಹಳೆಯ ಉಂಗುರವೊಂದನ್ನು ಸುಂದರಗೊಳಿಸುತ್ತಿದ್ದ ಆ ತರಬೇತಿದಾರ, ಚೀಟಿ ಅಂಟಿಸದೆ ಇದ್ದ ಡಬ್ಬವೊಂದರಿಂದ ಸ್ವಚ್ಛತಾಕಾರಕ ದ್ರವವೊಂದನ್ನು ಬಗ್ಗಿಸಿಕೊಂಡು ಒಮ್ಮೆಗೇ ಕುಡಿದುಬಿಟ್ಟನೆಂದು ಆ ಘಟನೆಗೆ ಪ್ರತ್ಯಕ್ಷದರ್ಶಿಗಳಾಗಿದ್ದ ಸಾಕ್ಷಿಗಳು ಹೇಳಿದರು. ಆ ಕ್ಷಣದಲ್ಲಿಯೇ ಅವನು ನೆಲದ ಮೇಲೆ ಬಿದ್ದ; ಸೊಟ್ಟ ಸೊಟ್ಟಾಗಿ ತಿರುಚಿಕೊಂಡಿದ್ದ; ಅವನ ಬಾಯಿಂದ ನೊರೆ ಹೊರಬಂದಿತ್ತು ಎಂಬುದಾಗಿ ಅವರು ತಿಳಿಸಿದರು. ಆ ವ್ಯಕ್ತಿಯ ರಕ್ತದಲ್ಲಿದ್ದ ಆಮ್ಲಗಳ ತೀವ್ರತರಮಟ್ಟ, ಅಗಲಗೊಂಡಿದ್ದ ಕಣ್ಣಿನ ಪಾಪೆ, ಆಗತಾನೇ ಅತಿಯಾಗಿ ಉನ್ಮಾದಗೊಂಡಿದ್ದಂಥ ಅವನ ಮನಃಸ್ಥಿತಿ, ಅತ್ಯಂತ ಮರಣಾಂತಕ ವಿಷಗಳಲ್ಲಿ ಒಂದಾದ ಸಯನೈಡ್ ದ್ರವವನ್ನು—ಇದು ಆಭರಣ ತಯಾರಕರಲ್ಲಿ ಸುಲಭ ಲಭ್ಯವಾಗಿರುವಂಥ ಸಾಮಾನ್ಯವಸ್ತು—ಅವನು ಸೇವಿಸಿದ್ದುದು—ಇವೆಲ್ಲ ಅವನು ಆತ್ಮಹತ್ಯೆಗಾಗಿ ಪ್ರಯತ್ನಿಸಿದ್ದ ಎಂಬುದನ್ನು ಸೂಚಿಸುತ್ತಿದ್ದುವು.

ಇದು ಕರೆಗಳನ್ನು ಸ್ವೀಕರಿಸುವ ಔಷಧ ಶಾಸ್ತ್ರಜ್ಞೆಯಾದ ವಿಷ-ವೈದ್ಯ ಕೇಂದ್ರದ ಮೇರಿಯಾ ಮರ್ಕ್ಯೂರಿಯೋ ಅವರನ್ನು, ತೀವ್ರವಾದ ಇಬ್ಬಂದಿ ಸ್ಥಿತಿಗೆ ಸಿಲುಕಿಸಿತು. ಸಯನೈಡ್ ವಿಷಪ್ರಾಶನಕ್ಕೆ—ಅದು ಸಯನೈಡ್ ವಿಷ ಪ್ರಾಶನದ ಸಂದರ್ಭವೇ ಆಗಿದ್ದಲ್ಲಿ—ಅತ್ಯಂತ ಪರಿಣಾಮಕಾರಿಯಾದಂಥ ಪ್ರತ್ಯೌಷಧವಿದೆ. ಆದರೆ, ಈ ಚಿಕಿತ್ಸೆಯಲ್ಲಿ ಬಳಸಲಾಗುವ ಅಮೈಲ್‌ನೈಟ್ರೈಟ್ ಮತ್ತು ಸೋಡಿಯಮ್ ನೈಟ್ರೈಟುಗಳು, ಆ ವ್ಯಕ್ತಿ ಸಯನೈಡ್ ವಿಷವನ್ನು ಸೇವಿಸದೆ ಇದ್ದ ಸಂದರ್ಭದಲ್ಲಿ, ಅವನನ್ನು ಕೊಂದುಬಿಡಬಲ್ಲವು. ಮುಂದಿನ ಕ್ರಮವನ್ನು ಸೂಚಿಸುವುದಕ್ಕೆ ಮೊದಲು, ಕ್ಷಣಮಾತ್ರದಲ್ಲಿ ಮರ್ಕ್ಯೂರಿಯೋ ಅವರು ವಿಷವೈದ್ಯಶಾಸ್ತ್ರಜ್ಞರಾದ ರಾಬರ್ಟ್ ಹಾಫ್‌ಮನ್ ಅವರೊಂದಿಗೆ ಸಮಾಲೋಚಿಸಿದರು.

"ಹೋಗಿ, ಹೋಗಿ, ಬೇಗಹೋಗಿ" ಎಂದು ಹಾಫ್‌ಮನ್ ಅಬ್ಬರಿಸಿದರು.

ಆದರೆ, ಆಭರಣ ತಯಾರಿಕೆ ಸಂಸ್ಥೆಯಲ್ಲಿನ ಆ ತರಬೇತಿದಾರನ ಪಟ್ಟಿಗೆ ಆಗಾಗಲೇ ಕಾಲ ಮಿಂಚಿತ್ತು. ಮರ್ಕ್ಯೂರಿಯೋ ಆಮೇಲೆ ಹೇಳಿದರು. "ನಾಸಿಸ್ಸೋ ದೂರವಾಣಿಯಲ್ಲಿ ಮಾತನಾಡುತ್ತಿರುವಂತೆಯೇ ವ್ಯಕ್ತಿಯೊಬ್ಬ ಸತ್ತು ಹೋದದ್ದು ಇದೇ ಮೊದಲ ಸಲ. ಅಂಥ ಘಟನೆ ನಮ್ಮ ಮನಸ್ಸಿನ ಮೇಲೆ ಬಲವಾದ ಆಘಾತವನ್ನುಂಟು ಮಾಡುತ್ತದೆ."

ಅಸಾಧಾರಣವಾದ ಸಂಗತಿ ಎಂದರೆ, ಈ ಕೇಂದ್ರದೊಡನೆ ದೂರವಾಣಿಯ ಸಂಪರ್ಕದಲ್ಲಿ ಇರುವಾಗಲೇ ಸತ್ತಂಥವರ ಸಂಖ್ಯೆ ತೀರ ಕಡಿಮೆಯಾಗಿರುವುದು —ಒಂದು ಲಕ್ಷದಷ್ಟು ದೂರವಾಣಿ ಕರೆಗಳಲ್ಲಿ ೧೯೮೦ರಲ್ಲಿ ೩೦ ಮಂದಿ ಹಾಗೂ ೧೯೮೧ರಲ್ಲಿ ೧೮ ಮಂದಿ ಮಾತ್ರವೇ ಸತ್ತಿದ್ದರು. ಅತಿ-ಸೂಕ್ಷ್ಮ ಕಂಪ್ಯೂಟರ್ ವ್ಯವಸ್ಥೆ ಮತ್ತು ನ್ಯೂಯಾರ್ಕ್ ನಗರದ ತುರ್ತು ಚಿಕಿತ್ಸಾ ಕೋಣೆಯ ವೈದ್ಯರುಗಳಲ್ಲಿ ಹಾಗೂ ೭.೩ ದಶಲಕ್ಷ ಮಂದಿ ನಾಗರಿಕರಲ್ಲಿ ಈ ಕೇಂದ್ರದ ಹೆಸರು ತುದಿನಾಲಿಗೆಯ ಮೇಲೆ ಇರುವಂತೆ ಮಾಡಿರುವ ತೀವ್ರತರವಾದ ಪ್ರಚಾರಾಂದೋಲನ—ಇವೂ ಆಂಶಿಕವಾಗಿ ಈ ಯಶಸ್ಸಿನ ದರಕ್ಕೆ ಕಾರಣವಾಗಿವೆಯೆಂದು ವೀಸ್‌ಮನ್ ಹೇಳುತ್ತಾರೆ. ಇಷ್ಟಾಗಿಯೂ, ತಾವು ಎಂದೂ ಕಾಣದಿರುವಂಥ ವ್ಯಕ್ತಿಗಳ ಪ್ರಾಣವನ್ನು ಕಾಪಾಡಲು ಹಗಲಿರುಳೂ ಪ್ರಯತ್ನಿಸುತ್ತಲೇ ಇರುವ ಈ ಆತಂಕಮಯ ದೂರವಾಣಿ ಮಾರ್ಗದಲ್ಲಿನ ಪುರುಷರಲ್ಲಿ ಮತ್ತು ಮಹಿಳೆಯರಲ್ಲಿ ಸಾಣೆ ಹಿಡಿದಿರುವಷ್ಟರ ಮಟ್ಟಿಗೆ ತೀವ್ರವಾಗಿ ಕ್ರಿಯಾಶೀಲವಾಗಿರುವ ಮನಃಪ್ರವೃತ್ತಿ ಅಥವಾ ಶ್ರದ್ಧೆ ಇಲ್ಲದೆ ಹೋಗಿದ್ದರೆ, ಈ ಎಲ್ಲ ತಾಂತ್ರಿಕ ಸೌಲಭ್ಯ ಮತ್ತು ಪ್ರಚಾರಗಳಿಂದಷ್ಟೇ ಹೆಚ್ಚಿನದೇನೂ ಸಾಧಿತವಾಗುತ್ತಿರಲಿಲ್ಲ.

"ಅವರ ಮುಖಗಳನ್ನು ಸುರಿಯುವ ನೀರಿನ ನಲ್ಲಿಯ ಬಾಯಿಗೆ ಹಿಡಿಯಿರಿ. ಅವರ ಕಣ್ಣುಗಳನ್ನು ಚೆನ್ನಾಗಿ ತೊಳೆಯಿರಿ. ಕನಿಷ್ಠ ಪಕ್ಷ ೧೫ ನಿಮಿಷ ನೀರು ಹರಿಯುತ್ತ ಇರಲಿ."—ದೂರವಾಣಿ ಕರೆ ಮಾಡಿದ ವ್ಯಕ್ತಿಯೊಬ್ಬನಿಗೆ ಈ ಕೇಂದ್ರದ ಸಿಬ್ಬಂದಿ ವರ್ಗದವರೊಬ್ಬರು ಹೀಗೆಂದು ಸೂಚನೆ ಕೊಡುತ್ತಾರೆ. ನೀರಿನ ಪಿಸ್ತೂಲುಗಳಂತೆ ಕೆಲಸಮಾಡುವ, ಒಲೆಗೂಡನ್ನು ಚೊಕ್ಕಟಗೊಳಿಸುವ ವಸ್ತುಗಳನ್ನು ಒಳಗೊಂಡಿರುವ ಎರಡು ತುಂತುರು ಚಿಮುಕಿಸುವ ಡಬ್ಬಗಳನ್ನು ಹಿಡಿದುಕೊಂಡಿದ್ದ ಇಬ್ಬರು ತರುಣ ವಯಸ್ಕರು ಆಕಸ್ಮಿಕವಾಗಿ ಒಬ್ಬರು ಇನ್ನೊಬ್ಬರ ಮೇಲೆ ಆ ಸುಡುವ ದ್ರವ್ಯವನ್ನು ಬಲವಾಗಿ ಚಿಮುಕಿಸಿ ಬಿಟ್ಟಿದ್ದರು. ಹುಚ್ಚರಂತಾಗಿಬಿಟ್ಟಿದ್ದ, ಅತಿಯಾಗಿ ತಳಮಳಗೊಂಡಿದ್ದ ಅವರ

ತಂದೆ-ತಾಯಿಗಳು ಶಾಶ್ವತವಾದ ಯಾವುದೇ ಅಪಾಯಕಾರಿ ಪರಿಣಾಮವುಂಟಾಗು ವುದಕ್ಕೆ ಮುನ್ನವೇ ಮಕ್ಕಳ ಕಣ್ಣುಗಳನ್ನು ಚೆನ್ನಾಗಿ ತೊಳೆದುಬಿಟ್ಟರು.

ಪ್ರತಿ ವರ್ಷ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಉಂಟಾಗುವ ಐವರಿಂದ ಹತ್ತು ದಶಲಕ್ಷದಷ್ಟು ವಿಷಪ್ರಾಶನದ ಪ್ರಕರಣಗಳಲ್ಲಿ ಬಹುಪಾಲಿನವು ಮನೆ ಗಳಲ್ಲಿಯೇ ಸಂಭವಿಸುತ್ತವೆ. ಇವುಗಳೆಲ್ಲ ದೈನಂದಿನ ಗೃಹೋಪಯೋಗಿ ವಸ್ತು ಗಳ ತಪ್ಪು ಬಳಕೆಯ ನೇರ ಪರಿಣಾಮಗಳೇ ಆಗಿರುತ್ತವೆ. ವೈದ್ಯರ ಚೀಟಿಗಳು ಮತ್ತು ವೈದ್ಯರ ಚೀಟಿಗಳಿಲ್ಲದೆಯೇ ಔಷಧ-ವಸ್ತುಗಳ ಅಂಗಡಿಗಳಲ್ಲಿ ಮಾರಾಟ ವಾಗುವ ಔಷಧಗಳು ಅರ್ಧದಷ್ಟು ಸಮಸ್ಯೆಗಳಿಗೆ ಕಾರಣವಾಗಿರುತ್ತವೆ; ಮನೆ ಬಳಕೆಯ ಸ್ವಚ್ಛತಾಕಾರಕ ವಸ್ತುಗಳು, ಅಲಂಕರಣ ವಸ್ತುಗಳು (ಪ್ರಸಾಧನ ಗಳು), ಕೀಟನಾಶಕಗಳು, ಮದ್ಯಸಾರಗಳು ಮತ್ತು ಕೊಳೆತ ಆಹಾರ ಪದಾರ್ಥ ಗಳು ಇನ್ನುಳಿದ ವಿಷಪ್ರಾಶನದ ಸಂದರ್ಭಗಳಿಗೆ ಕಾರಣವಾಗಿರುತ್ತವೆ. ಅಟ್ಟ ದಿಂದ ಹಿಡಿದು ಗರಾಜಿನವರೆಗೆ ಪ್ರತಿಯೊಂದು ನಿವಾಸದಲ್ಲಿನ ಪ್ರತಿಯೊಂದು ಕೋಣೆಯೂ ಮಾರಕವಾದ ವಸ್ತುಗಳನ್ನು ಒಳಗೊಂಡಿರುತ್ತದೆ.

ಈ ಕೇಂದ್ರಕ್ಕೆ ಬರುವ ಅರ್ಧಕ್ಕೂ ಹೆಚ್ಚು ಪ್ರಕರಣಗಳು ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಂಬಂಧಪಟ್ಟ ಪ್ರಕರಣಗಳೇ ಆಗಿರುತ್ತವೆ. ಇವರ ಬಗ್ಗೆ ವೀಸ್‌ಮನ್ ಹೀಗೆನ್ನುತ್ತಾರೆ. "ಮಕ್ಕಳು ಮಹಾ ಅನುಕರಣಶೀಲರು ಮತ್ತು ಮಹಾ ಅನ್ವೇಷಿಗಳು ಹೀಗಾಗಿ, ಅವರು ಬಹುಮಟ್ಟಿಗೆ ಸತತವಾಗಿ ತಮ್ಮನ್ನು ಅಪಾಯಗಳಿಗೆ ಒಡ್ಡಿಕೊಂಡೇ ಇರುತ್ತಾರೆ."

"ಕ್ಯಾಮರಾದ ಸಣ್ಣ ಬ್ಯಾಟರಿ ಕೋಶವನ್ನು ನುಂಗಿಬಿಟ್ಟಿರುವ ಅಥವಾ ವಿಷಯುಕ್ತವಾಗಿರುವ ಫಿಲೋಡೆಂಡ್ರಾನ್ ಗಿಡದ ಎಲೆಗಳನ್ನು ಅಗಿದುತಿಂದು ಬಿಟ್ಟಿರುವ ಮಗುವಿನ ವಿಷಯವಲ್ಲಿ ಏನು ಮಾಡಬೇಕು?"—ಪ್ರತಿ ತಿಂಗಳೂ ಸುಮಾರು ೩೫೦೦ರಷ್ಟು ಇಂಥ ಕರೆಗಳು ಮಕ್ಕಳ ತಂದೆತಾಯಿಯರಿಂದ ಮತ್ತು ಶಿಶುಪಾಲನಾಲಯಗಳಿಂದ ಬರುತ್ತ ಇರುತ್ತವೆ. ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳ ವಿಷಯದಲ್ಲಿ ಮೊದಲ ಶ್ರೇಣಿಯ ಕೊಲೆಗಾರನೆಂದರೆ ಕಬ್ಬಿಣದ ಅಂಶವನ್ನುಳ್ಳ ಗುಳಿಗೆಗಳು. ಇನ್ನು ಬಹುತೇಕವಾಗಿ ಸಿಹಿ-ಕವಚ ವನ್ನುಳ್ಳವಾಗಿದ್ದು, ಇತರ ಅನ್ನಾಂಗಗಳ ಗುಳಿಗೆಗಳ ಜೊತೆಗೆ ನಮ್ಮ ಅಡುಗೆ ಮನೆಗಳಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತವೆ. ತಂದೆ-ತಾಯಿಗಳ ಗಮನ ಬೇರೆ ವಿಷಯಗಳತ್ತ ಹರಿದಿರುವ ಸಂಜೆಯ ಊಟದ ಹೊತ್ತು ಮಕ್ಕಳ ದೃಷ್ಟಿ ಯಿಂದ ಅಪಾಯದ ಹೊತ್ತೇ ಆಗಿರುತ್ತದೆ.

ಇತರ ಪುರುಷರು ಮತ್ತು ಮಹಿಳೆಯರ ಮಟ್ಟಿಗೆ ಅಪಾಯದ ಅವಧಿ ಸಾಮಾನ್ಯ ಬರುವುದು ನಡುರಾತ್ರಿಯ ಸಮಯದಲ್ಲಿ. ಆಗ ನಿದ್ದೆ ಬಾರದಿರುವ ವಯಸ್ಕರು ಕೈಗೆ ಸಿಕ್ಕುವ ಯಾವ ಯಾವುದೋ ಗುಳಿಗೆಗಳನ್ನು ನುಂಗಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ. ಶೇ. ೧೫ಕ್ಕೂ ಹೆಚ್ಚು ಪ್ರಮಾಣದ ಈ ಕೇಂದ್ರದಲ್ಲಿನ ಪ್ರಕರಣಗಳು ಉದ್ದೇಶಪೂರ್ವಕ ವಿಷಪ್ರಾಶನದ ಪ್ರಸಂಗಗಳೇ ಆಗಿರುತ್ತವೆ. ಬಹುತೇಕ ಪ್ರಸಂಗಗಳಲ್ಲಿ, ಸಾಯಬೇಕೆಂದೇ ಬಯಸಿರುವಂಥ ವ್ಯಕ್ತಿಗಳನ್ನು ಬದುಕಿಸುವುದು ಕಷ್ಟವಾಗುತ್ತದೆ. ವಿಷ-ವೈದ್ಯ ಕೇಂದ್ರದ ಸಿಬ್ಬಂದಿಯ ಮಟ್ಟಿಗೆ, ಲಭ್ಯವಾಗುವ ಸಾಕ್ಷ್ಯಗಳು ದಾರಿತಪ್ಪಿಸುವಂಥವೂ ಆಗಿರಬಹುದು.

ಐವತ್ತು ವರ್ಷದ ಮಹಿಳೆಯೊಬ್ಬಳು ಉದ್ವಿಗ್ನ ಸ್ಥಿತಿಯಲ್ಲಿ ಅಲೆದಾಡುತ್ತಿದ್ದಾಳೆ ಎಂಬುದಾಗಿ ಒಮ್ಮೆ ಈ ಕೇಂದ್ರಕ್ಕೆ ವೈದ್ಯರೊಬ್ಬರಿಂದ ಕರೆ ಬಂದಿತ್ತು. ಆಕೆ ಸ್ಥಿತಿ-ಕುಡಿದು ಮತ್ತೇರಿದಂಥವರ ಸ್ಥಿತಿಯನ್ನು ಹೋಲುತ್ತಿತ್ತು. ಆದರೆ, ಮದ್ಯಸಾರವನ್ನು ಸೇವಿಸಿದ್ದ ಲಕ್ಷಣವೇನೂ ಕಂಡುಬರುತ್ತಿರಲಿಲ್ಲ. ಆಕೆಯ ಮುಷ್ಟಿಯಲ್ಲಿ ವಿಷಣ್ಣತೆಯನ್ನು ದೂರಮಾಡುವ ಡೋಕ್ಸೆಪಿನ್ ಔಷಧದ ಖಾಲಿ ಸೀಸೆಯೊಂದಿತ್ತು. ಅದೇ ಕೊನೆಯ, ನಿರ್ಧಾರಕವಾದ ಸೂಚನೆಯಾಗಿ ಕಂಡಿತು. ಆದರೆ, ಅದಕ್ಕೂ ಅವಳಲ್ಲಿ ತೋರಿಬರುತ್ತಿದ್ದ ಲಕ್ಷಣಗಳಿಗೂ ಯಾವುದೇ ಹೋಲಿಕೆಯೂ ಇರಲಿಲ್ಲ.

ಕೆಲವು ಘಂಟೆಗಳ ತರುವಾಯ ರಕ್ತಪರೀಕ್ಷೆ ಮತ್ತು ಸಕಾರಣ ಊಹೆಗಳು ಅವಳ ಸ್ಥಿತಿಗೆ ಮೆಥನಾಲ್ ಕಾರಣವಾಗಿದ್ದಿರಬೇಕೆಂಬುದನ್ನು ತೋರಿಸಿಕೊಟ್ಟವು. ಇದು ಗಾಳಿ ತಡೆಯನ್ನು ತೊಳೆಯಲು ಉಪಯೋಗಿಸುವ ದ್ರವದ ಅಂಗಭಾಗವಾಗಿರುವ ವಸ್ತುವೇ ಆಗಿತ್ತು. ಇದಕ್ಕೆ ಈಥೈಲ್ ಆಲ್ಕೋಹಾಲ್ ಪ್ರತ್ಯೌಷಧವಾಗಿತ್ತು—ಅಂದರೆ, ಸರಳವಾದ ಕುಡಿಯುವ ಹಳೆಯ ಆಲ್ಕೋಹಾಲ್. ಆ ಮಹಿಳೆಗೆ ರಕ್ತನಾಳದ ಮೂಲಕ ಆಲ್ಕೋಹಾಲಿನ ಡ್ರಿಪ್ ನೀಡಲಾಯಿತು ಹಾಗೂ ಆಕೆಯ ಪ್ರಾಣವನ್ನು ರಕ್ಷಿಸಲಾಯಿತು. ಆಕೆ ಮುಷ್ಟಿಯಲ್ಲಿ ಹಿಡಿದಿದ್ದ ಸೀಸೆ ಸುಳ್ಳು ಸೂಚನೆಯಾಗಿದ್ದು ಸಾಯುವ ಉದ್ದೇಶವನ್ನು ಇರಿಸಿಕೊಂಡು ನೀಡಲಾದ ಪ್ರಾಣ-ಘಾತಕ ದಾರಿ-ತಪ್ಪಿಸುವಿಕೆ ಕ್ರಮವಾಗಿತ್ತು. ಇಂಥ ಪ್ರಕರಣಗಳನ್ನು ದೃಷ್ಟಿಯಲ್ಲಿರಿಸಿಕೊಂಡೇ ವೀಸ್‌ಮನ್ ಹೇಳುತ್ತಾರೆ. "ಪ್ರತಿ ದಿನವೂ ನಾವು ಪತ್ತೇದಾರರಾಗಿ ಕೆಲಸಮಾಡಬೇಕಾಗುತ್ತದೆ."

ದೂರವಾಣಿ ಕರೆಗಳಿಗೆ ಉತ್ತರಿಸಲು ಸಾಕಷ್ಟು ಕಾಲವನ್ನು ವಿನಿಯೋಗಿಸಿದ್ದೇ ಆದರೆ, ನೀವು ಇದೆಲ್ಲವನ್ನೂ ಕೇಳಬಹುದು ಎಂದು ಕೇಂದ್ರದಲ್ಲಿನ ಅಧಿಕಾರಿಗಳು ಹೇಳುತ್ತಾರೆ: ಕೆರಿಬಿಯನ್ ದ್ವೀಪಗಳಿಂದ ಆಗತಾನೇ ಹಿಂದಿರುಗಿ ಬಂದಿರುವ ಪ್ರವಾಸಿಯೊಬ್ಬನಿಗೆ, ಅಲ್ಲಿದ್ದಾಗ ವಿಷದ ಮುಳ್ಳಿನ ಹವಳದ ಕಲ್ಲಿನಿಂದ ಗೀರು ಗಾಯವಾಗಿದ್ದ ಪ್ರಸಂಗ; ಮಾರ್ಜಕಗಳಿಂದ ದೂಷಿತವಾಗಿದ್ದ ಮೃದು ಪೇಯ ಗಳ ಸೀಸೆಯ ಪ್ರಕರಣ; ಕೀಟನಾಶಕ ದೂಳಿಯನ್ನು ಮಾಸಿದ ಕಿರಿಯರ ಸ್ಕೌಟ್ ದಳದ ಪ್ರಕರಣ—ಇಂಥ ಅನೇಕ ನಿದರ್ಶನಗಳನ್ನು ಅವರು ನಿಮ್ಮ ಗಮನಕ್ಕೆ ತರಬಲ್ಲರು.

ಜುಲೈ ತಿಂಗಳ ಬೇಸಿಗೆಯ ಒಂದು ದಿವಸ ಮಧ್ಯಾಹ್ನ ಮರ್ಕ್ಯೂರಿಯೋ ತಮ್ಮ ಅಂದಿನ ಕೊನೆಯ ಕರೆಗೆ ಉತ್ತರಿಸುತ್ತಾರೆ. ಕರೆಮಾಡಿದ ಮಹಿಳೆ ಈ ಪ್ರಶ್ನೆಯನ್ನು ಕೇಳುತ್ತಾಳೆ: ೧೯೩೩ಕ್ಕೂ ಹಿಂದೆ ಮೊಹರು ಮಾಡಲಾಗಿರುವ ಡಬ್ಬದಲ್ಲಿರುವ ಬೀರನ್ನು ಕುಡಿಯುವುದು ಕ್ಷೇಮಕರವೇ ಎಂಬುದನ್ನು ನನ್ನ ಗಂಡ ತಿಳಿಯಬಯಸುತ್ತಾನೆ. ಅದೇನಾದರೂ ಕೆಟ್ಟುಹೋಗಿರುವ ಸಂಭವ ವಿದೆಯೇ ?"

ಮರ್ಕ್ಯೂರಿಯೋ ಹೇಳುತ್ತಾರೆ: "ಅದು ಮೊಹರಾಗಿದ್ದರೆ, ಕೆಟ್ಟೇನೂ ಹೋಗಿರುವುದಿಲ್ಲ. ಪೆಟ್ಟಿಯ ಅಂಚಿನ ಲೋಹ ಸ್ವಲ್ಪಮಟ್ಟಿಗೆ ಸರಿದು ಗಾಳಿ ತೂರಿರಬಹುದಾದರೂ, ಅದು ತೀರ ಅಲ್ಪವಾದ, ದೀರ್ಘಕಾಲದಲ್ಲಿ ಉಂಟಾಗ ಬಹುದಾದ ಅಪಾಯವಷ್ಟೆ, ಬಹುಶಃ ಅದನ್ನು ಕುಡಿದರೆ ಅಪಾಯವೇನೂ ಆಗಲಾರದು." ಒಂದು ನಿಮಿಷ ತಡೆದು ಆಕೆ ಹೇಳುತ್ತಾರೆ: "ಆದರೆ, ಅದು ೧೮ ವರ್ಷದಷ್ಟು ಹಳೆಯ ಬೀರಿನ ರುಚಿಯನ್ನು ಹೊಂದಿರುತ್ತದೆ." ಮರ್ಕ್ಯೂರಿಯೋ ಮುಗುಳ್ನಗುತ್ತ ದೂರವಾಣಿಯ ಗ್ರಾಹಕವನ್ನು ನೇತು ಹಾಕುತ್ತಾರೆ. ಆ ವ್ಯಕ್ತಿ ತನ್ನ ಬಳಿ ಪ್ರಸಿದ್ಧ ಸುಗ್ಗಿಯ ಮದ್ಯ (ಹಳೆಯ ಮದ್ಯ) ಇದೆಯೆಂದು ಭಾವಿಸಿದನೇ ಅಥವಾ ಒಂದಿಷ್ಟು ಹಣವನ್ನು ಉಳಿಸ ಬೇಕೆಂದು ಯೋಚಿಸಿದನೆ ?—ಎಂದು ಯೋಚಿಸುವಾಗ, ಆಭರಣ ತಯಾರಕನ ಸಂಸ್ಥೆಯಲ್ಲಿನ ತರಬೇತಿದಾರನ ಮತ್ತು ಸಯನೈಡ್ ವಿಷದ ವಿಚಾರ ನೆನಪಿಗೆ ಬರುತ್ತದೆ. ಬದಲಾವಣೆಗಾಗಿಯಾದರೂ, ವಿಷ-ವೈದ್ಯ ಕೇಂದ್ರದಿಂದ ನಗು ನಗುತ್ತ ಹೊರಬರುವುದು ಒಳ್ಳೆಯದು ಎಂದು ಕೊಳ್ಳುತ್ತಾಳೆ.

ಡಾ. ಪ್ರಧಾನ್ ಗುರುದತ್ತ

ಲೈಂಗಿಕ ಆಚರಣೆಯ ಚಿಕಿತ್ಸಕಸಾಮರ್ಥ್ಯ

[ಲೈಂಗಿಕ ಆಚರಣೆ ಶೀಘ್ರ ಆರೋಗ್ಯ ಪಡೆಯಲು ನಿಜವಾಗಿಯೂ ಸಹಾಯಕ ವಾಗಬಹುದು.]

ನಿಮ್ಮ ಚಿಕಿತ್ಸಕಮನಸ್ಸು ಎಂಬ ಲೇಖನದ ಕರ್ತೃ ಡಾ॥ ರೀಡ್ ಮಾಸ್ಕೊವಿಟ್ಸ್ "ಲೈಂಗಿಕ ಆಚರಣೆ ಚಿಕಿತ್ಸಕವಾಗಬಹುದೆ?" ಎಂದು ಪ್ರಶ್ನಿಸಿ "ಆಗಬಹುದು" ಎಂದು ಹೇಳುತ್ತಾರೆ. ವ್ಯಕ್ತಿ ಯಾವ ಅನಾರೋಗ್ಯಲಕ್ಷಣ ಗಳಿಂದ ಬಾಧಿತನಾಗಿದ್ದರೂ—ತಲೆನೋವು, ಬೆನ್ನುನೋವು, ನಿರುತ್ಸಾಹ, ಜುಗುಪ್ಸೆ—ಇವೆಲ್ಲವುಗಳ ಮೇಲೆ ಸುಖದಾಂಪತ್ಯಾಚರಣೆ ಅನುಕೂಲಪರಿಣಾಮ ವನ್ನುಂಟುಮಾಡಬಹುದು. ಲೈಂಗಿಕಾಚರಣೆ ದೇಹ ರಕ್ಷಣಾ ವ್ಯೂಹವನ್ನು ಉತ್ತೇಜಿಸಬಹುದು; ನೋವುಶಮನ ಮಾಡಬಹುದು; ಕೆಲವು ರೀತಿಯ ತಲೆಶೂಲೆಯನ್ನು ಕಡಿಮೆ ಮಾಡಬಹುದು; ಮಾನಸಿಕವಾಗಿ ಪ್ರಯೋಜನಕರ ವಾಗಿಯೂ ಇರಬಹುದು—ಎಂದು ಪ್ರಾಯೋಗಿಕ ವ್ಯಾಸಂಗಗಳು ಸೂಚಿಸಿವೆ.

ಮೇಲೆ ಹೇಳಿರುವ ಸೂಚನೆಗಳ ಗುಟ್ಟು ಮನೋಭಾವಗಳಿಗೂ ದೇಹಾ-ರೋಗ್ಯಕ್ಕೂ ಇರುವ ಸಂಬಂಧವನ್ನು ಆಧರಿಸಿದೆ. ಕೋಪ, ಆತಂಕ, ತಪ್ಪಿತಸ್ಥ ಪ್ರಜ್ಞೆ, ಖಿನ್ನತೆ ಇಂಥ ಭಾವನೆಗಳು ಅಡ್ರೀನಲಿನ್ನಿನಿಂದ ಸಾಧಿಸಲ್ಪಡುವ ಸಂಕಷ್ಟಪರಿಹಾರಕ ಪ್ರತಿಕ್ರಿಯೆಯನ್ನು ತತ್‌ಕ್ಷಣ ಪ್ರಾರಂಭಿಸುತ್ತವೆ. ಇಂಥ ಪ್ರತಿಕ್ರಿಯೆ ಆಗಿಂದಾಗ್ಗೆ ಬಹುಕಾಲದಿಂದ ಆಗುತ್ತಿದ್ದರೆ ಅದರಿಂದ ನಮ್ಮ ಎಲ್ಲ ದೇಹಕ್ರಿಯೆಗಳ ಮೇಲೂ ಅನನುಕೂಲಪರಿಣಾಮ ಉಂಟಾಗಿ ಕೊನೆಗೆ ನಮ್ಮ ದೇಹ ರಕ್ಷಣಾ ವ್ಯೂಹದ ಕ್ರಿಯೆ ಶಿಥಿಲಗೊಳ್ಳುತ್ತದೆ.

ಇದಕ್ಕೆ ಮದ್ದು? "ಮಧುರ ಭಾವನೆಗಳು—ತಮಾಷೆ, ಉಲ್ಲಾಸ—ಲೈಂಗಿಕಾ ಚರಣೆಯಿಂದ ಉದ್ಭವಿಸುವಂಥವು. ಲೈಂಗಿಕಾಚರಣೆ ಮನಸ್ಸು ಬಿಗಿಯಾಯಿಸಿರುವ ಸ್ಥಿತಿಯಿಂದ ಅದನ್ನು ವಿಮೋಚಿಸಿ ಅಡ್ರೀನಲಿನ್ನಿನ ಕಾರ್ಯಕ್ರಮವನ್ನು ತಡೆಗಟ್ಟುತ್ತದೆ" ಎಂದು ಮಾಸ್ಕೊವಿಟ್ಸ್ ಹೇಳುತ್ತಾರೆ. ಸಂಭೋಗದಲ್ಲಿ ಆ ಸಮಯದಲ್ಲಿ ನೈಸರ್ಗಿಕ ನೋವುನಾಶಕಗಳಾದ ಎಂಡಾರ್ಫಿನ್‌ಗಳೆಂಬ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತದೆ. ಮಾಸ್ಕೊವಿಟ್ಸ್ ಹೇಳುವಂತೆ

೧೯೯೩ರ ಜುಲೈ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ವಾನ್ ಕ್ರಿಯುಲ್ಲರ್ ಎಂಬವರ ಲೇಖನದ ಸರಳಾನುವಾದ.

ಈ ರಾಸಾಯನಿಕಗಳು ವ್ಯಾಪಕವಾಗಿ ಆರಾಮಕಾರಕ ಹಾಗೂ ಚಿಕಿತ್ಸಕ ಸನ್ನಿವೇಶವನ್ನುಂಟುಮಾಡಿ ಪುನರಾರೋಗ್ಯ ಲಭ್ಯವಾಗುವುದಕ್ಕೆ ಅವಕಾಶ ಮಾಡಿಕೊಡುತ್ತವೆ.

ಲೈಂಗಿಕ ಆಚರಣೆ ಆರೋಗ್ಯವನ್ನು ಕುದುರಿಸುತ್ತದೆ ಎಂದು ನಂಬಿಕೆ ಉಳ್ಳವರು ಪಾಸ್ಕೊವಿಟ್ಸ್ ಒಬ್ಬರೇ ಅಲ್ಲ. ಡಾ|| ಡೇವಿಡ್ ಸೋಬೆಲ್ ಮತ್ತು ರಾಬರ್ಟ್ ಆರ್ನ್‌ಸ್ಟೈನ್ ಎಂಬವರು ತಮ್ಮ "ಆರೋಗ್ಯಕರ ಸಂತೋಷಕಾರಕಗಳು" ಎಂಬ ಪುಸ್ತಕವಲ್ಲಿ "ಲೈಂಗಿಕ ಕ್ರಮದಿಂದ ಗುಣವಾಗುವ ಸಂಗತಿ ವಾಸ್ತವ" ಎಂದು ಹೇಳುತ್ತಾರೆ. ಲೈಂಗಿಕಾಚರಣೆಗೂ ಅನಾರೋಗ್ಯಕ್ಕೂ ನೇರ, ಕೆಲವು ವೇಳೆ ಅನಿರೀಕ್ಷಿತ ಮಾರ್ಗಗಳ ಮೂಲಕ ಇರುವ ಸಂಬಂಧವನ್ನು ವ್ಯಾಸಂಗಗಳು ದಾಖಲಿಸಿವೆ.

ಹೃದಯ : ಲೈಂಗಿಕ ತೃಪ್ತಿಯ ಅಭಾವ ಹೃದ್ರೋಗಕ್ಕೆ ಈಡಾಗುವಿಕೆಗೆ ಕಾರಣವಾಗಿರಬಹುದಾದ ಸಾಧ್ಯತೆಯನ್ನು ಸೂಚಿಸುವ ಮುಂದುವರಿದ ವ್ಯಾಸಂಗದ ಯೋಚನೆ ಮಾಡಬೇಕು" ಎಂದು ನ್ಯೂಯಾರ್ಕಿನ "ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಬೈಯೋ ಎನರ್ಜೆಟಿಕ್ಸ್ ಅನಾಲಿಸಿಸ್"ನ ಡೈರೆಕ್ಟರೂ "ಪ್ರೇಮಪೂರ್ವಕ ಲೈಂಗಿಕಾಚರಣೆ ಹಾಗೂ ನಿಮ್ಮ ಹೃದಯ" ಎಂಬುದರ ಲೇಖಕರೂ ಆದ ಅಲೆಗ್ಸಾಂಡರ್ ಲೊವೆನ್ ಎಂಬ ಮನೋರೋಗ ವಿಜ್ಞಾನಿ ಹೇಳುತ್ತಾರೆ. ಹೃದಯಾಘಾತದ ಚಿಕಿತ್ಸೆ ಪಡೆದ ನೂರು ಮಂದಿ ಸ್ತ್ರೀಯರಲ್ಲಿ ೬೫ ಜನ ಆಸ್ಪತ್ರೆಗೆ ದಾಖಲಾಗುವ ಮುನ್ನ ಲೈಂಗಿಕವಾಗಿ ತಾವು ಅತೃಪ್ತರು ಎಂದು ಹೇಳಿದರು. ೧೩೧ ಮಂದಿ ಗಂಡಸರನ್ನು ಒಳಗೊಂಡ ಇನ್ನೊಂದು ವ್ಯಾಸಂಗದಲ್ಲಿ ಮೂರನೇ ಎರಡು ಮಂದಿ ತಮ್ಮ ಹೃದಯಾಘಾತಕ್ಕೆ ಮುನ್ನ ಗಣನೀಯವಾದ ಲೈಂಗಿಕ ಸಮಸ್ಯೆಗಳಿಗೆ ಈಡಾಗಿದ್ದರೆಂದು ತಿಳಿದು ಬಂತು.

"ಹುರುಪಿನ ಲೈಂಗಿಕಾಚರಣೆ ಒಂದು ಶ್ರಮ ಕಾರ್ಯಾಚರಣೆಯಂತೆಯೇ" ಎಂದು ವಿಸ್ಕಾನ್ಸಿನ್ನಿನ ಮೆಡಿಕಲ್ ಕಾಲೇಜಿನಲ್ಲಿ ಪ್ರಸೂತಿಶಾಸ್ತ್ರ, ಸ್ತ್ರೀರೋಗ ಮತ್ತು ಮನೋರೋಗಗಳ ಸಹಪ್ರಾಧ್ಯಾಪಕರಾದ ಡಾ|| ಆಲ್‌ಫ್ರೆಡ್ ಫ್ರೇಂಜರ್ ಹೇಳುತ್ತಾರೆ. ಅವರು ಉದಹರಿಸುವಂತೆ ೫೫ ಕಿಲೋ ತೂಕದ ಒಬ್ಬ ಹೆಂಗಸು ಇಂಥ ಲೈಂಗಿಕ ಕ್ರಿಯೆಯಲ್ಲಿ ಮಿನಿಟಿಗೆ ೮ ಕಿಲೋ ಕ್ಯಾಲರಿಯಷ್ಟು ಶಕ್ತಿಯನ್ನೂ ೮೦ ಕಿಲೋ ತೂಕದ ಗಂಡಸು ೧೨ ಕಿಲೋ ಕ್ಯಾಲರಿಯಷ್ಟು ಶಕ್ತಿಯನ್ನೂ ವ್ಯಯ ಮಾಡುತ್ತಾರೆ.

ದೇಹ ರಕ್ಷಣಾ ವ್ಯೂಹ: ಓಹಾಯೋ ಪ್ರಾಂತ್ಯದ ಯೂನಿವರ್ಸಿಟಿ ಕಾಲೇಜ್ ಆಫ್ ಆಸ್ಟಿಯೋಪ್ಯಾತಿಕ್ ಮೆಡಿಸನ್ನಿನಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರದ ಪ್ರಾಧ್ಯಾಪಕರಾದ ಡಾ|| ಡಡ್ಲಿ ಚಾಪ್ಮನ್‌ರ ಹೆಂಗಸು ರೋಗಿಗಳಲ್ಲಿ ಸ್ತನದ ಅರ್ಬುದ ರೋಗದ ವಿಷಯವಾಗಿ ಅನೇಕ ಪ್ರಾಯೋಗಿಕ ವ್ಯಾಸಂಗ ಒಂದನ್ನು ಮಾಡಿದರು. ಅದರಿಂದ ಯಾರು ತಮ್ಮ ಜೀವನದಲ್ಲಿ ಆತ್ಮೀಯ ತೃಪ್ತಿ ಪಡೆದವರಾಗಿದ್ದರೊ ಅವರಲ್ಲಿ ದೇಹ ರಕ್ಷಣಾ ವ್ಯೂಹದಲ್ಲಿ ಪ್ರಧಾನಪಾತ್ರ ವಹಿಸುವ "ಟಿ ಕಣ"ಗಳೆಂಬ ಒಂದು ಬಗೆಯ ಶ್ವೇತಕಣಗಳು ಸಾಮಾನ್ಯ ಸಂಖ್ಯೆಗಿಂತ ಹೆಚ್ಚಾಗಿದ್ದವೆಂದು ತಿಳಿದುಬಂತು; ಹಾಗೂ ಇವರು ಹೆಚ್ಚು ಆಯುಸ್ಸುಳ್ಳವರಾಗಿ ಬಾಳಿದರೆಂದೂ ತಿಳಿಯಿತು. ಜೀವನದಲ್ಲಿ ಅವಗಡಗಳುಂಟಾದರೆ ಅವು ದೇಹ ರಕ್ಷಣಾ ವ್ಯೂಹವನ್ನು ಅಡ್ಡಿಪಡಿಸಿ ದೇಹ ನೆಗಡಿಯಿಂದ ಹಿಡಿದು ರಕ್ತದ ಏರು ಒತ್ತಡ, ಜಠರದ ಹುಣ್ಣು ವಗೈರೆವರೆಗೆ ಸುಲಭವಾಗಿ ಈಡಾಗುವಂತೆ ಮಾಡುತ್ತವೆಂದು ತನಿಖಾ ವ್ಯಾಸಂಗ ತೋರಿಸಿದೆ. ಸಂಭೋಗ, ಅವಗಡಗಳ ದುಷ್ಪರಿಣಾಮಕ್ಕೆ ಬದಲಾಗಿ ವ್ಯಾಪಕವಾಗಿ ಆರಾಮಸ್ಥಿತಿ ಉಂಟಾಗುವಂತೆ ಮಾಡುತ್ತದೆ. ಈ ಆರಾಮಸ್ಥಿತಿ ಹಲವೇ ಗಂಟೆಗಳಷ್ಟು ಮಾತ್ರ ಇದ್ದರೂ ಕ್ಲುಪ್ತ ಲೈಂಗಿಕಾಚರಣೆಯಿಂದ ವ್ಯಕ್ತಿಯಲ್ಲಿ ಅವಗಡಗಳ ದುಷ್ಪರಿಣಾಮ ಕಡಿಮೆ ಆಗುವುದು ತಿಳಿದಿದೆ.

ರಜಸ್ರಾವಪೂರ್ವ ಅಸೌಖ್ಯ: ಕೆಲವು ಹೆಂಗಸರಲ್ಲಿ ಸಂಭೋಗದಿಂದ ಇಂಥ ಅಸೌಖ್ಯ ಕಡಿಮೆ ಪ್ರಮಾಣದಲ್ಲಿ ಕಂಡುಬರಬಹುದು. ರಜಸ್ರಾವಕ್ಕೆ ೫–೭ ದಿನಗಳ ಮುಂಚಿನಿಂದ ಕಟಿಪ್ರದೇಶಗಳಿಗೆ ರಕ್ತಪೂರೈಕೆ ಹೆಚ್ಚಾಗಿರುವುದರಿಂದ ಉತ್ತಸೆಳೆತಗಳು ಉಂಟಾಗಬಹುದು. "ಸಂಭೋಗ ಕಾಲದ ತೃಪ್ತಿಕಂಪನದಿಂದ ಸ್ನಾಯುಗಳ ಸಂಕುಚನೆ ಉಂಟಾಗಿ ಕಟಿಪ್ರದೇಶದಿಂದ ರಕ್ತದ ವಾಪಸಾಗುವಿಕೆ ಹೆಚ್ಚಿ ಸ್ಥಳೀಯ ಬಿಗಿತವಂಥ ಅನುಭವದ ಶಮನ ಉಂಟಾಗುತ್ತದೆ" ಎಂದು ಫ್ರೀಂಜರರು ವಿವರಿಸುತ್ತಾರೆ.

ನೋವು ಶೂಲೆಗಳು: "ತೃಪ್ತಿಕಂಪನ ನೈಸರ್ಗಿಕಶಾಮಕ" ಎಂದು ರಟ್ಜರ್ಸಿನಲ್ಲಿ ಯೂನಿವರ್ಸಿಟಿ ಕಾಲೇಜ್ ಆಫ್ ನರ್ಸಿಂಗಿನ ಸಹಪ್ರಾಧ್ಯಾಪಕಿ ಬೆವರ್ಲಿ ವಿಪ್ಪಲ್ ಎಂಬಾಕೆ ಹೇಳುತ್ತಾರೆ. ಕತ್ತುಉಳುಕು, ಸಂಧಿವಾತ ಮುಂತಾದ ನೋವುಕಾರಕ ಸ್ಥಿತಿಗಳಿಂದ ನರಳುವ ಹೆಂಗಸರು ತೃಪ್ತಿಕಾರಕ ಸಂಭೋಗದಿಂದ ಹೆಚ್ಚು ನೋವನ್ನು ಸಹಿಸಿಕೊಳ್ಳುವವರಾಗುತ್ತಾರೆ. ಲೈಂಗಿಕೋದ್ರೇಕ ಕಾಲ

ದಲ್ಲಿ ನರಮಂಡಲದಿಂದ ಕೆಲವು ರಾಸಾಯನಿಕಗಳು ಬಿಡುಗಡೆ ಮಾಡಲ್ಪಡುತ್ತವೆಂದೂ ಇವು ನೋವನ್ನು ತಡೆಗಟ್ಟುವಂಥವೆಂದೂ ಈಕೆ ವಿವರಿಸಿದ್ದಾರೆ. ಇದು ಲೈಂಗಿಕ ಕ್ರಿಯೆಯ ಒಂದು ತರ ಪ್ರಾಥಮಿಕ ಸಹಾಯ. ಈ ವಿಷಯವಾಗಿ ವಿಜ್ಞಾನಿಗಳು ಬಹುವಾಗಿ ಚರ್ಚಿಸಿದ್ದಾರೆ. ಒಂದು ಸಿದ್ಧಾಂತದ ಪ್ರಕಾರ "ತೃಪ್ತಿಕಂಪನದ ಕಾಲದಲ್ಲಿ ಚುರುಕುಗೊಳಿಸಲ್ಪಟ್ಟ ಎಂಡಾರ್ಫಿನ್‌ಗಳೆಂಬ ದೈಹಿಕ ರಾಸಾಯನಿಕಗಳು ಹಲ್ಲು ನೋವಿನಿಂದ ಹಿಡಿದು ಬೆನ್ನುನೋವಿನವರೆಗೂ ಬಹುವಿಧದ ಬಾಧೆಗಳನ್ನು ಶಮನಗೊಳಿಸುತ್ತವೆ" ಎಂದು ಮಿನ್ನೆಸೋಟ ಆರ್ಥ್ರೈಟಿಸ್ ಇನ್‌ಸ್ಟಿಟ್ಯೂಟಿನ ಕಾರ್ಯನಿರ್ವಾಹಕ ಡೈರೆಕ್ಟರ್ ಟೆರೆನ್ಸ್ ಬ್ರಾಡಿ ಹೇಳುತ್ತಾರೆ.

"ರೋಗಿಷ್ಠ ಹೆಂಗಸೊಬ್ಬಳು ತೀವ್ರ ಸಂಧಿವಾತದಿಂದ ನರಳುತ್ತಿದ್ದಳು. ಗಂಡನ ಜೊತೆ ಲೈಂಗಿಕಾಚರಣೆಯನ್ನು ಪುನಃ ಪ್ರಾರಂಭಿಸಿದಾಗ ತನ್ನ ಸಂಧಿವಾತ ನೋವು ಕಡಿಮೆ ಆಗುತ್ತಿರುವುದನ್ನು ಕಂಡುಕೊಂಡಳು" ಎಂದು ಡಾ|| ಡಡ್ಲಿ ಚ್ಯಾಪ್‌ಮನ್ ಹೇಳಿದ್ದಾರೆ.

"ಪ್ರೇಮಾಚರಣೆ ವಾಸ್ತವವಾಗಿ ಅಪೂರ್ವಶಾಮಕ. ಅದು ದೇಹವನ್ನು ತಕ್ಷಣ ಸಮಾಧಾನ ಸ್ಥಿತಿಗೆ ತರುತ್ತದೆ ಹಾಗೂ ನಿದ್ರಾಭಾವವನ್ನು ಹೋಗಲಾಡಿಸುತ್ತದೆ. ಲೈಂಗಿಕಾಚರಣೆ ಪ್ರಬಲ ಆರಾಮಕಾರಕ. ಅದು ಉತ್ತಮವಾಗಿದ್ದಷ್ಟೂ, ತೀವ್ರವಾಗಿದ್ದಷ್ಟೂ ಅಷ್ಟೇ ಸುಲಭವಾಗಿ ನಿದ್ರಾವಶವಾಗುವಂತೆ ಮಾಡುತ್ತದೆ" ಎಂದು ಅಲೆಗ್ಸಾಂಡರ್ ಲೊವೆನ್ ಹೇಳುತ್ತಾರೆ.


ಮಾನಸಿಕ ಆರೋಗ್ಯ : "ತೃಪ್ತಿಕರ ಲೈಂಗಿಕಾಚರಣೆ ಉತ್ತಮ ಮಾನಸಿಕ ಆರೋಗ್ಯಕ್ಕೆ ಎಷ್ಟು ಮುಖ್ಯ? ಅತೀ ಮುಖ್ಯ" ಎಂದು ಸ್ಯಾನ್ ಫ್ರಾನ್ಸಿಸ್ಕೊವಿನ ಇನ್‌ಸ್ಟಿಟ್ಯೂಟ್ ಫಾರ್ ಅಡ್‌ವಾನ್ಸ್‌ಡ್ ಸ್ಟಡಿ ಆಫ್ ಹ್ಯೂಮನ್ ಸೆಕ್ಸುಯಾಲಿಟಿಯಲ್ಲಿ ೧೯೭೦ ರಿಂದ ಜರಗಿಸಿರುವ ೩೭,೫೦೦ ಮಂದಿ ವಯಸ್ಕರ ಪ್ರಾಯೋಗಿಕ ವ್ಯಾಸಂಗದಿಂದ ವ್ಯಕ್ತವಾಗಿದೆ. ತೃಪ್ತಿಕಾರಕ ಲೈಂಗಿಕಜೀವನ ಉಳ್ಳ ಜನ ಕಡಿಮೆ ಆತಂಕ ಉಳ್ಳವರಾಗಿ, ತಮ್ಮ ದುರದೃಷ್ಟಕ್ಕೆ ಯಾರೋ ಕಾರಣ ಎಂದು ದೂಷಣೆ ಮಾಡುವ ಸ್ವಭಾವ ಕಡಿಮೆ ಉಳ್ಳವರಾಗಿ ಇರುತ್ತಾರೆಂದು ಕಂಡುಬಂದಿದೆ.

"ಲೈಂಗಿಕತೃಪ್ತಿ ನಿಮ್ಮನ್ನು ಹೆಚ್ಚು ಸ್ವಾವಲಂಬಿಗಳನ್ನಾಗಿಯೂ ಮಾಡಬಹುದು" ಎಂದು ೩೦ ವರ್ಷಗಳಿಂದ ೬೫ ಜನ ಗಂಡಸರಲ್ಲಿ ಮತ್ತು ೪೦ ಜನ ಹೆಂಗಸರಲ್ಲಿ ಜರುಗಿಸಿದ ವ್ಯಾಸಂಗದಿಂದ ತಿಳಿದುಬಂದ ವಿಷಯವನ್ನು ಚಿಕಿತ್ಸಕ

ಮನೋರೋಗ ವಿಜ್ಞಾನಿ ಹಾಗೂ "ಫ್ರುಟ್ ಫಿಲ್ಲಿಂಗ್ ಲೈವ್ಸ್" ಎಂಬ ಕೃತಿಯ ಲೇಖಕ ಡಗ್ಲಾಸ್ ಹೀಕ್ ವ್ಯಕ್ತಪಡಿಸಿದ್ದಾರೆ. "ಕಾಲಕ್ರಮದಲ್ಲಿ ದಂಪತಿಗಳು ತಮ್ಮ ತಮ್ಮ ಅಗತ್ಯವನ್ನು ವ್ಯಕ್ತಗೊಳಿಸಲು ಕಲಿಯುತ್ತಾರಾಗಿ ಅವರು ಸಂಭೋಗ ಕಾಲದಲ್ಲಿ ಮುದುಡಿಕೊಳ್ಳುವುದು ಕಡಿಮೆ ಆಗಿ ಸ್ವೇಚ್ಛಾಪ್ರವೃತ್ತಿ ಹೆಚ್ಚಾಗಿ ಬಲಾತ್ಕಾರವನ್ನು ತಡೆದುಕೊಳ್ಳಲು ಹೆಚ್ಚು ಸಮರ್ಥರಾಗಿ ಇರುತ್ತಾರೆ" ಎಂದೂ ಇವರು ಹೇಳುತ್ತಾರೆ.

ಈ ಭಾವನೆಗಳು ನಿಮ್ಮ ಸಹಭೋಗಿಗೂ ಬಂದು ನಿಮ್ಮ ಪರಸ್ಪರ ಸಂಬಂಧಕ್ಕೂ ವ್ಯಾಪಿಸುತ್ತವೆ ಎಂಬುದು ಆಶ್ಚರ್ಯವಲ್ಲ. ವೈವಾಹಿಕ ಚಿಕಿತ್ಸಕ ರೋಜರ್ ಫಾಲ್ಜ್ ಎಂಬುವರು "ಪರಸ್ಪರಾನುಗತ ಲೈಂಗಿಕ ಜೀವನ ಇಬ್ಬರಲ್ಲೂ ಇರುವ ಅತ್ಯುತ್ತಮ ಗುಣಗಳು ಬಹಿರಂಗವಾಗುವಂತೆ ಮಾಡುತ್ತದೆ" ಎಂದು ಹೇಳುತ್ತಾರೆ. ಹೀಗೆ ಆದಾಗ ಮಾನಸಿಕ ಹಾಗೂ ದೈಹಿಕ ಅನಾರೋಗ್ಯಗಳೆಲ್ಲ ಸುಲಭತರವಾಗಿ ಗುಣವಾಗುತ್ತದೆ.

ಡಾ॥ ಎಸ್. ರಾಮರಾವ್



ಮನಸ್ಸು, ಹರಿಯುತ್ತಿರುವ ಹೊಸ ಹೊಸ ವಿಚಾರಗಳ ಜಲರಾಶಿ ಯೊಂದಿಗಿರುವುದೇ ವಿನಃ ಕಟ್ಟಿ ಹಾಕಿದ ಒಂದೇ ವಿಚಾರದ ಕಂತೆಯಲ್ಲ.

—ಫಾಸ್ಟರ್

ದಕ್ಷಿಣ ಆಫ್ರಿಕದ ಸ್ವಾತಂತ್ರ್ಯಯೋಧ

ನೆಲ್ಸನ್ ರೋಲಿಹ್ಲಾಹ್ಲ ಮಂಡೇಲ

ಏಪ್ರಿಲ್ ನಮಗೆಲ್ಲ ವಸಂತಕಾಲ: ಸೊಗಯಿಸಿಬಂದ ಮಾವಿನಮರ, ತೂಗಿನ ಎಲೆಬಳ್ಳಿ, ಬಿರಿದ ಮಲ್ಲಿಗೆ, ಕುಕಿಲುವ ಕೋಗಿಲೆ.

ಆದರೆ ದಕ್ಷಿಣ ಆಫ್ರಿಕಾ ತದ್ವಿರುದ್ಧ. ದೂರದೂರ ಸರಿಯುತ್ತಿರುವ ಸೂರ್ಯ. ಕಿರಿದಾಗುತ್ತಿರುವ ಹಗಲು. ಬರಲಿರುವ ಚಳಿಗಾಲದ ಮುನ್ಸೂಚನೆ. ಏಕೆಂದರೆ ದಕ್ಷಿಣ ಆಫ್ರಿಕಾ ದೇಶ ದಕ್ಷಿಣಾರ್ಧ ಗೋಳದಲ್ಲಿದೆ. ನಮಗೆ ಬೇಸಗೆಯಿದ್ದಾಗ ಅವರಿಗೆ ಚಳಿಗಾಲ. ನಮಗೆ ವಸಂತಕಾಲ ಬಂದಾಗ ಅಲ್ಲಿಯವರಿಗೆ ಬಿಸಿಲು ಮಾಗುವ ಕಾಲ.

ಆದರೂ ಈ ವರ್ಷ ಏಪ್ರಿಲ್ ತಿಂಗಳಿನಲ್ಲಿ ದಕ್ಷಿಣ ಆಫ್ರಿಕಾ ದೇಶ ಅತ್ಯಂತ ಸಂಭ್ರಮದಿಂದ ನಲಿದಾಡುತ್ತದೆ. ಹೊಸ ಶಕೆಯೊಂದು ಆರಂಭವಾಗುತ್ತದೆ. ಅಲ್ಲಿ ಶೇಕಡ ಎಂಬತ್ತೈದರಷ್ಟು ಸಂಖ್ಯೆಯಲ್ಲಿರುವ ಕಪ್ಪು ಹಾಗೂ ವರ್ಣೀಯ ಜನರ ಮೇಲೆ ಕೇವಲ ಶೇಕಡ ಹದಿನೈದರಷ್ಟಿರುವ ಬಿಳಿಯರು ನಡಸುತ್ತಿರುವ ಯಜಮಾನಿಕೆ ಕೊನೆಗೊಳ್ಳುತ್ತದೆ. ವರ್ಣಭೇದ ರಹಿತವಾದ, ನಿಜವಾಗಿ ಜನಗಳ ಪ್ರತಿನಿಧಿಗಳದೆನ್ನ ಬಹುದಾದ ಸರ್ಕಾರ ಸ್ಥಾಪಿತವಾಗುತ್ತದೆ. ಇತಿಹಾಸದ ಒಂದು ಕಪ್ಪು ಅಧ್ಯಾಯ ಕೊನೆಗೊಳ್ಳುತ್ತದೆ. ಈ ಮಹಾ ಪರಿವರ್ತನೆಯನ್ನು ಸಾಧಿಸಿದ ಮಹಾವೀರ ನೆಲ್ಸನ್ ರೋಲಿಹ್ಲಾಹ್ಲ ಮಂಡೇಲ. ಬಹುಶಃ ಮಂಡೇಲರೇ ಹೊಸ ದಕ್ಷಿಣ ಆಫ್ರಿಕಾ ಗಣರಾಜ್ಯದ ಅಧ್ಯಕ್ಷರಾಗಿ ಸ್ಥಾಪಿತರಾಗುತ್ತಾರೆ. ಅವರು ಈಗಾಗಲೇ ಆ ದೇಶದ ಬಹುಸಂಖ್ಯಾತ ಜನರ ಹೃದಯ ಸಿಂಹಾಸನದಲ್ಲಿ ಮೆರೆಯುತ್ತಿರುವ ಮಹಾಪುರುಷ. ಪ್ರಪಂಚಾದ್ಯಂತ ಬಹುಜನರ ಪ್ರೀತಿಗೌರವಗಳಿಗೆ ಪಾತ್ರರಾಗಿ ನಿತ್ಯಸುದ್ದಿಯಾಗಿರುವ ವ್ಯಕ್ತಿ ತಾಯಿ ತೆರೀಸಾರಾದರೆ, ಅದೇ ಬಗೆಯ ಕೀರ್ತಿ ಪಡೆದ ಇನ್ನೊಬ್ಬ ವ್ಯಕ್ತಿ ನೆಲ್ಸನ್ ಮಂಡೇಲ. ತೆರೀಸಾರ ಪ್ರಭೆ ಒಂದು ಬಗೆಯಾದರೆ ಮಂಡೇಲಾ ಅವರದು ಇನ್ನೊಂದು ಬಗೆ.

ನೆಲ್ಸನ್ ರೋಲಿಹ್ಲಾಹ್ಲ ಮಂಡೇಲ ಬಿರುಗಾಳಿಯ ಸಂತಾನ. ಅವರ ಬದುಕು ಕೂಡ ಬಿರುಗಾಳಿಯ ಹಾಗೆಯೇ: 'ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ, ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ, ಅಬ್ಬರದಲಿ ಭೋರ್ ಭೋರೆನೆ ಬರುತಿದೆ'—ಎಂದು ಕವಿ ಬಣ್ಣಿಸಿರುವ ತೆಂಕಣ

ಗಾಳಿಯು ತೀಡಿದೆ. 'ನೆಲ್ಸನ್ ರೋಲಿಹ್ಲಾಹ್ಲ ಮಂಡೇಲ' ಎಂಬ ಹೆಸರಿನ ಮಧ್ಯದ 'ರೋಲಿಹ್ಲಾಹ್ಲ' ಎಂದರೆ ಅವರ ಭಾಷೆಯಲ್ಲಿ ಕಸಕಡ್ಡಿಯನ್ನು ಗುಡಿಸಿ ಹಾಕುವ ಪೊರಕೆಯಂತೆ. ಮಹಾನಾಯಕನ ಆಗಮನಕ್ಕೆ ಮುನ್ನ ಹೀಗೆ ಮಾಡುವುದು ಅಲ್ಲಿಯವರ ವಾಡಿಕೆ. ದಕ್ಷಿಣ ಆಫ್ರಿಕದ ವರ್ಣದ್ವೇಷವ ಕೊಳಕನ್ನೆಲ್ಲ ಬಾಚಿ ಬಿಸಾಡಲು ನೆಲ್ಸನ್ ಮಂಡೇಲ ಜೀವನಾದ್ಯಂತ ಹೋರಾಟ ನಡೆಸಲು ಬದ್ಧ. ಅದೊಂದು ಅವಿಚ್ಛಿನ್ನ ಸಮರ. ಸೋಲೊಪ್ಪದ ಛಲವಂತಿಕೆ.

ತನ್ನ ಜನಕ್ಕೆ ಮಾನವರಂತೆ ಬಾಳುವ ಹಕ್ಕು ಬೇಕು ಎಂದು ಕೇಳಿದ್ದಕ್ಕೆ, ಅದಕ್ಕಾಗಿ ಹೋರಾಡಿದ್ದಕ್ಕೆ, ದಕ್ಷಿಣ ಆಫ್ರಿಕದ ಬಿಳಿಯರ ಸರ್ಕಾರ ಅವರನ್ನು ಅನೇಕಸಾರಿ ಸೆರೆಮನೆಗೆ ತಳ್ಳಿದೆ. ಪದೇಪದೇ ಸೆರೆ ಅನುಭವಿಸಿ ಹೊರಬಂದು ಮತ್ತೆ ಎಂದಿನಂತೆ ಧರ್ಮಯುದ್ಧದಲ್ಲಿ ನಿರತರಾಗುತ್ತಿದ್ದ ಮಂಡೇಲರಿಗೆ ಸರ್ಕಾರ ಕೊನೆಗೆ ಆಜೀವ ಕಠಿಣ ಸಜಾ ಶಿಕ್ಷೆವಿಧಿಸಿ ಸೆರೆಗೆ ತಳ್ಳಿತು. ಇಪ್ಪತ್ತೇಳು ವರ್ಷ ಅವರು ಸೆರೆಯಲ್ಲಿದ್ದರು. ಇತರ ಕೈದಿಗಳಂತೆ ಕಲ್ಲು ಒಡೆಯುವ ಕೆಲಸ ಮಾಡಿದರು. ಎಂಥ ಕಠಿಣ ಶಿಕ್ಷೆಗೂ ಅವರು ಜಗ್ಗಲಿಲ್ಲ, ಬಗ್ಗಿ ಬಡಿದರೂ ಬಾಗಲಿಲ್ಲ. 'ಮುಗಿಯದಿಹ ಮನವೊಂದು, ಸಾಧಿಸುವ ಹಠವೊಂದು, ನಿಜದ ನೇರಕೆ ನಡೆವ ನಿಷ್ಠುರತೆಯೊಂದು, ಅನ್ಯಾಯಕೆಂದೆಂದು ಬಾಗದೆಚ್ಚರವೊಂದು' ಎಂಬ ಕವಿಯ ಮಾತು ಮಂಡೇಲರಿಗೆ ಒಪ್ಪುವಂಥದು. ಭಾರತವನ್ನು ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಅಂಡಮಾನ್ ದ್ವೀಪದಲ್ಲಿ ಸೆರೆವಾಸ ವಿಧಿಸುವುದೆಂದರೆ ಅದು ಕ್ರೂರತಮ ಶಿಕ್ಷೆಯೆನಿಸಿತ್ತು. ಅಂತೆಯೇ ದಕ್ಷಿಣ ಆಫ್ರಿಕದ ರಾಬೆನ್ ದ್ವೀಪದಲ್ಲಿ ಮಂಡೇಲರನ್ನು ಬಂಧನದಲ್ಲಿಡಲಾಗಿತ್ತು. ಒಂದು ದಿನ ಮಧ್ಯಾಹ್ನ, ಉರಿಬಿಸಿಲಿನ ಬೇಗೆ. ಜೊತೆ ಕೈದಿಯೊಬ್ಬ ಬಾಯಾರಿ ಬಸವಳಿದು ಕುಡಿಯಲು ನೀರು ಕೇಳಿದ. ಜೊತೆಯಲ್ಲಿದ್ದ ಕಾವಲುಗಾರ ಅವನ ಬಾಯಿಗೆ ಮೂತ್ರ ಹೊಯಿದ! ಮಂಡೇಲರು ಈ ಸುದ್ದಿ ತಿಳಿದಾಗ ಕನಲಿ ಕೆಂಡವಾದರು. ಕೆಲ ದಿನವಾದ ಮೇಲೆ ಒಮ್ಮೆ ಮಂಡೇಲರು ಆ ಬಿಳಿಯ ಕಾವಲುಗಾರ ಇನ್ನೊಬ್ಬ ಕಪ್ಪು ಕೈದಿಗೆ ಹೊಡೆಯಲು ದೊಣ್ಣೆಯನ್ನೆತ್ತುತ್ತಿದ್ದುದನ್ನು ನೋಡಿದರು. ಕೂಡಲೇ ಮಂಡೇಲ ರಭಸದಿಂದ ನುಗ್ಗಿದರು. 'ಆ ಮುದುಕನನ್ನ ಹೊಡೆದೀಯೆ, ಜೋಕೆ!' ಎಂದು ಗದರಿಸಿದರು.

ಕಾವಲುಗಾರ ಮಂಡೇಲರತ್ತ ತಿರುಗಿ ನೋಡಿದ. 'ನೀನು ಯಾರು, ನನಗೆ ಹೇಳೋಕೆ?'

'ನಾನು ಯಾರಾ? ಅವನನ್ನ ಹೊಡೆದು ನೋಡು. ನಾನು ಯಾರು ಅನ್ನೋದನ್ನ ತೋರಿಸಿಕೊಡುತ್ತೇನೆ!'

ಗಟ್ಟಿ ದೇಹದ ಮಂಡೇಲರ ರೌದ್ರಸ್ವರೂಪವನ್ನು ನೋಡಿ ಆ ಕಾವಲುಗಾರ ನಡುಗಿದ. ಹಲ್ಲು ಕಡಿಯುತ್ತ ಹೊರಟುಹೋದ. ಮೇಲಧಿಕಾರಿಗೆ ದೂರು ಹೊತ್ತ.

ಆ ಮೇಲಧಿಕಾರಿ ಮಂಡೇಲರನ್ನು ಶಿಕ್ಷಿಸುವ ಬದಲು ಕಾವಲುಗಾರನನ್ನೇ ಗದರಿಸಿದ. 'ಮಂಡೇಲಾ ಮುಂದೆ ಯಾವ ಕೈದಿಯನ್ನು ಹೊಡೆಯಲು ಹೋಗಬೇಡ. ನಿನ್ನ ದಡ್ಡತನ ತೋರಿಸಿಕೊಳ್ಳಬೇಡ'—ಎಂದು ಬುದ್ಧಿವಾದ ಹೇಳಿದ. ಸರಪಳಿ ಬಿಗಿದರೂ ಸಿಂಹ ಸಿಂಹವೇ.

ಕಾಲು ಶತಮಾನಕ್ಕೂ ಹೆಚ್ಚು ಕಾಲ ಮಂಡೇಲರನ್ನು ಜೈಲಿನಲ್ಲಿಟ್ಟು ಬಿಳಿಯರ ಸರ್ಕಾರ ಅವರ ಸ್ಥೈರ್ಯ ಮುರಿಯಲು ಯತ್ನಿಸಿತು. ಜಗ್ಗಲಿಲ್ಲ ಮಂಡೇಲ. ಅವರ ಚಳವಳಿಯೂ ಸಾಯಲಿಲ್ಲ. ಪ್ರತಿಯಾಗಿ ಬಲಿಯಿತು. ಅಬ್ಬರಿಸಿತು. ಜಗವನ್ನೇ ತನ್ನತ್ತ ಸೆಳೆಯಿತು. ಮಂಡೇಲರನ್ನು ಅವರ ಜನ ಆರಾಧಿಸಿದರು. ವಿಶ್ವದ ಆತ್ಮಸಾಕ್ಷಿಯೂ ಮಮ್ಮಲ ಮರುಗಿತು. ದಕ್ಷಿಣ ಆಫ್ರಿಕದ ಸರ್ಕಾರದ ಮೇಲೆ ನಾನಾ ಬಗೆಯ ಬಹಿಷ್ಕಾರ ವಿಧಿಸಿತು. ದೌರಾತ್ಮ್ಯ ಕೊನೆಗೊಳಿಸಿ ಎಂದು ಬುದ್ಧಿವಾದ ಹೇಳಿತು.

ಕೊನೆಗೂ ನೆಲ್ಸನ್ ರೋಲಿಹ್ಲಾಹ್ಲ ಮಂಡೇಲ ಮುಕ್ತರಾಗಿ ಜೈಲಿನಿಂದ ಹೊರಬಂದರು. ಅವರ ಚಳವಳಿಯೇನೂ ದುರ್ಬಲವಾಗಲಿಲ್ಲ, ಬಿಳಿಯರ ವರ್ಣ ಪ್ರತ್ಯೇಕತಾ ನೀತಿಯೇ—ಅಪಾರ್ಥೈಡ್....ಬಿರುಕುಬಿಡತೊಡಗಿತ್ತು, ಅದು ಕುಸಿದು ಬೀಳಲು ಬೇಕಾಗಿದ್ದದ್ದು ಒಂದು ಕೊನೆಯ ಪೆಟ್ಟು.

ನೆಲ್ಸನ್ ರೋಲಿಹ್ಲಾಹ್ಲ ಮಂಡೇಲ ಹುಟ್ಟಿದ್ದು ಎಪ್ಪತ್ತಾರು ವರ್ಷ ಹಿಂದೆ —೧೮ನೆಯ ಜುಲೈ ೧೯೧೮ರಂದು—ಟ್ರಾನ್ಸ್‌ಕೈ ನಾಡಿನಲ್ಲಿ. ದಕ್ಷಿಣ ಆಫ್ರಿಕದ ಬಿಳಿಯ ದೂರ್ತರು ಕಪ್ಪು ಜನರನ್ನು ಹದ್ದುಬಸ್ತಿನಲ್ಲಿಡಲು ಅಲ್ಲಲ್ಲಿ ಸಣ್ಣ ಪಾಳೆಯಪಟ್ಟುಗಳಂಥ ನಾಡುಗಳನ್ನು ರೂಪಿಸಿ, ಅವರಿಗೆ ಸ್ವಾತಂತ್ರ್ಯ ನೀಡುವ ಸೋಗು ಹಾಕಿದ್ದರು. ಉಣ್ಣಲು ಉಡಲು ಉರುಳಲು ಸಾಕಷ್ಟು ಅನುಕೂಲವಿಲ್ಲದ ನಾಡುಗಳು ಅವು. ಅಂಥ ನಾಡುಗಳ ಪೈಕಿ ಟ್ರಾನ್ಸ್‌ಕೈ ಒಂದು. ಮಂಡೇಲರ ತಂದೆ ಅಲ್ಲಿಯ ಬುಡಕಟ್ಟೊಂದರ ನಾಯಕ.

ನೆಲ್ಸನ್ ಮಂಡೇಲ ಪೊಲೀಸ್ ಕೆಲಸಕ್ಕೆ ಸೇರಿದರು. ಕೆಲ ಕಾಲ ಸೇವೆ ಸಲ್ಲಿಸಿದರು. ಅದು ಒಗ್ಗಲಿಲ್ಲ. ತಮ್ಮ ಸುತ್ತಣ ಜನರ ಹೀನಾಯ ಸ್ಥಿತಿ ಅವರ

ಮನಸ್ಸನ್ನು ಹಿಂಡುತ್ತಿತ್ತು. ಕಾನೂನು ಅಭ್ಯಾಸ ಮಾಡಿದರು. ಆಲಿವರ್ ಟ್ಯಾಂಬೊ ಎಂಬುವರೊಡನೆ ಸೇರಿ ವಕೀಲಿ ಆರಂಭಿಸಿದರು. ಅದು ದಕ್ಷಿಣ ಆಫ್ರಿಕಾದ ಕಪ್ಪು ಜನರ ಮೊತ್ತ ಮೊದಲನೆಯ ವಕೀಲಿ ಸಂಸ್ಥೆ.

ಯುರೋಪಿನಿಂದ ಬಂದು ನೆಲಸಿದ್ದ ಬಿಳಿಯರು ನಡಸುತ್ತಿದ್ದ ಅನ್ಯಾಯಗಳ ಕರುಣ ಕತೆಯು ಹೊಳೆಯೋ ಅವರ ಕಛೇರಿಗೆ ಹರಿದುಬರುತ್ತಿತ್ತು. ಇದನ್ನು ಕೇಳಿ ಮಂಡೇಲಾ ಕಡು ನೊಂದರು, ಕನಲಿದರು. ಅವರಿಗಾಗಿ ವಾದಿಸಿದರು, ಹೋರಾಡಿದರು. ಇಡೀ ವ್ಯವಸ್ಥೆಯ ಮೇಲೆ ಅವರ ಕಣ್ಣು ಬಿತ್ತು. ನ್ಯಾಯ ದೇವತೆಯೋ ಬಿಳಿಯರ ಸೆರೆಯಾಳಾಗಿದ್ದದ್ದು ವ್ಯಕ್ತವಾಯಿತು. ಅದರ ಬಿಡುಗಡೆಗಾಗಿ ಹೋರಾಟ ನಡೆಸಲೂ ಸಂಸ್ಥೆ ಕಟ್ಟಿದರು.

'ಎಲ್ಲರಂಥವರಲ್ಲ ಮಂಡೇಲ' ಎಂಬುದನ್ನು ಬಿಳಿಯರ ಸರ್ಕಾರ ಅರಿಯಲು ತಡವಾಗಲಿಲ್ಲ. ೧೯೫೬ ರಲ್ಲಿ ಮಂಡೇಲರನ್ನೂ ಇನ್ನೂ ನೂರೈವತ್ತು ಜನರನ್ನೂ ಸೆರೆ ಹಿಡಿಯಿತು, ದೇಶದ್ರೋಹದ ಆಪಾದನೆಗೆ ಗುರಿಪಡಿಸಲು ೧೯೬೦ ರಲ್ಲಿ, ಷಾರ್ಪ್‌ವಿಲ್ ಎಂಬಲ್ಲಿ ನಿರಪರಾಧಿ ಕಪ್ಪು ಜನರನ್ನು ಬಿಳಿಯ ಸರ್ಕಾರದ ಪೋಲೀಸರು ನಿರ್ದಯೆಯಿಂದ ಕೊಂದರು. ಮಂಡೇಲಾ ನಾಡಿನಾದ್ಯಂತ ಕಪ್ಪು ಜನರಿಗೆ ಮುಷ್ಕರದ ಕರೆ ನೀಡಿದರು. 'ಯಾರೂ ಕೆಲಸಕ್ಕೆ ಹೋಗಬೇಡಿ. ಬಿಳಿಯರ ಸಂಪತ್ತಿನ ಸೌಧಕ್ಕೆ ಕಪ್ಪು ಜನರ ದುಡಿಮೆಯೇ ಆಧಾರ. ನಾವು ಸೇವೆಯಲ್ಲಿ ತೊಡಗದಿದ್ದರೆ ಅವರು ಕಂಗಾಲಾಗುತ್ತಾರೆ' ಎಂದರು. ಪೋಲೀಸರು ಮಂಡೇಲರನ್ನು ದಸ್ತಗಿರಿ ಮಾಡಲು ಪರದಾಟ ನಡಸುತ್ತಿದ್ದರು. 'ಮಂಡೇಲ ಎಲ್ಲಿ? ನೀವು ಬಲ್ಲಿರಾ? ನೀವು ಕಂಡಿರಾ?' ಎಂದು ಎಲ್ಲರನ್ನೂ ಹಿಡಿದು ಹಿಡಿದು ಜಗ್ಗಿಸಿ ಕೇಳಿದರು. ಮುಖಗಳನ್ನು ನಿಟ್ಟಿಸಿ ನೋಡಿದರು. ಮಂಡೇಲರನ್ನು ಬಿಟ್ಟು ಉಳಿದವರು ಅವರ ಕೈಗೆ ಸಿಕ್ಕರೇ ವಿನಾ, ಮಂಡೇಲ ನುಣುಚಿಕೊಂಡಿದ್ದರು. ಅವರು ಭೂಗತರಾಗಿದ್ದರು.

ಭಾರತದ ಸುಮಾರು ಮೂರನೆಯ ಒಂದರಷ್ಟು ವಿಸ್ತೀರ್ಣವುಳ್ಳ ದಕ್ಷಿಣ ಆಫ್ರಿಕಾ ದೇಶದ ಜನಸಂಖ್ಯೆ ನಮ್ಮದರ ಇಪ್ಪತ್ತೆರಡನೆಯ ಒಂದರಷ್ಟು. ನಿಸರ್ಗ ಸಂಪತ್ತೋ ಅಪಾರ. ಪ್ರಪಂಚದಲ್ಲಿ ಉತ್ಪತ್ತಿಯಾಗುವ ಒಟ್ಟು ಚಿನ್ನದಲ್ಲಿ ಸುಮಾರು ಅರ್ಧದಷ್ಟು ಬರುವುದು ದಕ್ಷಿಣ ಆಫ್ರಿಕಾದಿಂದ. ಚಿನ್ನದ ಗಣಿಗಳು ಜೊತೆಗೆ ವಜ್ರದ ಗಣಿಗಳೂ ಇಲ್ಲಿವೆ. ಅದು ಪ್ರಪಂಚದಲ್ಲಿ ಅತಿಹೆಚ್ಚು ವಜ್ರ ಉತ್ಪಾದಿಸುವ ದೇಶ. ಜೊತೆಗೆ ಕಲ್ಲಿದ್ದಲು, ತಾಮ್ರ, ಸತುವು, ಮ್ಯಾಂಗನೀಸ್, ಕಬ್ಬಿಣ, ಸೀಸ, ಕ್ರೋಮ್ ನಿಕ್ಷೇಪಗಳು ಅಲ್ಲಿವೆ.

ಯುರೇನಿಯಂ ಕೂಡ ಅಲ್ಲಿ ಧಾರಾಳ. ಮುಖ್ಯ ಬೆಳೆಗಳು ಹತ್ತಿ, ಗೋಧಿ, ಮೆಕ್ಕೆಜೋಳ, ಹೊಗೆಸೊಪ್ಪು, ಕಬ್ಬು, ಕಿತ್ತಳೆ, ದ್ರಾಕ್ಷಿ. ಹೈನು ಉತ್ಪನ್ನದಲ್ಲೂ ದಕ್ಷಿಣ ಆಫ್ರಿಕಾ ಮುಂದು. ಭಾರಿ ಇಂಜಿನಿಯರಿಂಗ್, ರಾಸಾಯನಿಕ, ಜವಳಿ, ಉಕ್ಕು, ಪ್ಲಾಸ್ಟಿಕ್, ಆಹಾರ ಸಂಸ್ಕರಣ ಕೈಗಾರಿಕೆಗಳು ಬೆಳೆದಿವೆ. ಹೊಲದಲ್ಲೂ ಗಣಿಗಳಲ್ಲೂ, ಕಾರ್ಖಾನೆಗಳಲ್ಲೂ ದುಡಿಯುವವರು ಕಪ್ಪು ಜನ. ಆದರೆ ರಾಷ್ಟ್ರೀಯ ಕಜ್ಜಾಯದಲ್ಲಿ ಅವರ ಪಾಲು ಬಲು ಅಲ್ಪ. ಬಹಳಷ್ಟು ಸಂಪತ್ತು ಬಿಳಿಯರಿಂದ ಸೂರೆ. ಬಿಳಿಯರಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಮಂದಿ ಅಕ್ಷರಸ್ಥರು. ಕರಿಯರಲ್ಲಿ ನೂರಕ್ಕೆ ಎಪ್ಪತ್ತು ಜನ ನಿರಕ್ಷರ ಕುಕ್ಷಿಗಳು! ಬಿಳಿಯರ ಠಾವಿನಲ್ಲಿ ಕರಿಯರಿಗೆ ಎಡೆಯಿಲ್ಲ, ಸೀಮಿತ ಕೊಳೆಗೇರಿಗಳಲ್ಲಿ ಅವರ ವಾಸ, ಉಪವಾಸ. ಆಡಳಿತದಲ್ಲಿ ಪಾಲಿಲ್ಲ, ಸೊಲ್ಲೆತ್ತುವಂತೆಯೂ ಇಲ್ಲ. ವಸಾಹತುಶಾಹಿಯ ಯುಗದಲ್ಲಿ ಇಲ್ಲಿಗೆ ಬಂದು ತುಂಬಿದ ಬಿಳಿಯರು ತಮ್ಮದೇ ಪ್ರಭುತ್ವ ಸ್ಥಾಪಿಸಿಕೊಂಡರು. ೧೯೧೦ ರಲ್ಲಿ ದಕ್ಷಿಣ ಆಫ್ರಿಕಾ ಒಕ್ಕೂಟವೆಂಬ ಹೆಸರಿನಲ್ಲಿ ಅದು ಬ್ರಿಟಿಷ್ ಕಾಮನ್‌ವೆಲ್ತ್‌ಗೆ ಸೇರಿತು. ಐವತ್ತೊಂದು ವರ್ಷಗಳ ಅನಂತರ ಅದು ಗಣರಾಜ್ಯವಾಯಿತು. ಆದರೆ ಕರಿಯರ ಹೀನ ದೀನ ಬದುಕು, ಬವಣೆ ಬದಲಾಗಲಿಲ್ಲ. ಇದು ಅಲ್ಲಿಯ ಕರಿಯರ ನೋವಿನ ಕಥೆ.

ಐವತ್ತು ವರ್ಷ ಹಿಂದೆ (೧೯೪೪) ನೆಲ್ಸನ್ ಮಂಡೇಲ, ಆಲಿವರ್ ಟಾಂಬೊ ಮತ್ತು ಇತರರು ಸೇರಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಯುವಕ ಮಂಡಲಿ ರಚಿಸಿಕೊಂಡರು. ಮಂಡೇಲ ಇದರ ಕಾರ್ಯದರ್ಶಿಯಾದರು. ಈ ಮಂಡಲಿ ಕರಿಯರ ಹೋರಾಟಕ್ಕೆ ಹೊಸ ಪ್ರೇರಣೆ ನೀಡಿತು. ನೇರ ಕಾರ್ಯಾಚರಣೆಗೆ ಕರೆ ನೀಡಿತು.

೧೯೪೮ ರಲ್ಲಿ ಅಲ್ಲಿಯ ಬಿಳಿಯರ ಸರ್ಕಾರ ವರ್ಣಪ್ರತ್ಯೇಕತೆಯ ಅಪಾರ್ಥೈಡ್ ವ್ಯವಸ್ಥೆಯನ್ನು ಜಾರಿಗೆ ತಂದಿತು. ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಇತರ ಸಂಸ್ಥೆಗಳು ಪ್ರತಿಭಟಿಸಿದುವು. ಅನ್ಯಾಯದ ಕಾನೂನುಗಳನ್ನು ಮುರಿಯುವುದಾಗಿ ಘೋಷಿಸಿದುವು. ಮಂಡೇಲ ಈ ಚಳುವಳಿಯ ನೇತಾರ. ಈ ಚಳುವಳಿಗೆ ಸರ್ಕಾರ ತನ್ನದೇ ಆದ ರೀತಿಯಲ್ಲಿ ಉತ್ತರ ನೀಡಲು ಹಿಂದೆಗೆಯಲಿಲ್ಲ. ಎಂಟೂವರೆ ಸಾವಿರ ಮಂದಿ ಸೆರೆಯಾದರು. ಅವರಲ್ಲಿ ಕರಿಯರಿದ್ದರು, ಭಾರತೀಯರಿದ್ದರು, ಬಿಳಿಯರೂ ಇದ್ದರು. ಮಂಡೇಲರೂ ಹೊರತಾಗಲಿಲ್ಲ. ಕಮ್ಯೂನಿಸ್ಟ್ ಚಳುವಳಿಯನ್ನು ಹತ್ತಿಕ್ಕುವ ನೆಪದಲ್ಲಿ ಸರ್ಕಾರ ಕಪ್ಪು

ಜನರನ್ನು ತೊತ್ತಳಿಸುಳಿಯಿತು. ಮಂಡೇಲರಿಗೆ ದೊರೆತ ಪ್ರಶಸ್ತಿಯೆಂದರೆ, ಅವಮಾನತುಗೊಳಿಸಿದ ಒಂಬತ್ತು ತಿಂಗಳ ಸಶ್ರಮ ಜೈಲುವಾಸ.

ಸರ್ಕಾರ ತಡೆದಷ್ಟೂ ಮಂಡೇಲರ ಜನಪ್ರಿಯತೆ ಬೆಳೆಯುತ್ತಿತ್ತು. ಬೆಂಕಿಯನ್ನು ತಟ್ಟಿ ಮುಚ್ಚಿಡುವ ರೀತಿಯಲ್ಲಿ ಸರ್ಕಾರ ಅವರಿಗೆ ದಿಗ್ಬಂಧನ ವಿಧಿಸಿತು. ಜೊಹಾನೆಸ್‌ಬರ್ಗ್ ಬಿಟ್ಟು ಅವರು ಆಚೀಚೆ ಹೋಗ ಕೂಡದು ಎಂದು ೧೯೫೩ ರಲ್ಲಿ ಕಟ್ಟಾಜ್ಞೆ ವಿಧಿಸಿತು.

೧೯೫೫ರ ವೇಳೆಗೆ ಚಳವಳಿ ಇನ್ನಷ್ಟು ವ್ಯಾಪಕವಾಯಿತು. ಭಾರತೀಯರ ಮತ್ತು ಕಪ್ಪು ಜನರ ಇತರ ಸಂಸ್ಥೆಗಳ ಕಾರ್ಮಿಕ ಸಂಘಗಳು ಒಂದುಗೂಡಿ ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸಿನಲ್ಲಿ ಸಮಾವೇಶಗೊಂಡುವು.

ಸರ್ಕಾರ ಸುಮ್ಮನಿರಲಿಲ್ಲ. ಮಂಡೇಲ ಮತ್ತು ಇನ್ನೂ ೧೫೬ ಮಂದಿ ಸೆರೆಯಾದರು. ದೇಶದ್ರೋಹದ ಆಪಾದನೆ. ಕಮ್ಯೂನಿಸ್ಟ್ ಸಂಚು ನಡೆದಿದೆಯೆಂದು ಅನುಮಾನ. ಆದರೆ ಸರ್ಕಾರ ಈ ಬಗ್ಗೆ ಪುರಾವೆ ಒದಗಿಸಲಾರದೆ ಹೋಯಿತು. ನಾಲ್ಕೂವರೆ ವರ್ಷಗಳ ಅನಂತರ ಸೆರೆಯಾಳುಗಳ ಬಿಡುಗಡೆ.

೧೯೬೦ ರಲ್ಲಿ ಬಂತು, ಷಾರ್ಪ್‌ವಿಲೆಯಲ್ಲಿ ಕಪ್ಪು ಜನರ ಹತ್ಯಾಕಾಂಡ. ನಮ್ಮ ಜಲಿಯನ್‌ವಾಲಾಬಾಗ್ ಹಿಂಸಾಚಾರಕ್ಕಿಂತ ಕ್ರೂರ. ದೇಶಾದ್ಯಂತ ತುರ್ತು ಪರಿಸ್ಥಿತಿಯ ಘೋಷಣೆ. ಇಪ್ಪತ್ತು ಸಾವಿರ ಜನರ ದಸ್ತಗಿರಿ. ನೆಲ್ಸನ್ ಮಂಡೇಲರನ್ನು ಕೂಡ ಬಂದೀಖಾನೆಯ ಸರಳುಗಳ ಹಿಂದೆ ಕೂಡುಹಾಕಿದರು. ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್ ವಿರುದ್ಧ ನಿಷೇಧಾಜ್ಞೆ ಬಂತು.

ಮರು ವರ್ಷ ಮಂಡೇಲರ ಬಿಡುಗಡೆ. ಅವರ ಮೇಲಿದ್ದ ನಿರ್ಬಂಧದ ಅವಧಿಯೂ ಮುಗಿದಿತ್ತು. ಒಂಬತ್ತು ವರ್ಷಗಳ ಅನಂತರ ಅವರು ಮಾತಾಡಲೂ ಓಡಾಡಲೂ ಸ್ವಾತಂತ್ರ್ಯ ಪಡೆದಿದ್ದರು.

ದಕ್ಷಿಣ ಆಫ್ರಿಕಾ ಆಗ ಬ್ರಿಟಿಷ್ ಕಾಮನ್‌ವೆಲ್ತಿನಿಂದ ಹೊರ ಬಂದು ಗಣರಾಜ್ಯವಾಗಲು ಪ್ರಯತ್ನ ನಡೆಸಿತ್ತು. ಅನೇಕ ದೇಶಗಳ ಪ್ರತಿನಿಧಿಗಳು ಪೀಟರ್‌ಮಾರಿಟ್ಸ್‌ಬರ್ಗಿನಲ್ಲಿ ಸಭೆ ಸೇರಿ ಅಖಿಲ ಆಫ್ರಿಕಾ ಕಾಂಗ್ರೆಸ್ ಸ್ಥಾಪಿಸಿಕೊಂಡರು. ಆ ಅಧಿವೇಶನದಲ್ಲಿ ಮಂಡೇಲರು ರಾಷ್ಟ್ರೀಯ ಕ್ರಿಯಾಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ದಕ್ಷಿಣ ಆಫ್ರಿಕಾ ಸರ್ಕಾರ ತೆಪ್ಪಗಿರುವುದು ಹೇಗೆ ಸಾಧ್ಯ? ತನ್ನ ವಿರುದ್ಧ ಭಾರೀ ಸಂಚು ನಡೆಯುತ್ತಿದೆಯೆಂದು ಅದು ಭಾವಿಸಿತು. ಅದಕ್ಕೆ ಗೊತ್ತಿದ್ದ ಭಾಷೆಯೊಂದೇ, ಸಾಮೂಹಿಕ ದಸ್ತಗಿರಿ. ಗದಾಪ್ರಹಾರ.

ಮಂಡೇಲ ಭೂಗತ. 'ನಮ್ಮ ಅಹಿಂಸಾತ್ಮಕ ಹೋರಾಟವನ್ನು ನಗ್ನ ಬಲಪ್ರಯೋಗದಿಂದ ಸರ್ಕಾರ ಹತ್ತಿಕ್ಕುವುದಾದರೆ ನಮ್ಮ ಹೋರಾಟದ ವಿಧಾನವನ್ನು ನಾವು ಪುನರ್ವಿಮರ್ಶಿಸಲೇಬೇಕು' ಎಂದು ಗುಡುಗಿದರು ಮಂಡೇಲ. 'ಅಹಿಂಸಾತ್ಮಕ ಹೋರಾಟದ ಅಧ್ಯಾಯನಕ್ಕೆ ನಾವು ಇತಿಶ್ರೀ ಹೇಳಬೇಕಾಗುತ್ತದೆ' ಎಂದರು. ೧೯೬೧ರ ಡಿಸೆಂಬರಿನಲ್ಲಿ ಧ್ವಂಸ ಕೃತ್ಯಗಳು ಜರುಗಿದುವು. ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸಿಗೊಂದು ಹಿಂಸಾತ್ಮಕ ಮುಖ ಮೊಳೆತಿತ್ತು. ಅದರ ಹೆಸರು ಅಮ್ಖೋಂಟೊ ವೇ ಸಿಜ್ವೆ—ಅರ್ಥಾತ್ 'ರಾಷ್ಟ್ರದ ಭರ್ಜಿ.'

ಅಬಿಸೀನಿಯದ (ಈಗಿನ ಇಥಿಯೋಪಿಯ) ಅಡಿಸ್ ಅಬಬಾದಲ್ಲಿ ೧೯೬೨ರಲ್ಲಿ ಒಂದು ಸಮ್ಮೇಳನ ಸೇರಿತ್ತು. ಅಖಿಲ ಆಫ್ರಿಕಾ ಸಮ್ಮೇಳನ. ಅದೃಶ್ಯರಾಗಿಯೇ ತಿರುಗಾಡುತ್ತಿದ್ದ ಮಂಡೇಲ ಅಲ್ಲಿ ಪ್ರತ್ಯಕ್ಷರಾಗಿದ್ದರು! ಅನಂತರ ಆಫ್ರಿಕಾದ ದೇಶಗಳಲ್ಲೆಲ್ಲ ಓಡಾಡಿ ತಮ್ಮ ನಾಡಿನ ಜನರ ಬಿಡುಗಡೆಯ ಹೋರಾಟಕ್ಕೆ ಆ ಎಲ್ಲ ದೇಶಗಳ ಸಹಾನುಭೂತಿ, ಸಹಕಾರ, ಬೆಂಬಲ ಪಡೆದುಕೊಂಡರು. ಲಂಡನ್ನಿಗೂ ಭೇಟಿ ನೀಡಿದರು. ಅಲ್ಜೀರಿಯದಲ್ಲಿ ಮಿಲಿಟರಿ ಶಿಕ್ಷಣವನ್ನೂ ತೆಗೆದುಕೊಂಡರು. ರಹಸ್ಯವಾಗಿ ದಕ್ಷಿಣ ಆಫ್ರಿಕಾಕ್ಕೆ ಹಿಂದಿರುಗಿದರು.

ಆದರೆ ಅವರ ಸುಳಿವು ಸರ್ಕಾರಕ್ಕೆ ಹೇಗೋ ಗೊತ್ತಾಯಿತು. ಮಂಡೇಲರನ್ನು ಅದು ದಸ್ತಗಿರಿ ಮಾಡಿತು. ರಿವೋನಿಯದಲ್ಲಿ ವಿಚಾರಣೆ ನಡೆಯಿತು (೧೯೬೩). ಮಂಡೇಲರೇ ಪ್ರಥಮ ಆರೋಪಿ. ಬ್ರಾಮ್ ಫಿಷರ್ ಎಂಬ ಬಿಳಿಯ ಕಮ್ಯೂನಿಸ್ಟ ವಕೀಲ ಮಂಡೇಲರ ಪರ ವಾದಿಸಿದರು. ನಮ್ಮ ಕಕ್ಷಿ 'ನೆಲ್ಸನ್ ಮಂಡೇಲರು ಮೊದಲು ತಮ್ಮ ಹೇಳಿಕೆ ನೀಡುತ್ತಾರೆ' ಎಂದು ಫಿಷರ್ ಹೇಳಿದರು.

ಸರ್ಕಾರದ ದುರಾಡಳಿತವನ್ನು ಖಂಡಿಸಲು ನೆಲ್ಸನ್ ಮಂಡೇಲ ಈ ಸಂದರ್ಭವನ್ನು ಬಳಸಿಕೊಂಡರು. ತಮಗೆ ಸರ್ಕಾರ ಮರಣದಂಡನೆಯನ್ನೇ ವಿಧಿಸೀತು ಎಂದು ಅವರೆಂದುಕೊಂಡಿದ್ದರು. ನೇಣುಗಂಬವನ್ನೇರುವ ಮುನ್ನ ಸರ್ಕಾರದ ಮುಖಕ್ಕೆ ಮಂಗಳಾರತಿ ಎತ್ತಬೇಕು!

'ಆಫ್ರಿಕನ್ ಜನ ಅಗಾಧ ನೋವು ಸಂಕಟ ಅನುಭವಿಸುತ್ತಿದ್ದಾರೆ, ಅವಮಾನಕ್ಕೆ ಗುರಿಯಾಗಿದ್ದಾರೆ. ಈ ಅನುಭವವೇ ಆಫ್ರಿಕನ್ ಜನರ ಹೋರಾಟಕ್ಕೆ ಮಹಾ ಪ್ರೇರಣೆ. ಬದುಕುವ ಹಕ್ಕಿಗಾಗಿ ಈ ಹೋರಾಟ. ನಾವೆಲ್ಲರೂ ಸೌಹಾರ್ದದಿಂದ, ಸಮಾನ ಅವಕಾಶಗಳನ್ನು ಪಡೆದು ಬಾಳುವೆ ನಡಸುವುದು ಸಾಧ್ಯವಾಗುವಂಥ ಮುಕ್ತ ಸಮಾಜದ ನಿರ್ಮಾಣವಾಗಬೇಕು,

ಜನತಂತ್ರ ಸರ್ಕಾರ ಸ್ಥಾಪನೆಯಾಗಬೇಕು. ಈ ಆದರ್ಶದ ಕನಸನ್ನು ನಾನು ಬಹುಕಾಲದಿಂದ ಕಾಣುತ್ತಿದ್ದೇನೆ'—ಎಂದು ಹೇಳಿದರು ನೆಲ್ಸನ್ ಮಂಡೇಲ.

ಮಂಡೇಲರಿಗೂ ಇನ್ನೂ ಏಳು ಜನರಿಗೂ ಸರ್ಕಾರ ಜೀವಾವಧಿ ಕಠಿಣ ಸಜೆ ವಿಧಿಸಿತು. ಆಗ ಆರಂಭವಾಯಿತು ಅವರ ಸುದೀರ್ಘ ಇತಿಹಾಸ ಪ್ರಸಿದ್ಧ ಸೆರೆವಾಸ.

ಈ ಕಾಲದಲ್ಲಿ ಮಂಡೇಲ ಸೆರೆಮನೆಯಲ್ಲಿ ಒಂಟಿಯಾಗಿ ಬಾಳು ಸವೆಸಿದರು. ತಮ್ಮ ಹೆಂಡತಿಮಕ್ಕಳಿಂದ ದೂರ ಇದ್ದರು. ಆದರೆ ಅವರ ಆಶಾವಾದ ಕರಗಲಿಲ್ಲ.

ಪ್ರಪಂಚಾದ್ಯಂತ ಅನೇಕರು ಮಂಡೇಲರ ಬಿಡುಗಡೆಗಾಗಿ ಪರಿತಪಿಸಿದರು. ಅವರ ಜೊತೆಗಾರರನೇಕರಿಗೆ ನೊಬೆಲ್ ಶಾಂತಿ ಪಾರಿತೋಷಿಕ ಪ್ರಾಪ್ತವಾಯಿತು. ಆದರೆ ಮಂಡೇಲ ಎಂದರೆ ಮಹಾ ಘಟಸರ್ಪವೆಂದೇ ಆಫ್ರಿಕನ್ ಆಳರಸರ ಅಂಜಿಕೆ.

ದೇಶಾದ್ಯಂತ ಅಗಾಧ ಪ್ರತಿಭಟನೆಗಳು ನಡೆದುವು. ಬಿಳಿಯರ ಸರ್ಕಾರ ಅವನ್ನು ನಿರ್ದಯೆಯಿಂದ ಮರ್ದಿಸಿತು.

ಮಂಡೇಲರ ಪತ್ನಿ ವಿನ್ನಿ ಮಂಡೆಲ. ಗಂಡನಂತೆಯೇ ಹೋರಾಟ ನಡಸಿದರು. ರಾಜಿಗೆ ಒಡಂಬಡದ ದಿಟ್ಟೆ ವಿನ್ನಿ.

ಆದರೆ ಅವರ ಮೇಲೆ ಬಗೆಬಗೆಯ ಆಪಾದನೆ. ತಮಗೆ ಇಷ್ಟವಾಗದವರನ್ನು ಅಪಹರಿಸಿ ಚಿತ್ರಹಿಂಸೆಗೆ ಗುರಿಪಡಿಸಿ ಅವರ ಜೀವಕ್ಕೆ ಮುಳುವಾದರೆಂಬ ಆರೋಪ. ನ್ಯಾಯಾಲಯದಲ್ಲಿ ವಿಚಾರಣೆ. ಆರೋಪ ಸಾಬೀತು.

ಅವರ ಆಚಾರ ವಿಚಾರಗಳು ಅನೇಕರಿಗೆ ಕಸಿವಿಸಿ ಉಂಟುಮಾಡಿದುವು. ಆದರೆ ವ್ಯಗ್ರರಾಗಲಿಲ್ಲ—ನೆಲ್ಸನ್ ಮಂಡೇಲ; ಬದುಕಿನಲ್ಲೂ ಹೋರಾಟದಲ್ಲೂ ನಂಬಿಕೆ ಜಿಳೆದುಕೊಳ್ಳಲಿಲ್ಲ.

ದಕ್ಷಿಣ ಆಫ್ರಿಕದಲ್ಲಿ ಆಳುವ ಸರ್ಕಾರದ ಸ್ಥಿತಿ ದಿನದಿನಕ್ಕೆ ಬಿಸಿಯಾಯಿತು. ಬಹುಸಂಖ್ಯಾತರೊಂದಿಗೆ ಇದಿರುಬದಿರಾಗಿ ಎಷ್ಟು ಕಾಲ ತಾನೇ ಆಡಳಿತ ನಡಸುವುದು ಸಾಧ್ಯ? ಮಹಾ ಪ್ರವಾಹವನ್ನು ಅಂಗೈಯಿಂದ ತಡೆಯಲು ಯತ್ನಿಸಿದ ಹಾಗೆ.

ಕೊನೆಗೆ ಬಿಳಿಯರ ಸರ್ಕಾರದ ಧೋರಣೆಗೆ ಬದಲಾಗತೊಡಗಿತು. ಕಪ್ಪು ಜನರೊಂದಿಗೆ ಒಪ್ಪಂದ ಮಾಡಿಕೊಂಡು ಒಂದಾಗಿ ಬಾಳುವುದು ಬಿಳಿಯರಿಗೆ ಸಾಧ್ಯ. ಇಲ್ಲದಿದ್ದರೆ ಅವರೆಲ್ಲ ಕೊಚ್ಚಿಹೋದಾರು ಎಂಬ ಸತ್ಯ ಕ್ರಮಕ್ರಮವಾಗಿ ಮನವರಿಕೆ.

ನಾಲ್ಕು ವರ್ಷ ಹಿಂದೆ (೧೯೯೦) ಸರ್ಕಾರ ನೆಲ್ಸನ್ ಮಂಡೇಲರನ್ನು ಬಿಡುಗಡೆ ಮಾಡಿತು. ಇಪ್ಪತ್ತೇಳು ವರ್ಷಗಳ ಕಾರಾಗೃಹವಾಸ ಕೊನೆಗೊಂಡಿತು. ಆಗ ಮಂಡೇಲರಿಗೆ ಎಪ್ಪತ್ತೊಂದು ವರ್ಷ.

ಮಂಡೇಲರ ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸಿನೊಂದಿಗೆ ಸಂಧಾನದಲ್ಲಿ ಬಗೆಬಗೆಯ ವಿಘ್ನ. ಕಪ್ಪು ಜನರ ಕಿರಿದಾದ ಕೋಳಜೆಯ ನಾಡುಗಳ ಯಜಮಾನರುಗಳು ಈ ಬದಲಾವಣೆಯನ್ನೊಪ್ಪಲು ಹಿಂದೆಗೆದರು. ಜೂಲು ಇನ್‌ಕಾಥ ಸ್ವಾತಂತ್ರ್ಯ ಪಕ್ಷ ಎಂಬ ಒಂದು ಪಕ್ಷ ಬಲಿತುಕೊಂಡಿತು. ಅದರ ನಾಯಕ ಮಂಗೊಸುತು ಬುತೆಲೆಜಿ. ಅವನೂ ಒಬ್ಬ 'ದೊರೆ'.

ಬದಲಾವಣೆಯನ್ನು ಒಪ್ಪದ ತಿರೋಗಾಮಿ ಬಿಳಿಯರೂ ಇದ್ದಾರೆ. ವಿರೋಧಿ ಕರಿಯರೂ ಈ ಮಂದಗಣ್ಣಿನ ಬಿಳಿಯರೂ ಒಂದಾಗಿ ಅರ್ಭಟಿಸಿದರು. ಹಿಂಸೆಯ ಹೊಳೆಯನ್ನೇ ಹರಿಸಿದರು. ಸಾವಿರಾರು ಜನ ಸತ್ತರು.

ಆದರೂ ಮಂಡೇಲರಾಗಲಿ, ದಕ್ಷಿಣ ಆಫ್ರಿಕನ್ ಸರ್ಕಾರದ ಈಗಿನ ಅಧ್ಯಕ್ಷ ಡಿ ಕ್ಲರ್ಕರಾಗಲಿ ಹಿಂದೆಗೆಯಲಿಲ್ಲ. ಕಪ್ಪು ಬಿಳಿಯ ಜನರೆಲ್ಲ ಸಮರಸದಿಂದ ಬಾಳುವುದೊಂದೇ ಮಾರ್ಗ. ಬೇರೆಯ ಮಾರ್ಗಗಳು ಬದುಕಲಲ್ಲ, ವಿನಾಶಕ್ಕೆ.

'ಒಬ್ಬನಿಗೆ ಒಂದು ಮಾತು—ಆತ ಬಿಳಿಯನಿರಲಿ, ಕರಿಯನಿರಲಿ' ಎಂಬ ತತ್ತ್ವದ ಆಧಾರದ ಮೇಲೆ ಹೊಸ ಸರ್ಕಾರ ರಚಿಸಲು ಎಡೆಮಾಡಿಕೊಡುವ ಸಂವಿಧಾನದ ರಚನೆ. ಇದಕ್ಕೆ ಅಲ್ಲಿಯ ಶಾಸನ ಸಭೆಯ ಒಪ್ಪಿಗೆ.

ಜೂಲು ಇನ್‌ಕಾಥ ಸ್ವಾತಂತ್ರ್ಯ ಪಕ್ಷ ಮತ್ತು ಹಲವು 'ತಾಯ್ನಾಡುಗಳ' ಪ್ರಭುಗಳ ವಿರೋಧ. ಏಪ್ರಿಲ್ ೨೭ರಂದು ನಡೆಯುವ ಚುನಾವಣೆಯಲ್ಲಿ ಭಾಗವಹಿಸನೆಂದು ಬೆದರಿಕೆ.

ಆ ತಾಯ್ನಾಡುಗಳಲ್ಲೇ ಅನೇಕರಿಗೆ ಚುನಾವಣೆಗಳಲ್ಲಿ ಭಾಗವಹಿಸುವ ಹಂಬಲ. ಪ್ರತಿಗಾಮಿಗಳ ವಿರುದ್ಧ ಪ್ರತಿಭಟನೆ.

ಹಳಿಯ ಪಟ್ಟಭದ್ರ ಹಿತಗಳೊಂದಿಗೆ ರಾಜಿಗೂ ಪ್ರಯತ್ನ. ಈ ಪ್ರಭುತ್ವಗಳಿಗೆ ಸ್ವಾಯತ್ತತೆ ನೀಡಲು ಒಪ್ಪಿಗೆ.

ಅಂತೂ ಏಪ್ರಿಲ್ ೨೭ ರಂದು ಚುನಾವಣೆ ಖಂಡಿತ. ಹಿಂಸಾಚಾರ ಹೆಚ್ಚಾಗಿ ನಡೆಯದಿದ್ದರೆ ಅದು ನಾಡಿನ ಅದೃಷ್ಟ. ನಡೆದರೂ ಹೊಸ ಯುಗದ ಅರುಣೋದಯವಾಗದಿರದು.

ಆ ಚುನಾವಣೆಯಲ್ಲಿ ಸಂವಿಧಾನ ರಚನಾಸಭೆಯ ಸದಸ್ಯರ ಆಯ್ಕೆಯಾಗು


ತ್ತದೆ. ಈ ಶತಮಾನದ ಅಂತ್ಯದೊಳಗೆ ಅಲ್ಲಿಯ ಕಪ್ಪು ಜನರ ಬಹು ದಿನಗಳ ಕನಸು ಸಂಪೂರ್ಣವಾಗಿ ನನಸಾಗುತ್ತದೆ.

ಎಪ್ಪತ್ತಾರನೆಯ ವಯಸ್ಸಿನಲ್ಲಿ ಮಂಡೇಲ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗುತ್ತಾರೆ. ಜನರ ಆಶೋತ್ತರಗಳು ಮುಗಿಲೆತ್ತರಕ್ಕೆ ಏರಿವೆ.

ಡಿ ಕ್ಲರ್ಕರೊಂದಿಗೆ ಕಳೆದ ವರ್ಷ ನೊಬೆಲ್ ಶಾಂತಿ ಪಾರಿತೋಷಿಕವನ್ನು ಹಂಚಿಕೊಂಡ ನೆಲ್ಸನ್ ಮಂಡೇಲರ ಸಾಂಸಾರಿಕ ಜೀವನವೇನೂ ಸುಖಮಯವಲ್ಲ. ದೀರ್ಘಕಾಲದ ಸೆರೆವಾಸದಲ್ಲಿ ಅವರು ಹೆಂಡತಿ ಮಕ್ಕಳಿಂದ ದೂರ. ಬಿಡುಗಡೆ ಹೊಂದಿದ ಮೇಲೂ ಪತ್ನಿಯಿಂದ ದೂರ. ಪತ್ನಿ ವಿನ್ನಿಯೊಂದಿಗೆ ಅವರ ವಿವಾಹ ವಿಚ್ಛೇದ. ಆದರೂ ಅವರ ಮನಸ್ಸು ಕಹಿಯಲ್ಲ. ಪತ್ನಿಗೆ ಮುಡಿಪಾಗಿಟ್ಟ ಪ್ರೀತಿಯಲ್ಲಿ ಇನಿತೂ ಲೋಪವಿಲ್ಲ.

ಸಂತೋಷ ಸಂಭ್ರಮದ ಕಾಲದಲ್ಲೂ ಮಂಡೇಲ ಒಂಟಿ ಜೀವ. 'ಕರುಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು' ಎಂದು ಬಹುಶಃ ಅವರು ಹೇಳಿಕೊಳ್ಳುತ್ತಿದ್ದಾರೆ, ಸದಾ.

ಎಚ್ಚೆಸ್ಕೆ



ಭಕ್ತರಾಗುವವರು ಒಂದು ಮಾತು ನೆನಪಿನಲ್ಲಿಡಬೇಕು. ಡಾಂಭಿಕ ಭಕ್ತರಾಗುವುದಕ್ಕಿಂತ ನಾಸ್ತಿಕರಾಗಿರುವುದೇ ಲೇಸು.

—ವಿವೇಕಾನಂದ

ನವಸಾಕ್ಷರರಿಗಾಗಿ ಸಾಹಿತ್ಯ

ವಯಸ್ಕರ ಶಿಕ್ಷಣ ಕಾರ್ಯಕ್ರಮವು ನಮ್ಮ ದೇಶದಲ್ಲಿ ಅರ್ಧ ಶತಮಾನಕ್ಕಿಂತ ಹಿಂದಿನಿಂದ ನಡೆದುಕೊಂಡು ಬರುತ್ತಿದ್ದರೂ ಉದ್ದೇಶಿತ ಗುರಿಯನ್ನು ನಿಗಧಿತ ಅವಧಿಯಲ್ಲಿ ತಲಪದಿರಲು ಇರುವ ಕಾರಣಗಳು ಹಲವು ಹತ್ತು. ನವಸಾಕ್ಷರರು ತಾವು ಈ ಹಿಂದೆ ಗಳಿಸಿಕೊಂಡ ಸಾಕ್ಷರತೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಸೂಕ್ತ ವ್ಯವಸ್ಥೆ ಹಾಗೂ ಪ್ರೇರಣಾತ್ಮಕ ವಾತಾವರಣ ನಿರ್ಮಾಣವಾಗದಿರುವುದೂ ಒಂದು ಅತಿ ಮುಖ್ಯವಾದ ಕಾರಣ ಎಂಬುದನ್ನು ಗುರುತಿಸಬಹುದಾಗಿದೆ.

೧೯೭೮ ರಲ್ಲಿ ಜಾರಿಗೆ ಬಂದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮವು ವೈಶಿಷ್ಟ್ಯಪೂರ್ಣವಾದ ವ್ಯವಸ್ಥಿತ ಕಾರ್ಯಕ್ರಮವಾದರೂ ಸಹ ಮೂಲ ಸಾಕ್ಷರತೆಯೊಂದಿಗೆ ಸಾಕ್ಷರೋತ್ತರ ಕಾರ್ಯಕ್ರಮವನ್ನು ೧೯೮೩ ರವರೆಗೂ ಅಳವಡಿಸಿ ಜಾರಿಗೊಳಿಸದೆ ಇದ್ದುದೂ ಸಹ ಈ ಯೋಜನೆಯು ನಿರ್ದಿಷ್ಟ ಅವಧಿಯಲ್ಲಿ ನಿರೀಕ್ಷಿತ ಗುರಿಮುಟ್ಟಲು ಸಾಧ್ಯವಾಗದಿರುವುದಕ್ಕೆ ಕಾರಣವಾಯಿತು ಎಂಬ ಅಂಶವನ್ನು ಈ ಬಗ್ಗೆ ನಡೆದ ಮೌಲ್ಯಮಾಪನ ವರದಿಯಲ್ಲಿ ಉಲ್ಲೇಖಿಸಿದೆ.

ಮೈಸೂರು ಮಹಾರಾಜ ಕಾಲೇಜಿನ ವಿದ್ಯಾರ್ಥಿ ಸಂಘವು ನಿರಕ್ಷರತಾ ನಿವಾರಣೆಗೆ ಕೈಗೊಂಡ ಕಾರ್ಯಕ್ರಮವು ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಚಳುವಳಿಗೆ ಹಾಡಿದ ನಾಂದಿಯೂ ಹೌದು. ಈ ಸಂಘವು ೧೯೩೯ ರಲ್ಲಿ ಪ್ರಾರಂಭಿಸಿದ ರಾತ್ರಿ ಶಾಲೆಗೆ ಮೈಸೂರು ಅರಮನೆ ನೌಕರರು ದಾಖಲಾಗಿ ೫ ತಿಂಗಳ ಕಾಲ ಓದು ಬರಹ ಕಲಿತರು. ಈ ಫಲಿತಾಂಶದಿಂದ ಉತ್ತೇಜಿತರಾದ ಕಾರ್ಯಕರ್ತರು ಮರುವರ್ಷವೂ ರಾತ್ರಿ ಶಾಲೆಯೊಂದನ್ನು ಪ್ರಾರಂಭಿಸಿದರು. ಅಕ್ಷರ ಪ್ರಚಾರ ಸಮಿತಿಯ ಅಧಿಕಾರಿಗಳು ಈ ರಾತ್ರಿ ಶಾಲೆಯನ್ನು ಪರಿಶೀಲಿಸಿದಾಗ ಬಹುಪಾಲು ಹಿಂದಿನ ವರ್ಷದಲ್ಲಿ ರಾತ್ರಿ ಶಾಲೆಗೆ ಸೇರಿ ಕಲಿತಿದ್ದವರೇ ಈ ಸಾರಿಯೂ ದಾಖಲಾಗಿದ್ದರು. ಇವರು ಈ ಹಿಂದಿನಂತೆಯೇ ಅನಕ್ಷರತೆಗೆ ಮರಳಿದ್ದರು. ಸೂಕ್ತ ಸ್ಥಿರೀಕರಣ ಸಾಹಿತ್ಯ ಸಕಾಲದಲ್ಲಿ ಅಲಭ್ಯವಾದ ಕಾರಣ ಈ ಹಿಂದೆ ಕಲಿತದ್ದು ಮತ್ತು ಕಲಿಸಿದ್ದು ವಿಫಲವಾಗಿತ್ತು.

ಯುನೆಸ್ಕೋ ಫಂಡಮೆಂಟಲ್ ಎಜುಕೇಷನ್ ಸೆಂಟರ್‌ವತಿಯಿಂದ ೧೯೫೨–೫೩ ರಲ್ಲಿ ಮೈಸೂರಿನ ಅಲೋಕದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಬರಹಗಾರರ ಕಮ್ಮಟ ಒಂದು ನಡೆಯಿತು. ಈ ಕಮ್ಮಟಕ್ಕೆ ಅಗತ್ಯವಾಗಿದ್ದ

ಮಾಹಿತಿ ಸಂಗ್ರಹಕ್ಕಾಗಿ ಈ ಹಿಂದೆ ರಾತ್ರಿ ಶಾಲೆಗಳಲ್ಲಿ ಓದುಬರಹ ಕಲಿತಿದ್ದ ಸುಮಾರು ೨೫೦ ಜನ ನವಸಾಕ್ಷರರಿಗೆ ಒಂದು ಪ್ರಶ್ನಾವಳಿಯನ್ನು ಕಳುಹಿಸ ಲಾಯಿತು. ಇವಕ್ಕೆ ಸಂಬಂಧಿಸಿದಂತೆ ಬಂದ ಉತ್ತರಗಳನ್ನು ಪರಿಶೀಲಿಸಿದಾಗ ಆಶ್ಚರ್ಯಕರವಾದ ಸಂಗತಿ ವ್ಯಕ್ತವಾಯಿತು. ರಾತ್ರಿ ಶಾಲೆಯನ್ನು ಮುಗಿಸಿದ ನಂತರ ಯಾವುದೇ ರೀತಿಯ ಓದು ಬರಹ ಕೈಗೊಂಡವರು ಯಾರೂ ಇರಲಿಲ್ಲ. ಇವಕ್ಕೆ ಸಂಬಂಧಿಸಿದಂತೆ ಇಬ್ಬರಿಂದ ಮಾತ್ರ ಮಾಹಿತಿ ಬಂದಿತ್ತು. ಕಳುಹಿಸಿದ್ದ ಪ್ರಶ್ನಾವಳಿಯನ್ನು ಇವರಲ್ಲಿ ಒಬ್ಬನು ಓದಿದ್ದರೆ ಇನ್ನೊಬ್ಬ ಬೇರೆಯವರಿಂದ ಓದಿಸಿದ್ದ, ಓದಿದವನೂ ಸಹ ಇನ್ನೊಬ್ಬರಿಂದ ಪ್ರಶ್ನಾವಳಿಗೆ ಉತ್ತರ ಬರೆಸಿದ್ದ.

ನವಸಾಕ್ಷರರಿಗೆ ಸಕಾಲದಲ್ಲಿ ಸೂಕ್ತ ಸಾಕ್ಷರೋತ್ತರ ವ್ಯವಸ್ಥೆ ಇಲ್ಲದಿದ್ದಲ್ಲಿ ಕಾಲಾನುಕ್ರಮದಲ್ಲಿ ನಿರಕ್ಷರತೆಗೆ ಮರಳುವುದು ಖಚಿತ ಎಂಬ ಸಂಗತಿ ಮೇಲಿನ ಎರಡು ನಿದರ್ಶನಗಳಿಂದ ವ್ಯಕ್ತವಾಗಿದೆ. ಈ ಅಂಶವನ್ನು ದೇಶ ವಿದೇಶಗಳ ಸಂಶೋಧನಾ ವರದಿಗಳು ಹೊರಗೆಡವಿವೆ. ವಯಸ್ಕರ ಶಿಕ್ಷಣ ಯಶಸ್ವಿಯಾಗ ಬೇಕಾದಲ್ಲಿ ಸಾಕ್ಷರೋತ್ತರ ಮತ್ತು ಮುಂದುವರಿಕೆ ಕಾರ್ಯಕ್ರಮವು ಮೂಲ ಸಾಕ್ಷರತೆಗೆ ಬೆಸುಗೆಯ ಕೊಂಡಿಯಾಗಿರುವುದು ಅಗತ್ಯವಾಗಿದೆ.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಹಾಗೂ ನಂತರದಿಂದಲೂ ಕೆಲವು ವಯಸ್ಕರ ಶಿಕ್ಷಣ ಸಂಘ ಸಂಸ್ಥೆಗಳು ಸ್ವಯಂಪ್ರೇರಣೆಯಿಂದ ಸಾಕ್ಷರೋತ್ತರ ಸಾಹಿತ್ಯರಚನೆ ಕೈಗೊಂಡು ಕಾಲಾನಂತರ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಧನ ಸಹಾಯದೊಂದಿಗೆ ಈ ಕೆಲಸ ಮುಂದುವರಿಸಿಕೊಂಡು ಬಂದಿರುತ್ತವೆ.

ಇವುಗಳಲ್ಲಿ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುಂಬಯಿಯ ನಗರ ಸಮಾಜ ಶಿಕ್ಷಣ ಸಮಿತಿ, ಸಾಕ್ಷರತಾ ನಿಕೇತನ ಲಕ್ನೋ, ಗುಜರಾತ್ ಸಮಾಜ ಶಿಕ್ಷಣ ಸಮಿತಿ, ದೆಹಲಿಯ ಜಾಮಿಯಾ ಮಿಲಿಯ ಮುಂತಾದುವು ಉಲ್ಲೇಖಾರ್ಹ ಸಂಸ್ಥೆಗಳಾಗಿರುತ್ತವೆ.

ನವಸಾಕ್ಷರರ ಸಾಹಿತ್ಯ ನಿರ್ಮಾಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ೧೯೫೪ ರಲ್ಲಿ ಭಾರತ ಸರ್ಕಾರದ ವಯಸ್ಕರ ಶಿಕ್ಷಣ ನಿರ್ದೇಶನಾಲಯವು ನವಸಾಕ್ಷರರ ಸಾಹಿತ್ಯ ರಚನಾ ಸ್ಪರ್ಧೆಯನ್ನು ಏರ್ಪಡಿಸಿ ಬಹುಮಾನ ನೀಡುವ ಯೋಜನೆಯನ್ನು ಜಾರಿಗೊಳಿಸಿತು. ಈ ಸ್ಪರ್ಧೆಯನ್ನು ಭಾರತದ ರಾಜ್ಯಾಂಗದಲ್ಲಿ ಅಂಗೀಕೃತವಾಗಿರುವ ಭಾಷೆಗಳಿಗೆ ಅನ್ವಯಗೊಳಿಸಿ ಪ್ರತಿ ವರ್ಷ ಹಸ್ತಪ್ರತಿಗಳನ್ನು ಆಹ್ವಾನಿಸಿ ಬಹುಮಾನ ನೀಡುವ ಪ್ರೋತ್ಸಾಹ

ದಾಯಕ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಕಳೆದ ಐದು ದಶಕಗಳಿಂದಲೂ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ನವಸಾಕ್ಷರರ ಸಾಹಿತ್ಯ ರಚನೆಗಾಗಿ ಬರಹಗಾರರ ಕಮ್ಮಟಗಳನ್ನು ಏರ್ಪಡಿಸಿ ಸುಮಾರು ೧೫೦ ಕ್ಕೂ ಹೆಚ್ಚಿನ ಸಂಖ್ಯೆಯ ಬರಹಗಾರರಿಗೆ ಈ ಕ್ಷೇತ್ರದಲ್ಲಿ ತರಬೇತಿ ನೀಡಿದೆ. ಈ ಕಮ್ಮಟಗಳಲ್ಲಿ ರಚನೆಯಾದ ಸುಮಾರು ೭೫ ಕೃತಿಗಳನ್ನು ಪ್ರಕಟಿಸಿ ಸಾಕ್ಷರೋತ್ತರ ಕಾರ್ಯಕ್ರಮಕ್ಕೆ ಬಳಸಿಕೊಂಡು ಬರುತ್ತಿದೆ.

ನವಸಾಕ್ಷರರ ಸಾಹಿತ್ಯ ರಚನೆಯು ಕಲೆಯೂ ಹೌದು, ವಿಜ್ಞಾನವೂ ಹೌದು. ಈ ದಿಶೆಯಲ್ಲಿ ಸಾಹಿತ್ಯ ನಿರ್ಮಿಸುವವರು ಓದುಗರ ವಯಸ್ಸು, ಕಸುಬು, ಲಿಂಗ, ಪರಿಸರ, ವಾಚನಾಭಿರುಚಿ, ಈ ಹಿಂದೆ ಅವರು ಗಳಿಸಿರುವ ಸಾಕ್ಷರತೆಯ ಮಟ್ಟ ಮುಂತಾದ ಬಹುಮುಖ್ಯ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸಾಹಿತ್ಯ ರಚಿಸಿದಾಗ ಮಾತ್ರ ಆ ವರ್ಗದ ಜನರನ್ನು ಆಕರ್ಷಿಸಲು ಸಾಧ್ಯ. ತಮ್ಮ ತಲೆಯಲ್ಲಿ ತುಂಬಿರುವ ವಿಷಯಗಳನ್ನು ಹೇಳುವುದಕ್ಕೆ ಬದಲಾಗಿ ಓದುವವರ ತಲೆಗೆ ಏನು ಬೇಕು, ಎಷ್ಟು ಹಿಡಿಸೀತು ಎಂಬ ಎಚ್ಚರ ಲೇಖಕರಿಗೆ ಇರುವುದು ಅಗತ್ಯ. ಪ್ರೌಢ ಓದುಗರಿಗೆ ಸಾಹಿತ್ಯ ರಚಿಸುವುದಕ್ಕಿಂತಲೂ ನವಸಾಕ್ಷರರಿಗೆ ಸಾಹಿತ್ಯ ರಚಿಸುವುದು ಪ್ರಸಿದ್ಧ ಲೇಖಕರಿಗೂ ಸವಾಲಿನ ಕೆಲಸ. ಭಾರತೀಸುತ, 'ಸಿಸು'– ಸಂಗಮೇಶ, ದೇವನೂರು ಮಹಾದೇವರಂತಹ ಸಾಹಿತಿಗಳೂ ಸಹ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಏರ್ಪಡಿಸುತ್ತಿದ್ದ ಬರಹಗಾರರ ಕಮ್ಮಟಗಳಲ್ಲಿ ತರಬೇತಿ ಹೊಂದಿ ಕೃತಿ ರಚಿಸಿರುವುದನ್ನು ಗಮನಿಸಿದಾಗ ಈ ಸಾಹಿತ್ಯ ಪ್ರಕಾರದ ವೈಶಿಷ್ಟ್ಯ ಗೋಚರವಾಗುತ್ತದೆ.

ಹೂವಿನ ಮಾಲೆಯು ಸಿದ್ಧವಾಗಿದೆ, ಆದರೆ ಅದನ್ನು ಧರಿಸುವವರಿಲ್ಲದೆ ಬಾಡಿ ಹೋಗುತ್ತಿದೆ ಎಂಬ ಕವಿಯೊಬ್ಬನ ಕಳಕಳಿಯು ಈ ಕ್ಷೇತ್ರಕ್ಕೆ ಹೆಚ್ಚು ಅನ್ವಯವಾಗುತ್ತದೆ. ಆದ್ದರಿಂದ ಮಹತ್ತರ ಉದ್ದೇಶದಿಂದ ಸಿದ್ಧವಾದ ಸಾಹಿತ್ಯವು ಸಕಾಲದಲ್ಲಿ ಸಂಬಂಧಪಟ್ಟವರಿಗೆ ತಲುಪಿ ಸದುಪಯೋಗವಾಗುವ ವ್ಯವಸ್ಥೆಯು ಅತಿ ಮುಖ್ಯವಾದುದು ಮತ್ತು ಅಗತ್ಯವಾದುದು.

ಮೂಲ ಸಾಕ್ಷರತಾ ಅವಧಿಯಲ್ಲಿ ಕಲಿಸುವವನೊಬ್ಬ ಇದ್ದು, ಸಾಧ್ಯವಾದ ಮಟ್ಟಿಗೂ ಈ ಹಂತದ ಕಾರ್ಯಕ್ರಮವು ನಿಯಂತ್ರಣದ ವ್ಯವಸ್ಥೆಯಲ್ಲಿ ನಡೆಯುತ್ತದೆ. ಆದರೆ ಸಾಕ್ಷರೋತ್ತರ ಹಾಗೂ ಮುಂದುವರಿಕೆ ಕಾರ್ಯಕ್ರಮವು ಈ ನಿಯಂತ್ರಣದಿಂದ ಕ್ರಮೇಣ ಬಿಡುಗಡೆ ಪಡೆದು ಈ ಘಟ್ಟದಲ್ಲಿ ನವಸಾಕ್ಷರರು ಕ್ರಿಯಾತ್ಮಕ ಸಾಕ್ಷರತೆಯನ್ನು ಗಳಿಸಿಕೊಳ್ಳಬೇಕಾಗಿದ್ದು, ಕಲಿಕೆಯು ಬಾಹ್ಯ

ಪ್ರೇರಣೆಯಿಂದ ಆಂತರಿಕ ಪ್ರೇರಣೆಗೆ ಬದಲಾಗುವ ಅವಧಿಯಾಗಿರುತ್ತದೆ. ಕಲಿಯುವವರಲ್ಲಿ ಇಂತಹ ಮಾರ್ಪಾಡನ್ನು ನಿರೀಕ್ಷಿಸಿದಾಗ ಸಾಹಿತ್ಯವು ಸತ್ವಯುತವಾಗಿರುವುದರ ಜೊತೆಗೆ ಕಾರ್ಯಕ್ರಮ ಅನುಷ್ಠಾನ ವ್ಯವಸ್ಥೆಯೂ ಸಹ ವೇಗವರ್ಧಕ ಶಕ್ತಿಯಾಗಿ ಕೆಲಸ ನಿರ್ವಹಿಸುವುದು ಅಗತ್ಯವಾಗಿರುತ್ತದೆ.

೧೬ ಪಾಯಿಂಟ್ ಅಕ್ಷರಗಳಲ್ಲಿ ಮುದ್ರಣವಾದುದೆಲ್ಲಾ ನವಸಾಕ್ಷರರ ಸಾಹಿತ್ಯವಾಗಬಲ್ಲದು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿರುವಾಗ ನವಸಾಕ್ಷರರು ತಮ್ಮ ಓದನ್ನು ಹೇಗೆ ಉಳಿಸಿಕೊಂಡು ಬೆಳೆಸಿಕೊಳ್ಳಲು ಸಾಧ್ಯ ಎಂಬುದು ವಿವೇಚಿಸಬೇಕಾದ ಸಂಗತಿ. ಇಂದಿನ ಎಲೆಕ್ಟ್ರಾನಿಕ್ ಮಾಧ್ಯಮಗಳ ಶಕ್ತಿಯುತ ಆಕರ್ಷಣೆಯನ್ನು ಮೆಟ್ಟಿ ಓದುಬರಹದತ್ತ ತನ್ನನ್ನು ತೊಡಗಿಸಿಕೊಳ್ಳಲು ಪ್ರೌಢ ಓದುಗರೇ ಹೋರಾಟ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಓದುಬರಹವೇ ಜೀವನದ ಆಸರೆಯಾಗಿರುವ ವೃತ್ತಿ ನಿರತರೂ ಸಹ ದೈನಂದಿನ ವ್ಯವಹಾರದಲ್ಲಿ ಎಷ್ಟು ವೇಳೆಯನ್ನು ಓದುಬರಹಕ್ಕೆ ವಿನಿಯೋಗಿಸುತ್ತಿದ್ದಾರೆ ಎಂಬುದರ ಬಗ್ಗೆ ಸಂಶೋಧನೆಯೊಂದು ನಡೆದರೆ ಅದ್ಭುತ ಫಲಿತಾಂಶ ಹೊರಬೀಳಬಹುದು. ಈ ಪರಿಸ್ಥಿತಿಯಲ್ಲಿ ನವಸಾಕ್ಷರರು ತಾವಾಗಿಯೇ ಸಾಹಿತ್ಯವನ್ನು ಕೊಂಡೊಯ್ದು ಓದುವ ವಾತಾವರಣ ನಿರ್ಮಾಣವಾಗಬೇಕಾಗಿರುವಷ್ಟೇ ಓದಿಸಿಕೊಳ್ಳುವಂತಹ ಪ್ರೇರಣಾತ್ಮಕ ಅಂಶವನ್ನು ಸಾಹಿತ್ಯವೂ ಒಳಗೊಂಡಿರುವುದು ಅಗತ್ಯವಾಗಿರುತ್ತದೆ.

ನವಸಾಕ್ಷರರಿಗೆ ಸೂಕ್ತ ವಿಷಯ ಆಯ್ಕೆ ಮಾಡಲು ಅವಲೋಕನ, ಪ್ರಶ್ನಾವಳಿ, ಸಂದರ್ಶನ ಮುಂತಾದ ವಿಧಾನಗಳಿದ್ದು ಈ ಮೂಲಕ ಅವರ ಅಗತ್ಯವನ್ನು ಗುರುತಿಸಿ, ಸಾಹಿತ್ಯ ರಚಿಸುವುದು ಪರಿಣಾಮಕಾರಿ ವಿಧಾನವಾದರೂ, ಪೂರ್ವಭಾವಿಯಾಗಿ ಲೇಖಕ ಇದಕ್ಕೆ ಹೆಚ್ಚಿನ ಶ್ರಮವಹಿಸಬೇಕಾಗಿರುತ್ತದೆ. ಆದ್ದರಿಂದ ಭಾರತ ಸರ್ಕಾರದ ವಯಸ್ಕರ ಶಿಕ್ಷಣ ನಿರ್ದೇಶನಾಲಯವು ನವಸಾಕ್ಷರರ ಸಾಹಿತ್ಯ ರಚನೆಗೆ ಸಂಬಂಧಿಸಿದಂತೆ ಬರಹಗಾರರಿಗೆ ಮಾರ್ಗಸೂಚಿಯನ್ನು ಆಗಾಗ ಸಿದ್ಧಪಡಿಸಿ ಬಿಡುಗಡೆ ಮಾಡುತ್ತಿದ್ದು, ಈ ಮಾರ್ಗಸೂಚಿಯನ್ನು ಆಸಕ್ತರು ನವಸಾಕ್ಷರರ ಸಾಹಿತ್ಯ ರಚನೆಗೆ ಹಿನ್ನೆಲೆಯಾಗಿ ಬಳಸಿಕೊಳ್ಳಬಹುದಾಗಿರುತ್ತದೆ.

ಸಾಹಿತ್ಯ ರಚನೆಗೆ ಅರ್ಹವಾಗಿರುವ ಕ್ಷೇತ್ರಗಳು

ಅ) ವ್ಯಕ್ತಿ ಮತ್ತು ಸಂಸಾರ
ಆ) ವ್ಯಕ್ತಿ ಮತ್ತು ಸಮಾಜ

ಇ) ಸಂಸ್ಕೃತಿ ಮತ್ತು ಮನರಂಜನೆ
ಈ) ಆರೋಗ್ಯ ಮತ್ತು ನೈರ್ಮಲ್ಯ
ಉ) ಉದ್ಯೋಗ ಮತ್ತು ವೃತ್ತಿ ಪರಿಣತಿ, ಇತ್ಯಾದಿ

ಅ) ವ್ಯಕ್ತಿ ಮತ್ತು ಸಂಸಾರಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳು

1) ಜನಸಂಖ್ಯಾ ಶಿಕ್ಷಣ
2) ವಿವಾಹದ ವಯಸ್ಸು
3) ಸಂತಾನೋತ್ಪತ್ತಿ ವಿಧಾನ
4) ಶಾರೀರಕ ಬೆಳವಣಿಗೆ
5) ಸಣ್ಣ ಸಂಸಾರ
6) ಮಕ್ಕಳ ಶಿಕ್ಷಣ
7) ಯುವಜನ ಸಮಸ್ಯೆ
8) ಗಂಡ-ಹೆಂಡತಿ ನಡುವಿನ ಸಾಮರಸ್ಯ
9) ತಂದೆತಾಯಿ ಮತ್ತು ಮಕ್ಕಳ ನಡುವಿನ ಸಾಮರಸ್ಯ
10) ನೆರೆಹೊರೆಯವರೊಡನೆ ಸಂಬಂಧ
11) ಸಂಸಾರದ ಆದಾಯ ವೆಚ್ಚದ ನಿರ್ವಹಣೆ
12) ಸಣ್ಣ ಉಳಿತಾಯ
13) ವರದಕ್ಷಿಣೆ
14) ಮದ್ಯಪಾನದ ದುಷ್ಪರಿಣಾಮ
15) ಮಹಿಳೆ ಮತ್ತು ಹೆಣ್ಣು ಮಕ್ಕಳ ಸ್ಥಾನಮಾನ ಇತ್ಯಾದಿ

ಆ) ವ್ಯಕ್ತಿ ಮತ್ತು ಸಮಾಜಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳು

1) ನಾವು ಮತ್ತು ನಮ್ಮ ದೇಶ
2) ರಾಷ್ಟ್ರೀಯ ಐಕ್ಯತೆ
3) ಪ್ರಜಾಪ್ರಭುತ್ವ
4) ಜಾತ್ಯಾತೀತತೆ
5) ಸಮಾನತೆ
6) ಪೌರಹಕ್ಕು ಮತ್ತು ಜವಾಬ್ದಾರಿ
7) ಪೌರನೀತಿ
8) ಪರಿಸರ ಸಂರಕ್ಷಣೆ
9) ಮಹಿಳಾ ಅಭಿವೃದ್ಧಿ
10) ದುರ್ಬಲವರ್ಗದವರಿಗೆ ಇರುವ ಸವಲತ್ತುಗಳು
11) ಕನಿಷ್ಠ ವೇತನ ನಿಗಧಿ
12) ಸಮಾನ ವೇತನ

ಇ) ಸಂಸ್ಕೃತಿ ಮತ್ತು ಮನರಂಜನೆ

1) ನವಭಾರತ ನಿರ್ಮಾಪಕರು
2) ಸ್ವಾತಂತ್ರ್ಯಹೋರಾಟ
3) ಮಹಾತ್ಮರ ಜೀವನಚರಿತ್ರೆ
4) ಪಂಚತಂತ್ರದ ಕಥೆಗಳು
5) ಪುರಾಣ, ಮಹಾಕಾವ್ಯಗಳಿಂದ ಆಯ್ದ ಸನ್ನಿವೇಶಗಳು
6) ಜಾನಪದ ಕತೆಗಳು, ಇತ್ಯಾದಿ

ಈ) ಆರೋಗ್ಯ ಮತ್ತು ನೈರ್ಮಲ್ಯ

1) ಆರೋಗ್ಯ ಕೇಂದ್ರಗಳು
2) ಆರೋಗ್ಯ ಕಾರ್ಯಕರ್ತರು
3) ಪೌಷ್ಠಿಕ ಆಹಾರ
4) ಸಮಗ್ರ ಶಿಶು ಅಭಿವೃದ್ಧಿ ಯೋಜನೆ
5) ನೈರ್ಮಲ್ಯ
6) ಗಾಳಿ
7) ನೀರು
8) ಮಣ್ಣು
9) ಬೆಳಕು
10) ಹೊಗೆ ರಹಿತ ಒಲೆ
11) ಪ್ರಥಮ ಚಿಕಿತ್ಸೆ
12) ಚರ್ಮ ರೋಗಗಳು
13) ಆಮಶಂಕೆ
14) ಅತಿಸಾರ (ಅತಿಭೇದಿ)
15) ಕಣ್ಣಿನ ರಕ್ಷಣೆ
16) ಕಿವಿ ರಕ್ಷಣೆ
17) ಕಾಮಾಲೆ ರೋಗ
18) ಕಾಲರಾ ರೋಗ
19) ರಕ್ತಸ್ರಾವ
20) ತಾಯಿ ಮತ್ತು ಮಗುವಿನ ಆರೋಗ್ಯ
21) ರಕ್ತಹೀನತೆ
22) ಚುಚ್ಚುಮದ್ದು
23) ಸಮತೂಕದ ಆಹಾರ
24) ಗರ್ಭಿಣಿಯರ ಆರೈಕೆ
25) ಮಲೇರಿಯಾ ರೋಗ
26) ಧನುರ್ವಾಯು
27) ಕ್ಷಯ
28) ಪೋಲಿಯೋ
29) ಟೈಫಾಯಿಡ್, ಇತ್ಯಾದಿ

ಉ) ಉದ್ಯೋಗ ಮತ್ತು ವೃತ್ತಿ

1) ವ್ಯವಸಾಯ
2) ತೋಟಗಾರಿಕೆ
3) ಮಣ್ಣಿನ ಪರೀಕ್ಷೆ
4) ನೀರಾವರಿ
5) ಹೈಬ್ರಿಡ್ ಜೋಳ
6) ಗೊಬ್ಬರ–ಕಾಂಪೋಸ್ಟ್
7) ಕ್ರಿಮಿನಾಶಕಗಳು
8) ಕಳೆನಾಶ
9) ಒಕ್ಕಣೆ–ಕೊಯ್ಲು
10) ದಾಸ್ತಾನು
11) ಮಾರುಕಟ್ಟೆ
12) ವ್ಯವಸಾಯದ ಉಪಕರಣಗಳು ಮತ್ತು ದುರಸ್ತಿ
13) ಸಹಕಾರ
14) ಒಣಬೇಸಾಯ ಪದ್ಧತಿ
15) ಎಣ್ಣೆಕಾಳುಗಳು
16) ಮಣ್ಣಿನ ರಸಸಾರ ಹೆಚ್ಚಿಸುವುದು
17) ಕೈತೋಟ
18) ಹೈನುಗಾರಿಕೆ

19) ಕೋಳಿ ಸಾಕಣೆ
20) ಕುರಿ ಸಾಕಣೆ
21) ಹಂದಿ ಸಾಕಣೆ
22) ಜೇನು ಸಾಕಣೆ
23) ರೇಷ್ಮೆ ಸಾಕಣೆ
24) ನೇಯ್ಗೆ
25) ಹೊಲಿಗೆ
26) ಕಸೂತಿ
27) ಹೆಣಿಗೆ
28) ಕಾಗದ ತಯಾರಿಕೆ
29) ಹಪ್ಪಳ, ಉಪ್ಪಿನಕಾಯಿ ತಯಾರಿಕೆ
30) ಮರಗೆಲಸ
31) ಕಮ್ಮಾರಿಕೆ
32) ಚಮ್ಮಾರಿಕೆ
33) ಸೈಕಲ್ ದುರಸ್ತಿ
34) ಗೋಬರ್‌ಗ್ಯಾಸ್
35) ಸೌರ ಒಲೆ
36) ಊದುಬತ್ತಿ, ಕ್ಯಾಂಡಲ್ ತಯಾರಿಕೆ

(ಮೇಲ್ಕಂಡ ಪಟ್ಟಿಯಲ್ಲಿ ಉದಾಹರಣೆಗಾಗಿ ಕೆಲವು ವಿಷಯಗಳನ್ನು ಮಾತ್ರ ನಮೂದಿಸಿದ್ದೇನೆ. ಇವುಗಳಲ್ಲಿ ಕೆಲವು ವಿಷಯಗಳ ಮೇಲೆ ಪುಸ್ತಕಗಳು ಈಗಾಗಲೆ ಪ್ರಕಟವಾಗಿವೆ. ಲೇಖಕರು ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಯಾವುದೇ ಇನ್ನಿತರ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ.)

ನವಸಾಕ್ಷರರ ಸಾಹಿತ್ಯ ರಚನೆಯ ಹಂತಗಳು

ನವಸಾಕ್ಷರರಿಗೆ ಹಂತಹಂತವಾಗಿ ಸಾಹಿತ್ಯವನ್ನು ಒದಗಿಸಬೇಕು.

1) ಮೊದಲನೆಯ ಹಂತ

—ಈ ಹಂತದಲ್ಲಿ ಒತ್ತಕ್ಷರ, ಸಂಧಿ, ಸಮಾಸಗಳಿಲ್ಲದ ಚಿಕ್ಕ ಚಿಕ್ಕ ಪರಿಚಿತ ಪದಗಳ ಬಳಕೆಯಾಗಬೇಕು.

—ಪ್ರತಿ ವಾಕ್ಯವು 5 ಪದಗಳ ಮಿತಿಯಲ್ಲಿದ್ದು, ಒಂದು ಪ್ಯಾರಾದಲ್ಲಿ ಹೆಚ್ಚೆಂದರೆ 50 ಪದಗಳನ್ನು ಒಳಗೊಂಡಿರುವುದು ಸೂಕ್ತ. ಇಡೀ ಕೃತಿಯು 500 ಪದಗಳಿಂದ 1000 ಪದಗಳಿಗೆ ಸೀಮಿತವಾಗಿರುವುದು ಅಪೇಕ್ಷಣೀಯವಾಗಿರುತ್ತದೆ.

—ವಿಷಯಕ್ಕೆ ಉಪಯೋಗವಾಗುವಂತೆ ಒತ್ತಾಸೆಯಾಗಿ ಶೇ. 50 ಭಾಗ ಚಿತ್ರಗಳಿಂದ ಕೂಡಿರಬೇಕು.

—24 ಪಾಯಿಂಟ್‌ಗಳಲ್ಲಿ ಸಾಹಿತ್ಯ ಮುದ್ರಣವಾಗುವುದು ಸೂಕ್ತ

—ಇಡೀ ಕೃತಿಯು 16 ರಿಂದ 20 ಪುಟಗಳಿಗೆ ಮೀಸಲಿರಬೇಕು

2) ಎರಡನೆಯ ಹಂತ

—ಈ ಹಂತದಲ್ಲಿಯೂ ಸಹ ಸಾಧ್ಯವಾದಷ್ಟು ಸಂಧಿ, ಸಮಾಸಗಳಿಂದ ಹೊರತಾದ ಪದ ಬಳಸಬೇಕಾಗಿದ್ದು ಶೇ. 5 ರಿಂದ 6 ಭಾಗ ಹೊಸದಾದ ಪದಗಳನ್ನೂ ಸಹ ಬಳಸಬಹುದಾಗಿರುತ್ತದೆ. ಹೊಸ ಪದಗಳನ್ನು ಮತ್ತೆ ಮತ್ತೆ ಐದು ಬಾರಿಯಾದರೂ ಬಳಸಿರಬೇಕು.

—ಪ್ರತಿ ವಾಕ್ಯ 7 ಪದಗಳ ಮಿತಿ ಹೊಂದಿದ್ದು, ಒಂದು ಪ್ಯಾರಾ ಸರಾಸರಿ 80 ಪದಗಳಿಂದ ಕೂಡಿರಬೇಕು. ಇಡೀ ಕೃತಿಯು 1000 ಪದಗಳಿಂದ 2000 ಪದಗಳ ಮಿತಿಯನ್ನು ಒಳಗೊಂಡಿರಬೇಕು.

—ಈ ಕೃತಿಯಲ್ಲಿ ಶೇ. 35 ಭಾಗ ಚಿತ್ರಗಳು ಇರಬೇಕಾಗಿರುತ್ತದೆ.

—ಸಾಹಿತ್ಯದ ಮುದ್ರಣವು 20 ಪಾಯಿಂಟ್ ಅಕ್ಷರದಲ್ಲಿ ಇರುವುದು ಸೂಕ್ತ

—ಕೃತಿಯು 20 ರಿಂದ 24 ಪುಟಗಳ ಮಿತಿಯಲ್ಲಿರುವುದು ಅಗತ್ಯವಾಗಿರುತ್ತದೆ.

3) ಮೂರನೆಯ ಹಂತ

—ಕಡಿಮೆ ಪ್ರಮಾಣದಲ್ಲಿ ದೊಡ್ಡದಾದ ಪದಗಳನ್ನು ಮತ್ತು ಶೇ. 8 ರಿಂದ 10 ಹೊಸ ಪದಗಳನ್ನು ಬಳಸಿ ಸಾಹಿತ್ಯ ರಚಿಸಬಹುದಾಗಿರುತ್ತದೆ. ಹೊಸ ಪದಗಳನ್ನು ಐದು ಬಾರಿಯಾದರೂ ಪುನರ್ಬಳಸಬೇಕು.

—ಪ್ರತಿ ವಾಕ್ಯವು ಸರಾಸರಿ 8 ಪದಗಳನ್ನು ಹೊಂದಿದ್ದು ಒಂದು ಪ್ಯಾರವು ಸುಮಾರು 100 ಪದಗಳನ್ನು ಒಳಗೊಂಡಿರುತ್ತದೆ. ಇಡೀ ಕೃತಿಯು 1500 ರಿಂದ 3000 ಪದಗಳ ಮಿತಿಯಲ್ಲಿರುವುದು ಸೂಕ್ತ.

—ಕೃತಿಯ ಶೇ. 25 ಭಾಗ ಚಿತ್ರಗಳನ್ನು ಹೊಂದಿರಬೇಕು.

—16 ಪಾಯಿಂಟ್‌ಗಳಲ್ಲಿ ಮುದ್ರಣವಾಗುವುದು ಸೂಕ್ತ.

—ಇಡೀ ಕೃತಿಯು 24 ರಿಂದ 32 ಪುಟಗಳ ಮಿತಿ ಹೊಂದಿದ್ದು ಪುಸ್ತಕದ ಹೊಲಿಗೆಯು ಮಧ್ಯಭಾಗದಲ್ಲಿರುವುದು ಅಗತ್ಯ.

ಭಾಷೆಯ ಬಳಕೆ

ಸಾಧ್ಯವಾದಮಟ್ಟಿಗೂ ಎಲ್ಲಾ ಪ್ರದೇಶದಲ್ಲಿಯೂ ಬಳಕೆಯಾಗುವಂತಹ ಸರಳ ಭಾಷೆಯಾಗಿರುವುದು ಒಳ್ಳೆಯದು. ನಿರ್ದಿಷ್ಟ ಪ್ರದೇಶಕ್ಕೆ ಸಂಬಂಧಿಸಿದಂತೆ

ಕೃತಿ ರಚನೆಯಾದಲ್ಲಿ ಆ ಪ್ರದೇಶದಲ್ಲಿ ಬಳಕೆಯಲ್ಲಿರಬಹುದಾದ ವಿಶಿಷ್ಟ ಪದಗಳನ್ನು ಬಳಸಬಹುದಾಗಿರುತ್ತದೆ.

ನಿರೂಪಣಾ ವಿಧಾನ

ಆಯ್ಕೆ ಮಾಡಿಕೊಂಡ ವಿಷಯಕ್ಕೆ ಅನುಗುಣವಾಗಿ ಕಥೆ, ನಾಟಕ, ಸಂಭಾಷಣೆ ಮುಂತಾದ ವಿಧಾನಗಳಲ್ಲಿ ಕೃತಿ ರಚಿಸಬಹುದಾಗಿರುತ್ತದೆ.

ಚಿತ್ರಗಳ ಬಳಕೆ

ವಿಷಯದ ಪುಷ್ಟೀಕರಣಕ್ಕಾಗಿ ಶೇ. 25 ರಿಂದ 50 ಭಾಗ ಚಿತ್ರಗಳನ್ನು ಅಳವಡಿಸಬಹುದು.

ಅಳತೆ

ಕಾಗದದ ಲಭ್ಯತೆಗೆ ಅನುಗುಣವಾಗಿ ಪುಲ್‌ಸ್ಕೇಪ್ ಚತುರ್ದಳ, ಕ್ರೌನ್ ಅಥವಾ ಅಷ್ಟದಳದಲ್ಲಿರುವುದು ಸೂಕ್ತವಾಗಿರುತ್ತದೆ.

ಪದಗಳ ಮಿತಿ

ಸಾಧಾರಣವಾಗಿ ಬಹುಪಾಲು ನವಸಾಕ್ಷರರು 500ರಿಂದ 3000 ಪದಗಳನ್ನು ಗ್ರಹಿಸುವ ಸಾಮರ್ಥ್ಯ ಹೊಂದಿರುವುದಿಂದ ಈ ಪದಗಳ ಮಿತಿಯಲ್ಲಿ ಇಡೀ ಕೃತಿ ರಚನೆಯಾಗುವುದು ಅಪೇಕ್ಷಣೀಯ.

ಮುದ್ರಣಾಕ್ಷರದ ಗಾತ್ರ

ಈ ಹಂತದ ಓದುಗರಿಗೆ ಮುದ್ರಣಾಕ್ಷರದಗಾತ್ರ 24 ರಿಂದ 16 ಪಾಯಿಂಟ್‌ಗಳಿರುವುದು ಸೂಕ್ತವಾಗಿರುತ್ತದೆ. ಅದರಲ್ಲಿಯೂ ಮೊದಲನೆಯ ಹಂತದಲ್ಲಿರುವ ಓದುಗರಿಗೆ ಅಕ್ಷರಗಳು ಹೆಚ್ಚು ಸ್ಫುಟವಾಗಿ ಎದ್ದು ಕಾಣುವಂತಿರಬೇಕು.

ಬೈಂಡಿಂಗ್

ನವಸಾಕ್ಷರರು ಪುಸ್ತಕಗಳನ್ನು ಒರಟಾಗಿ ಬಳಕೆಮಾಡಿಕೊಳ್ಳುವ ಸಾಧ್ಯತೆ ಇರುವುದರಿಂದ ಭದ್ರವಾದ ಹೊದಿಕೆಯನ್ನು ಅಳವಡಿಸುವುದು ಅಗತ್ಯ.

ಚಂದ್ರಶೇಖರಾರಾಧ್ಯ

ಕೊಳಚೆ ಕೊಂಪೆಯ ಮಹಾನುಭಾವ

ಮೂರು ವರ್ಷಗಳ ಹಿಂದೆ, ತ್ರಿಪುರದ ಮನೋಜದಾಸ್ ತನ್ನ ಸಹೋದರನ ಜೊತೆ ಜಗಳವಾಡಿ ಮನೆ ಬಿಟ್ಟು ಹೊರಟ. ಅನೇಕ ದಿನಗಳ ಕಾಲ ಬೀದಿ ಬೀದಿ ಅಲೆದು ಕೊನೆಗೆ ಹೌರಾ ನಿಲ್ದಾಣ ತಲುಪಿದ. ವಿಪರೀತ ದಣಿವು ಹಾಗೂ ಹಸಿವುಗಳಿಂದಾಗಿ, ಬೇರೆ ದಾರಿ ತೋಚದೆ, ಅಂಗಡಿಯಿಂದ ತರಕಾರಿ ಕದಿಯಲು ಪ್ರಯತ್ನಿಸಿದ, ಪೋಲಿಸರ ಕೈಗೆ ಸಿಕ್ಕುಬಿದ್ದ, ಬಾಲಾಪರಾಧಕ್ಕಾಗಿ ಸೆರೆಮನೆ ಸೇರಿದ.

ಐದು ತಿಂಗಳ ಅನಂತರ, ಕಲ್ಕತ್ತದ ಅತ್ಯಂತ ಅಸಾಧಾರಣವೆನಿಸಿದ ಶಿಶುಕಲ್ಯಾಣ ಸಂಘವೊಂದರ ಕೃಪೆಯಿಂದ, ಮನೋಜದಾಸ, ಸೆರೆಮನೆಯಿಂದ ಬಿಡುಗಡೆ ಹೊಂದಿದ. ಹಿಂದೆ ಸೆರೆಮನೆಗಳಲ್ಲಿದ್ದು ಅಲ್ಲಿಂದ ಬಿಡುಗಡೆ ಹೊಂದಿದ ಮಕ್ಕಳಿಗಾಗಿ ಆ ಸಂಘ ನಡೆಸುತ್ತಿರುವ ಶಾಲೆಯಲ್ಲಿ ಈಗ ೧೫ ವರ್ಷ ಪ್ರಾಯದ ಮನೋಜ್ ವಿದ್ಯಾರ್ಥಿಯಾಗಿದ್ದಾನೆ. ಎಂಟನೆಯ ತರಗತಿಯಲ್ಲಿ ಓದುತ್ತಿರುವ ಅವನು ಹಾರ್ಮೋನಿಯಮ್ ಬಾರಿಸುವುದರಲ್ಲಿಯೂ ನಿಪುಣ. "ನಾನಿಲ್ಲಿ ಸುಖಿಯಾಗಿದ್ದೇನೆ, ಮನೆಗೆ ಮರಳಬೇಕೆಂದು ಅನಿಸುವುದೇ ಇಲ್ಲ" ಎನ್ನುತ್ತಾನೆ.

ಕಲ್ಕತ್ತದ ಕೊಳಚೆ ಪ್ರದೇಶದ ನಿವಾಸಿಯಾಗಿರುವ ನಿಧುರಾಣಿ ಮಂಡಲ್‌ಗೆ ಮೊದಲಿನಿಂದಲೂ ನರ್ಸ್ ಆಗಬೇಕೆಂಬ ಆಸೆ. ಆದರೆ ತನ್ನ 'ಬಸ್ತೀ'ಯಲ್ಲಿ, ಇದೇ ಸಂಘದವರು ೧೯೭೬ರಲ್ಲಿ ಶಾಲೆ ತೆರೆಯುವವರೆಗೆ, ಅವಳಿಗೆ ತನ್ನ ಆಸೆ ಎಂದಾದರೂ ಫಲಿಸುತ್ತದೆ ಎಂಬ ಭರವಸೆ ಕಿಂಚಿತ್ತೂ ಇರಲಿಲ್ಲ. ಹತ್ತನೆಯ ತರಗತಿ ಮುಗಿಸಿದ ನಿಧುರಾಣಿ ಆಮೇಲೆ ನರ್ಸ್ ಆದಳು. ಈಗ ಅವಳು ಐದು ಮಂದಿಯಿರುವ ಕುಟುಂಬದ ಏಕೈಕ ಆಧಾರವಾಗಿರುತ್ತಾಳೆ.

ಮನೋಜ್ ಹಾಗೂ ನಿಧು–ಇವರಿಬ್ಬರು ಮಾತ್ರವಲ್ಲದೆ, ತಮ್ಮ ಜೀವನದ ಗತಿಯನ್ನೇ ಬದಲಿಸಿಕೊಂಡ ಸಾವಿರಾರು ತರುಣ–ತರುಣಿಯರಿದ್ದಾರೆ. ಇವರಿಗೆ ಹೀಗೆ ಸುಧಾರಣೆಗೊಳ್ಳಲು ಸಾಧ್ಯವಾದದ್ದು ವಿಲ್ಸನ್ ಮ್ಯಾರ್ಕರ್ಸ್ ಅವರಿಂದ. ೫೬ ವರ್ಷ ಪ್ರಾಯದ ವಿಲ್ಸನ್, ಬಂಗಾಳ ಸೇವಾ ಸಮಾಜದ ('ಬಂಸೇಸ') ಸಂಸ್ಥಾಪಕರು ಮತ್ತು ಅಧ್ಯಕ್ಷರೂ, ಸ್ವಿಜರ್ಲೆಂಡಿನ ಧನಸಹಾಯದಿಂದ

೧೯೮೫ ನೆಯ ಜೂನ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಪತ್ರಿಕೆಯಲ್ಲಿ ಪ್ರಕಟವಾದ ಶಾಸೂ ಬಿಮ್ಲಾನಿ ಅವರ 'ದಿ ಗುಡ್ ಸಮರ್ಯಾಟನ್ ಆಫ್ ಕಲ್ಕತ್ತ' ಎಂಬ ಲೇಖನದ ಆಧಾರದಿಂದ.

ಅಸ್ತಿತ್ವಕ್ಕೆ ಬಂದ ಇನ್ನೊಂದು ಕಲ್ಯಾಣ ಸಂಘವಾದ 'ಟಿರೆಡೆಸ್ ಹೋಮ್ಸ್ (ಇಂಡಿಯಾ) ಸೊಸೈಟಿ'ಯ ಪ್ರಧಾನ ಕಾರ್ಯದರ್ಶಿಗಳೂ ಆಗಿದ್ದಾರೆ. ೮೦೦ ಮಂದಿ ಸಿಬ್ಬಂದಿಗಳ ನೆರವು ಪಡೆದು, 'ಬಂಸೇಸ' ಹಾಗೂ 'ಟಿರೆಡೆಸ್ ಹೋಮ್ಸ್– ಇವೆರಡೂ ಸಂಘಗಳ ಕಾರ್ಯಚಟುವಟಿಕೆಗಳ ಆಡಳಿತವನ್ನು ಮ್ಯಾಕ್‌ಕನ್ ನಿರ್ವಹಿಸುತ್ತಿದ್ದಾರೆ. ೧೪೦ ಲಕ್ಷ ರೂ. ಆಯವ್ಯಯದ ಅಂದಾಜು ಹೊಂದಿದ ಇವೆರಡೂ ಸಂಸ್ಥೆಗಳು ಈಗ ೧೫ ಶಾಲೆಗಳನ್ನು ನಡೆಸುತ್ತಿವೆ. ಇಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೧೦,೦೦೦. ಕಲಿಕೆಯ ಜೊತೆಗೆ ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ಆಹಾರದ ಸರಬರಾಜೂ ಉಂಟು. ಮ್ಯಾಕ್‌ಕನ್ ಅವರ ಮೇಲ್ವಿಚಾರಣೆಯಲ್ಲಿ ಮೂರು ಶಿಶುವಿಹಾರಗಳೂ ಒಂಬತ್ತು ಔಷಧಾಲಯಗಳೂ ಒಂದು ಆಸ್ಪತ್ರೆಯೂ ಒಂದು ದತ್ತು ಸ್ವೀಕಾರ ಕೇಂದ್ರವೂ ಇವೆ. ಸೆರೆಮನೆಗಳಲ್ಲಿರುವ ಮಕ್ಕಳನ್ನು ಬಿಡುಗಡೆಗೊಳಿಸಿ, ಅವರ ಮುಂದಿನ ಜೀವನಕ್ಕೆ ದಾರಿದೀಪ ತೋರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ 'ಬಂಸೇಸ', ಭಾರತದಲ್ಲಿಯೇ ತನ್ನ ರೀತಿಯ ಮೊತ್ತ ಮೊದಲ ಸಂಸ್ಥೆಯಾಗಿದೆ.

ತಮ್ಮ ವಯಸ್ಸಿನ ಅರ್ಧದಷ್ಟು ಪ್ರಾಯದ ವ್ಯಕ್ತಿಗೆ ಎಂದರೆ ಇಪ್ಪತ್ತೆಂಟು ವರ್ಷದ ತರುಣನಿಗೂ ದಣಿವೆನಿಸಬಹುದಾದಷ್ಟು ಕೆಲಸವನ್ನು ಪ್ರತಿ ದಿವಸ ಮ್ಯಾಕ್‌ಕನ್ ಮಾಡುತ್ತಾರೆ. ಬೆಳಿಗ್ಗೆ ನಾಲ್ಕು ಗಂಟೆಗೇ ಏಳುವ ಅವರು, ಪ್ರಾತರ್ವಿಧಿಗಳನ್ನು ಪೂರೈಸಿ, ಕಲ್ಕತ್ತದ ಕೇಂದ್ರ ಭಾಗವೆನಿಸಿದ ಪಾರ್ಕ್ ಸರ್ಕಸ್ ಮೈದಾನದ ಸಮೀಪವಿರುವ ತಮ್ಮ ಸ್ವಂತ ಚಿಕ್ಕ ಕಛೇರಿಗೆ ಹೋಗುತ್ತಾರೆ. ಅವರು ಕಛೇರಿಗೆ ಬರುವುದನ್ನೇ ಕಾಯುತ್ತಿರುವ, ನಗರದ ವಿವಿಧ ಕೊಳಚೆ ಪ್ರದೇಶಗಳ ಜನರು, ಬಂದೊಡನೆ ಅವರ ಸುತ್ತ ಸೇರುತ್ತಾರೆ. ಎಲ್ಲರಿಗೆ ಬೇಕಾಗಿರುವುದೂ ಮ್ಯಾಕ್‌ಕನ್ ಅವರ ಸಲಹೆ–ಸಹಾಯ–ಸಹಕಾರಗಳೇ.

ಉದಾಹರಣೆಗೆ, ಇಸ್ಮಾಯಿಲನನ್ನೇ ತೆಗೆದುಕೊಳ್ಳೋಣ. ನಿರುದ್ಯೋಗಿಯಾಗಿರುವ ಅವನಿಗೆ ಯಾವುದೇ ನೌಕರಿ ನೀಡಲು ಸಾಧ್ಯವಾಗದಿದ್ದರೂ, ಮ್ಯಾಕ್‌ಕನ್ ಪ್ರತಿವಾರವೂ, ಪಡಿತರ ಸಾಮಗ್ರಿಗಳ ಖರೀದಿಗಾಗಿ, ಮೂವತ್ತು ರೂ.ಗಳಂತೆ ಧನಸಹಾಯ ಮಾಡುತ್ತಿದ್ದಾರೆ. ಅವನಿಗೆ ಉದ್ಯೋಗ ಸಿಗುವವರೆಗೂ ಅವರ ಈ ನೆರವು ಮುಂದುವರಿಯುತ್ತದೆ.

ಅಬ್ದುಲ್ ರಹಮಾನನೂ ನಿರುದ್ಯೋಗಿಯಾಗಿದ್ದ. ಅವನನ್ನು ತಮ್ಮ ಶಾಲೆಯೊಂದರಲ್ಲಿ ಸಹಾಯಕನಾಗಿ ಮ್ಯಾಕ್‌ಕನ್ ನೇಮಿಸಿಕೊಂಡರು. ಕೆಲ

ಕಾಲದ ಅನಂತರ, ಚಹಾದಂಗಡಿಯನ್ನು ಪ್ರಾರಂಭಿಸಲೂ ಅವನಿಗೆ ನೆರವಾದರು.

"ನಾನು ಪರಿಹಾರ ಕಂಡು ಹುಡುಕಲಾರದ ಸಮಸ್ಯೆಗಳೂ ಇವೆ" ಎಂದು ಮ್ಯಾಕ್‌ಕನ್ ಒಪ್ಪಿಕೊಳ್ಳುತ್ತಾರೆ." ಆದರೆ ನಾನು ಪ್ರತಿಯೊಬ್ಬನ ಮನವಿಯನ್ನು ಸಹನೆಯಿಂದ ಕೇಳುತ್ತೇನೆ; ನಿರಾಶರಾದ ವ್ಯಕ್ತಿಗಳಲ್ಲಿ ಹೊಸ ಉತ್ಸಾಹ ಹಾಗೂ ಆಶಾಭಾವನೆ ಮೂಡುವಂತೆ ಮಾಡಲು ಪ್ರಯತ್ನಿಸುತ್ತೇನೆ."

ಆರೂವರೆ ಗಂಟೆಯ ವೇಳೆಗೆ ಮ್ಯಾಕ್‌ಕನ್ ತಮ್ಮ ಎಂಜನಿಯರಿಂಗ್ ಸಂಸ್ಥೆಯ ಕಚೇರಿಗೆ ಹೋಗುತ್ತಾರೆ. ಅಲ್ಲಿ ಐದುಗಂಟೆಗಳ ಕಾಲ ಅವರು ಕೆಲಸ ಮಾಡುತ್ತಾರೆ. ಅನಂತರ ತಾವು ಪ್ರಾರಂಭಿಸಿದಂಥ ಬೇರೆ ಬೇರೆ ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಹೇಗೆ ನಡೆಯುತ್ತಿವೆ ಎಂದು ಪರಿಶೀಲಿಸಲು ಕಚೇರಿಯಿಂದ ಹೊರಗೆ ಹೊರಡುತ್ತಾರೆ. ಅವರು ಮನೆಗೆ ಹೋಗುವುದು ಸಂಜೆ ಐದು ಗಂಟೆಯ ತರುವಾಯವೇ. ಬೇಗನೆ ಊಟ ಮಾಡಿ ವೈಯಕ್ತಿಕ ಕಡತಗಳನ್ನು ಪರಿಶೀಲಿಸತೊಡಗುತ್ತಾರೆ. ಮಲಗ ಹೋಗುವ ಮೊದಲು, ಕೆಲಸಮಯ ಮಾತ್ರ, ತಮ್ಮ ಮೆಚ್ಚಿನ ಎಲ್ವಿಸ್ ಪ್ರೆಸ್ಲೆ ಹಾಗೂ ನಟ್‌ಕಿಂಗ್‌ಕೋಲ್ ಅವರ ರಿಕಾರ್ಡುಗಳನ್ನು ಕೇಳುತ್ತ ವಿಶ್ರಾಂತಿ ಪಡೆಯುತ್ತಾರೆ. ಮ್ಯಾಕ್‌ಕನ್ ಪ್ರತಿ ದಿನ ರಾತ್ರಿ ಅವರು ಮಲಗುವುದು ೧೧ ಗಂಟೆಗೆ.

ಯಾವಾಗಲೂ ಶ್ವೇತ ವಸ್ತ್ರಧಾರಿಯಾಗಿರುವ ಗುಜ್ಜಾರಿ ಬ್ರಹ್ಮಚಾರಿ ಮ್ಯಾಕ್‌ಕನ್ ಅವರು ಜನಿಸಿದ್ದು ರಂಗೂನಿನಲ್ಲಿ—೧೯೩೧ರ ಸೆಪ್ಟೆಂಬರ್ ೨೯ ರಂದು. ೧೯೪೫ರಲ್ಲಿ ತಂದೆ ಕಾರ್ ಅಪಘಾತದಲ್ಲಿ ನಿಧನರಾಗುವ ತನಕ ಅವರು ಮೇಲ್‌ಮಧ್ಯಮ ವರ್ಗದ ಕುಟುಂಬದಲ್ಲಿ ಸುಖವಾಗಿಯೇ ಇದ್ದರು. ತಂದೆ ಸತ್ತೊಡನೆ ಪರಿಸ್ಥಿತಿ ಕೆಟ್ಟಿತು. ವಿಲ್ಬನ್ನರ ತಾಯಿ ತಮ್ಮ ನಾಲ್ವರು ಮಕ್ಕಳನ್ನು ಕಲ್ಕತ್ತಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರ ಸಂಬಂಧಿಕರಿದ್ದರು. ಆದರೂ ಬದುಕು ಕಷ್ಟಕರವಾಗಿತ್ತು. "ಹೇಗೋ ನಮಗೆ ಎರಡು ಹೊತ್ತು ಊಟ ಸಿಗುತ್ತಿತ್ತು ಅಷ್ಟೆ" ಎಂದು ನೆನಪಿಸಿಕೊಳ್ಳುತ್ತಾರೆ ಮ್ಯಾಕ್‌ಕನ್.

(ಸಶೇಷ)

ಶಂಸ ಐತಾಳ

ಪುಸ್ತಕ ಪರಿಚಯ

ಪ್ರಬಂಧ ವಿಹಾರ–ಲಲಿತ ಪ್ರಬಂಧಗಳ ಸಂಕಲನ. ಲೇಖಕರು : ಡಾ. ಪಿ.ಎಸ್. ರಾಮಾನುಜಮ್, ೫೭೩, ಇಪ್ಪತ್ತನೆಯ ಮುಖ್ಯ ರಸ್ತೆ, ಎಂಟನೆಯ ಬ್ಲಾಕ್, ಕೋರಮಂಗಲ, ಬೆಂಗಳೂರು ೫೬೦೦೩೪. ಪ್ರಕಾಶಕರು : ಗೌತಮ್ ಮತ್ತು ಕಂಪೆನಿ, ನಾಲ್ಕನೆಯ ಅಡ್ಡ ರಸ್ತೆ, ಹನುಮಂತನಗರ, ಬೆಂಗಳೂರು ೫೬೦೦೧೯. ಪ್ರಥಮ ಮುದ್ರಣ ೧೯೯೩. ಪುಟ ೨೦೬. ಬೆಲೆ ರೂ ೨೦.

"ಜೀವನದಲ್ಲಿ ಕಂಡ ಘಟನೆಗಳನ್ನು ಹಿಡಿದು ಅದರ ಸುತ್ತ ಕಲ್ಪನೆಯನ್ನೂ ಸ್ವಲ್ಪ ಓಡಿಸಿ, ಉತ್ಪ್ರೇಕ್ಷಿತವಾಗಿ ಮಾಡಿ ಬರೆಯುತ್ತಾ ಹೋದಾಗ ಈ ಪ್ರಬಂಧಗಳು ಮೈದೋರಿದುವು. ವೃತ್ತಿ ಹಾಗೂ ವೃತ್ತಿತರ ಅನುಭವಗಳೇ ಇವುಗಳ ಭಿತ್ತಿಗಳು."

ಇಲ್ಲಿಯ ಹದಿನೆಂಟು (ಮಹಾಭಾರತವಲ್ಲಿ ಹದಿನೆಂಟಕ್ಕೆ ದೊರೆತಿರುವ ಪ್ರಾಮುಖ್ಯ ಈ ಹಾಸ್ಯಪ್ರಿಯ ಸಂಸ್ಕೃತ ಪಂಡಿತ ಸಂಗೀತಾರಾಧಕ ಪ್ರೊಲೀಸ್ ಅಧಿಕಾರಿಯ ಮನದಂತರಾಳದಲ್ಲಿ ಸೃಜನಶೀಲ ಒಗ್ಗರಣೆ ಹಾಕಿರುವುದಕ್ಕೆ ಅಲ್ಲಲ್ಲಿ ಪುರಾವೆಗಳು ದೊರೆಯುತ್ತವೆ: 'ಎತ್ತರದವರು,' 'ಪವರಕಟ್,' 'ಬಾಲಪಾಠ' ಮುಂತಾದವು) ಪ್ರಬಂಧಗಳ ಆಧಾರದ ಶ್ರುತಿ ಉಲ್ಲಾಸ. ಲೇಖಕರು ಇತರರ ಬಗ್ಗೆ ಅಥವಾ ಅಸ್ವಾಭಾವಿಕ ಘಟನೆಗಳ ಬಗ್ಗೆ ಒಂದು ತೆರನಾದ ಶ್ರೀಮದ್ಗಂಭೀರ 'ನಿರ್ಲಕ್ಷ್ಯ' ಭಾವ ತಳೆದು ತಮ್ಮ ಲೇಖನಿಗೆ ಚಾಲನೆ ಕೊಡುತ್ತಾರೆ. ಉದಾಹರಣೆಗೆ—

ಪ್ರತಿಯೊಂದು ಸನ್ನಿವೇಶಕ್ಕೂ ಸಮಸ್ಯೆಗೂ, ಅದರ ಪೂರ್ತಿ ವಿವರಣೆ ಮುಗಿಯುವ ಮೊದಲೇ, ತಮ್ಮ ಖಚಿತ ತೀರ್ಮಾನಗಳನ್ನು ತಾರಸ್ವರದಲ್ಲಿ ಅಪ್ಪಣೆ ಕೊಡಿಸುವ ನಿರ್ಣಯ ಪಂಡಿತರು ನಮ್ಮೆಲ್ಲರ ಸುತ್ತಮುತ್ತ ಸದಾ ಇರುತ್ತಾರೆ. ಖುದ್ದು ನಾವೇ, ನಮ್ಮ ಅರಿವಿಗೆ ಬಾರದೆಯೇ, ಈ 'ಅಂತಸ್ತಿ'ಗೆ ಏರಿ ವಿಹರಿಸಿ ಮೆರೆಯುವುದೂ ವಿರಳವಲ್ಲ. "ಇದಕ್ಕೇನಾದ್ರೂ ಮಾಡ್ಲೇಬೇಕು" ಎನ್ನುವ ಪ್ರಬಂಧ ಇಂಥ ಒಬ್ಬ ಪಂಡಿತನನ್ನು ಕುರಿತದ್ದು. ಈತನ ಸಹದುಃಖಿ ಪ್ರಯಾಣಿಕರಾಗಿ ಲೇಖಕರು ಪಡೆದ ಜೀವನ ಸಂಸ್ಕಾರ ನಿತ್ಯ ಜೀವನಕ್ಕೆ ಹಿಡಿದ ದರ್ಪಣ.

ಸಮಸ್ಯೆ ಎದುರಾದಾಗ ಈ ಮಹಾಶಯರು "ಇದಕ್ಕೇನಾದ್ರೂ ಮಾಡ್ಲೇ ಬೇಕು" ಎಂದು ಮಂತ್ರಿ ಮಹೋದಯರಂತೆ ದಿಢೀರನೆ ಘೋಷಿಸುತ್ತಾರೆ.

ಮುಂದೆ ನಡೆಯುವ ವಾದವಿವಾದಗಳು 'ಏನನ್ನು ಮಾಡಬೇಕು' ಎಂಬುದನ್ನು ವಿಶದೀಕರಿಸುತ್ತವೆ. ಇಷ್ಟಾಗುವಾಗ ನಮ್ಮ ನಿರ್ಣಯಭಯಂಕರ ಆದರೆ ಕಾರ್ಯಚೋರ ವ್ಯಕ್ತಿಗೆ ಆ ಹೊಣೆ ತನ್ನ ಮೇಲೆಯೇ ಕೆಡೆಯುತ್ತದೆ ಎಂಬುದರ ಅರಿವು ಮೂಡುತ್ತದೆ. ಸರಿ, ಪಲಾಯನವಾದವೇ ಶರಣು! ಆದರೆ ಅಲ್ಲಿಯೂ ತತ್ತ್ವಶಾಸ್ತ್ರದ ಗಂಭೀರ ಲೇಪ: "ಏನೂ ಮಾಡೋಕಾಗೊಲ್ಲ ಬಿಡಿ. ಎಲ್ಲ ಹಾಳಾಗಿ ಬಿಟ್ಟಿವೆ. ಇಡೀ ವ್ಯವಸ್ಥೆಯೇ ಹಾಳಾಗಿ ಹೋಗಿದೆ. ಸಡೀರಿ, ಹೋಗ್ರಾ ಇರೋಣ." ಲೇಖಕರೇ ಇನ್ನೊಂದೆಡೆ ಹೇಳುವಂತೆ (ಪುಟ ೪೮) "ಹಿಂದಿನವರೂ ಇದನ್ನು ಅನುಭವಿಸಿಯೇ ಸುಭಾಷಿತವನ್ನು ಮಾಡಿ ಕೈತೊಳೆದು ಕೊಂಡರು. ಅನಿವಾರ್ಯವಾದದ್ದನ್ನು ನಿಯಮವೆಂಬಂತೆ ಮಾಡಿಬಿಟ್ಟರು".

ಇವರ ಲೇಖನಪ್ರಕಾರ ಸ್ವಂತ ವ್ಯಕ್ತಿತ್ವ ಕುರಿತಂತೆಯೂ ನಿರಪೇಕ್ಷವಾಗಿದೆ. ತನ್ನ ಮೂರ್ಖತೆಗೆ ತಾನೇ ನಗದಾತ ಲೋಕವನ್ನು ಕೃತಕ ನೆಲೆಯಿಂದ ನೋಡುತ್ತಾನೆ. ನಗುವಾತನಾದರೋ ವಾಚಕನ ಜೊತೆ ಸಹಜವಾಗಿ ಮತ್ತು ಸರಸವಾಗಿ ಬೆರೆತು ಆತ್ಮೀಯನಾಗುತ್ತಾನೆ. ಏಕೆಂದರೆ ಮೂರ್ಖತೆ ಯಾರೊಬ್ಬನ ಖಾಸಾ ಸೊತ್ತು ಎಂದೂ ಅಲ್ಲ. ಉದಾಹರಣೆಗೆ—

"ಮೊನ್ನೆ ನನ್ನ ಐದು ವರ್ಷದ ಮಗ ನನ್ನನ್ನು ಮೇಲೆ ಕೆಳಗೆ ನೋಡಿ ಅವನಿಗಿದ್ದ ಎಲ್ಲ ಜ್ಞಾನವನ್ನೂ ಉಪಯೋಗಿಸಿ 'ನೀನೆಷ್ಟು ಆಳಪ್ಪಾ?' ಎನ್ನುವ ಒಂದು ಪ್ರಶ್ನೆಯನ್ನು ನನ್ನೆದೆಗೆ ಬಾಣದಂತೆ ಎಸೆದ. ನೀನೆಷ್ಟು ಎತ್ತರ ಎಂದು ನನ್ನ ತೆಂಗಿನ ಮರದ ಶರೀರವನ್ನು ನೋಡಿ ಕೇಳಿದವರಿದ್ದಾರೆ. ಎತ್ತರ ಎಂಬ ಪದ ಗೊತ್ತಿಲ್ಲದ ಮಕ್ಕಳು ನೀನೆಷ್ಟು ಉದ್ದ ಎಂದು ಕೇಳಿದ್ದುಂಟು. ಆದರೆ ನೀನೆಷ್ಟು ಆಳ ಎಂದು ಕೇಳಿದ ಮಕ್ಕಳೇ ಇರಲಿಲ್ಲ. ನನ್ನ ಸತ್ಪುತ್ರನೇ ನನ್ನ ಆಳವೆಷ್ಟು ಎಂದು ಕೇಳಿದ್ದನ್ನು ಕೇಳಿ ನಾನು ದಂಗಾಗಿಬಿಟ್ಟೆ." ಇನ್ನು ಮುಂದಿನ ತತ್ತ್ವಶಾಸ್ತ್ರೀಯ ವಿವರಣೆ ಜಿಜ್ಞಾಸೆಗಳನ್ನು ಲೇಖಕರ ಮಾತಿನಲ್ಲೇ ಓದಿ ನಿಮಗೆ ನೀವೇ ಪ್ರಶ್ನೆ ಹಾಕಿಕೊಳ್ಳಿ: "ನಾನೆಂಬುವ ನಾನು ನಾನೇಯೋ!"

ಸಭ್ಯ ಸುಸಂಸ್ಕೃತ ಮನಸ್ಸು ಬದುಕಿನ ಓರೆ ಕೋರೆಗಳನ್ನು ಸಹನೆಯಿಂದ ಮತ್ತು ಅಂತಃಕರಣದಿಂದ ನೋಡಿ ಅವಲೋಕಿಸಿ ಮನದೊಳಗೆ ನಿರಪೇಕ್ಷವಾಗಿ ಚಿಂತಿಸಿ ಸಾರವಿಳಿಸಿದಾಗ ಮಾತ್ರ ಈ ತೆರನಾದ ಪ್ರಬಂಧಗಳು ಮೈದಳೆಯುತ್ತವೆ. ಇಲ್ಲಿ ಹಾಸ್ಯವಿದೆ, ಕಟಕಿ ಇಲ್ಲ; ವಿನೋದವಿದೆ, ವಿಷಾದವಿಲ್ಲ; ಘಟನೆಯ ವ್ಯಂಗ್ಯ ಚಿತ್ರವಿದೆ, ನೀರಸ ವಿವರಗಳಿಲ್ಲ. ಎಂದೇ ಈ ಪುಸ್ತಕ ಓದಿ ಮುಗಿಸಿದಾಗ ಒಂದು ಕಗ್ಗ ಗೀಚದೇ ಇರಲಾಗಲಿಲ್ಲ:

ವಕ್ರದರ್ಪಣದೊಳಗೆ ಅಷ್ಟಾ-
ವಕ್ರಮುಸುಡನು ಕಂಡು ಬೆಚ್ಚಿದೆ
ವಿಕೃತ ಮತಿಯು ವಿಚಿತ್ರ ಲಹರಿಯ ನೋಡಿ ಕಂಗೆಟ್ಟೆ
ನಕ್ರಮಯವೀ ಬದುಕು, ಜಟಕದ
ಚಕ್ರ ಋಜು ಪಥಗಾಮಿಯಾದೊಡೆ
ಅಕ್ರಮಗಳಿಂ ಬಾಧೆ ತಟ್ಟದು ಕಲಿತೆನೀನೀತಿ

ಹರಿದಾಸರ ಸಂಪ್ರದಾಯದ ಹಾಡುಗಳು—ಲೇಖಕರು : ಪ್ರೊ. ಎಂ. ರಾಜಗೋಪಾಲಾಚಾರ್ಯ, ಸಂಪಾದಕ 'ಸುಗುಣ ಮಾಲಾ' ಮಾಸಿಕ, ರಥ ಬೀದಿ, ಉಡುಪಿ ೫೭೬೧೦೧. ಪ್ರಕಾಶಕರು : ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಎಮ್‌ಜಿಎಮ್ ಕಾಲೇಜ್, ಉಡುಪಿ ೫೭೬೧೦೨. ಪ್ರಥಮ ಮುದ್ರಣ ೧೯೯೪. ಪುಟ ೧೪೮.

ಕನ್ನಡ ನಾಡಿನ ಸಂಸ್ಕೃತಿಯ ಸಾರವನ್ನು ಇಲ್ಲಿಯ ಶರಣರ ವಚನಗಳಲ್ಲಿ, ಹರಿದಾಸರ ಹಾಡುಗಳಲ್ಲಿ ಅಂತೆಯೇ ಗದುಗಿನ ನಾರಣಪ್ಪನ ಭಾರತಾದಿ ಕಾವ್ಯಗಳಲ್ಲಿ ಗ್ರಹಿಸಬಹುದು—ಓದಿ, ಕೇಳಿ, ಹಾಡಿ ಮತ್ತು ನಲಿದಾಡಿ. ಜೀವನದ ಚಿರಂತನ ಮೌಲ್ಯಗಳನ್ನು ಜನಮನಕ್ಕೆ ಆಡುಭಾಷೆಯ ಮೂಲಕ ಹೃದ್ಯ ಗಾಯನದ ಮಾಧ್ಯಮದಲ್ಲಿ ಊಡುವ ದಾಸೋಹವನ್ನು ಅಥವಾ ಕೈಂಕರ್ಯವನ್ನು ಹರಿದಾಸರು ನಿರ್ವಹಿಸಿರುವ ಪರಿ ಅನ್ಯಾದೃಶವಾದುದು. "ನಂಬದಿರು ಈ ದೇಹ ನಿತ್ಯವಲ್ಲ" ಎಂಬ ವೈರಾಗ್ಯ ಬೋಧಕರೇ "ಈಸಬೇಕು ಇದ್ದು ಜೈಸಬೇಕು" ಎಂಬ ಕ್ರಿಯಾಪ್ರವರ್ತಕ ಘೋಷಣೆಯನ್ನು "ಡಂಗುರವ ಸಾರಿದರು!" ಮಾನವೀಯ ಮೌಲ್ಯಗಳ ಮಿತಿಯೊಳಗೆ ಇಲ್ಲಿಯ ಬದುಕು ಸವಿ, ಮಿತಿ ದಾಟಿದಾಗ ಅದು ವಿಷ—ಇದು ಈ ಹಾಡುಗಬ್ಬಗಳ ಸಂದೇಶ.

ಹಾಡೇಕೆ? ಮನಕ್ಕೆ ಮುಟ್ಟುವುದು, ತಟ್ಟುವುದು ಮತ್ತು ಅದರೊಳಗೆ ಹಲಕಾಲ ಮಡುಕಟ್ಟುವುದು ಹಾಡು ಮಾತ್ರ—ಲಯಬಂಧಿತ ಮಧುರಸ್ವನ ಮತ್ತು ಇದಕ್ಕೊಪ್ಪುವ ಮಾತಿನ ಮೋಡಿ. ಮೊದಲು ಹಾಡು, ಬಳಿಕ ನುಡಿಯ ಗೂಡು ಮುಂದೆ ಅರ್ಥದ ಸೂಡು! ಅಂದಮೇಲೆ ಹಾಡಿಗೊಂದು ಧಾಟಿ, ಧಾಟಿಗೊಂದು ರಾಗ, ರಾಗಕ್ಕೊಂದು ಆರೋಹಣಾವರೋಹಣ ಮುಂತಾದ ಕಟ್ಟುಪಾಡುಗಳು ಇರಬೇಕಲ್ಲವೇ? ಯಾವ ಹರಿದಾಸನೂ ಛಂದಸ್ಸು, ವ್ಯಾಕರಣ, ರಾಗ ಮುಂತಾದ ವಿಧಿನಿರ್ಬಂಧಗಳನ್ನು ಮೊದಲು ಗಮನಿಸಿ ಇವುಗಳಿಗೆ ವಿಧೇಯವಾಗಿರುವ ಕೃತಿ ರಚಿಸಲಾರ, ರಚಿಸಿರಲಾರ. ಏಕೆಂದರೆ, ಮೊದಲನೆಯದಾಗಿ,

ಆತನೊಬ್ಬ ಅನುಭಾವಿ.—ಅಂದರೆ ಅವ್ಯಕ್ತದ ಜೊತೆ ಭಾವಾತ್ಮಕ ಸಂಬಂಧ ವಿರುವಾತ; ಎರಡನೆಯದಾಗಿ, ಆತನೊಬ್ಬ ಮಾನವಪ್ರೇಮಿ—ಅಂದರೆ ಪರಿಸರದ ಜನಮಂದಿ ಜೊತೆ ಆತ್ಮೀಯ ಅಂತರಕ್ರಿಯ ನಿರ್ವಹಿಸುವಾತ; ಮೂರನೆಯದಾಗಿ, ಆತನೊಬ್ಬ ದ್ರಷ್ಟಾರ—ಅಂದರೆ ಸಾಮಾಜಿಕ ಕ್ರಿಯಾ ಕಲಾಪಗಳ ತಳದಲ್ಲಿಯ ಮೌಲ್ಯಗಳ ಪೂರಕತೆ, ಸಂಘಟ್ಟನ, ಪೋಷಕತೆ, ಘರ್ಷಣೆ ಮುಂತಾದವನ್ನು ತನ್ನ ಎಕ್ಸ್‌ಕಿರಣ ದೃಷ್ಟಿಯಿಂದ ವೀಕ್ಷಿಸಬಲ್ಲಾತ; ಕೊನೆಯದಾಗಿ, ಆತನೊಬ್ಬ ಸಮಾಜಸುಧಾರಕ—ಅಂದರೆ ಮಾನವನನ್ನು ದೈನಂದಿನ ದಂದುಗಗಳಿಂದ ವಿದೂರವಾಗಿಸಿ ಸಾರ್ಥಕ ತೃಪ್ತ ಜೀವನ ನಡೆಸಲು ಅವಶ್ಯವಾಗುವ ನೀತಿಬೋಧೆ ಮಾಡಬಲ್ಲಾತ.

ಈ ನೀತಿಬೋಧೆಗೆ ಹಾಡಿಗಿಂತ ಉತ್ತಮ ಮಾಧ್ಯಮವಿಲ್ಲ, ನಾಡ ನುಡಿಗಿಂತ ಉತ್ಕೃಷ್ಟ ವೇಷವಿಲ್ಲ. ಇಂಥ ಮಾಧ್ಯಮ–ವೇಷಾಂತರ್ಗತ ರಸ ಗುಳಿಗೆಗಳೇ ಜೀವನಧರ್ಮ. "ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ," "ಇಲ್ಲಿದೆ ನಮ್ಮ ಮನೆ, ಇಲ್ಲಿ ಬಂದೆ ಸುಮ್ಮನೆ" ಅಥವಾ "ಕೆಸರೊಳು ಜನಿಸಿದ ತಾವರೆಬಿಸಜ ನಾಭನಿಗರ್ಪಿಸಲಿಲ್ಲವೇ?" ಎಂದಾಗ ಪ್ರಕಟವಾಗುವುದು ಈ ಎಲ್ಲ ಗುಣಗಳು: ಹಾಡು ಮೊದಲು, ಹಾಡಿನ ಒಡಲಾಗಿ ನುಡಿ, ನುಡಿಯ ತಿರುಳಾಗಿ ಜೀವನ ಧರ್ಮ.

ಸಾಧು ಸಂತರ ಸ್ಫೂರ್ತಿ ವಾಣಿಗಳು, ಮೂಲತಃ ಜಾನಪದ ಧಾಟಿಗಳಿಂದಲೇ ಜನಿಸಿದವು, ಕ್ರಮೇಣ ಒಂದು ಸಂಗೀತ ಪ್ರಕಾರವಾಗಿ ಹೆಪ್ಪುಗಟ್ಟುವುದು ಪ್ರಕೃತಿ ನಿಯಮ. ಈ ಹಂತದಲ್ಲಿ ತಜ್ಞನೊಬ್ಬ ಧಾಟಿಗಳ ತಳದಲ್ಲಿರುವ ಶಾಸ್ತ್ರದ ಹೊಳಹುಗಳನ್ನು ಅರಸಲು ಮುಂದಾಗುತ್ತಾನೆ. ಇಲ್ಲಿಂದ ಮುಂದೆ ಶಾಸ್ತ್ರ ಮೈದಳೆಯುತ್ತದೆ: ಅಂದರೆ ಈ ಸಂವಹನ ಪ್ರಕಾರದ ತಳರೂಪಿಕೆ ಹೀಗಿದೆ ಎಂಬ ನಿರ್ಣಯ. ಮುಂದಿನ ಹಂತ: ತಳರೂಪಿಕೆಯನ್ನು ಆಧರಿಸಿ ದಾಸವಾಙ್ಮಯ ವನ್ನು ಹಾಡುವ ಮತ್ತು ಹೊಸ ಹಾಡುಗಳನ್ನು ಕಟ್ಟುವ ಬೇರೊಂದು ತೆರ ನಾದ ಸೃಜನಶೀಲಕ್ರಿಯ. ಮೊದಲು ಅನುಭವ ಮತ್ತೆ ಹಾಡುಗಬ್ಬವಿದ್ದುದು ಈಗ ಶಾಸ್ತ್ರ ಮತ್ತೆ ನಪರಚನೆ ಆಗುತ್ತದೆ. ಈ ಎರಡನೆಯ ಪ್ರಕ್ರಿಯೆಯಲ್ಲಿ ಸಾಕಷ್ಟು ಕೃತಕತೆ, ಬಿಕ್ಕಟ್ಟು, ವಿನಾಕಾರಣ ರಾಗ–ಲಯಗಳ ಅನಾಕರ್ಷಕ ಲಗಾಮು ಮುಂತಾದವು ಹಣುಕುವುದು ವಿರಳವಲ್ಲ.

ನಮ್ಮ ದಾಸವಾಙ್ಮಯಕ್ಕೆ ಆಗಿರುವುದು ಇಂಥ 'ಅ-ಕಾಯಕಲ್ಪ.' ಸಂಗೀತ ತ್ರಿಮೂರ್ತಿಗಳ ಶಾಸ್ತ್ರೀಯ ಚೌಕಟ್ಟಿನೊಳಗೆ (ಇಲ್ಲಿ ಧಾತು ಪ್ರಧಾನ ಮಾತು

ಗೌಣ) ದಾಸರಚನೆಗಳನ್ನು (ಇಲ್ಲಿ ಮಾತು ಪ್ರಧಾನ, ಧಾತು ಗೌಣ) ಗಿಡಿಯುವ ಬಲಪ್ರಯೋಗ. ಹಾಗಾದರೆ ಈಗ ಮಾಡಬೇಕಾದ್ದೇನು? ಇಂದಿನ ಶಾಸ್ತ್ರ ಸಂಪನ್ನತೆಯಿಂದ ಸನ್ನದ್ಧರಾಗಿ ಅಂದಿನ ಧಾಟಿಯನ್ನು ಅಂತಃಕರಣ ಪೂರ್ವಕವಾಗಿಯೂ ಸಂಶೋಧಕನ ಕುತೂಹಲಸಹಿತವಾಗಿಯೂ ಅನ್ವೇಷಿಸುವು ದೊಂದೇ ಹಾದಿ' ಇಂಥ ಅನ್ವೇಷಕನಿಗೆ ಇರಬೇಕಾದ ಗುಣಗಳು: ಶಾಸ್ತ್ರ ಸಂಪನ್ನತೆ, ಭಾಷಾಪಾಂಡಿತ್ಯ, ಸಾಂಸ್ಕೃತಿಕ ಪ್ರಜ್ಞೆ, ಪರಿಸರಜ್ಞಾನ ಹಾಗೂ ಅಪಾರ ಶ್ರದ್ಧೆ.

ಈ ಪಂಚಗುಣಾವಿಷ್ಟರು ಪ್ರಸ್ತುತ ಉದ್ಗ್ರಂಥದ ಲೇಖಕ ಪ್ರೊ. ರಾಜ ಗೋಪಾಲಚಾರ್ಯರು. ಮೊದಲ ೨೪ ಪುಟಗಳಲ್ಲಿ ಶ್ರೀಯುತರು ಬರೆದಿರುವ 'ವಾಙ್ಮುಖವ್'ಈ ನಿಟ್ಟಿನಲ್ಲಿ ಒಂದು ಮೌಲ್ಯನಿರ್ಣಾಯಕ ವಿಮರ್ಶೆ. ರಾಳ್ಳಪಳ್ಳಿ ಅನಂತಕೃಷ್ಣ ಶರ್ಮರ 'ಗಾನಕಲೆ' ಗ್ರಂಥ (೧೯೪೧–೫೦) ಓದಿದ, ಓದಿ ಅಭ್ಯಸಿ ಸಿದ, ಅಭ್ಯಸಿಸಿ ಪುಳಕಿತನಾದ ಬಳಿಕ ಅಂಥ ಎಲ್ಲ ಅನುಭವ ಒದಗಿದ್ದು ಪ್ರಸಕ್ತ ಮೂಲಭೂತ ಸಂಶೋಧನಕೃತಿಯ ವಾಚನದಿಂದ. ಸಂಗೀತಾಸಕ್ತರಿಗೆ ಮಾತ್ರ ವಲ್ಲ, ನಾಡಿನ ಜೀವನಾಸಕ್ತರಿಗೆಲ್ಲ ಇಲ್ಲಿದೆ ಒಂದು ಆಕರಗ್ರಂಥ. ಇದನ್ನು ಮೂರು ಸ್ತರಗಳಲ್ಲಿ ಓದಬಹುದು: ಶುದ್ಧ ಸಾಹಿತ್ಯ ಗ್ರಂಥವಾಗಿ, ದಾಸ ವಾಙ್ಮಯ ಕೈದೀವಿಗೆಯಾಗಿ, ಪ್ರಚಲಿತ ಕರ್ನಾಟಕ ಸಂಗೀತ ಕುರಿತಂತೆ ಪರಾಮರ್ಶನ ಗ್ರಂಥವಾಗಿ.

ಜಿ. ಟಿ. ನಾರಾಯಣರಾವ್

ಐಶ್ವರ್ಯವು ನಮ್ಮನ್ನು ಜಿಪುಣರನ್ನಾಗಿ ಮಾಡುತ್ತದೆ. ಆದ್ದರಿಂದ ಐಶ್ವರ್ಯವಂತರಾಗುವ ಮೊದಲೇ ನಾವು ಕೊಡುಗೈ ದೊರೆಗಳಾಗುವುದು ಒಳಿತು.

—ಬ್ರೌನ್

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಚಂದಾ ವಿವರಗಳು :

ಬಿಡಿ ಪತ್ರಿಕೆ	ರೂ. 3-00
ವಾರ್ಷಿಕ ಚಂದಾ	ರೂ. 30-00

ಆಜೀವ ಸದಸ್ಯತ್ವದ ಚಂದಾ ವಿವರ:

ಸಂಸ್ಥೆಗೆ	ರೂ. 500-00
ವ್ಯಕ್ತಿಗೆ	ರೂ. 300-00

Reg. No. KRNN 29 / WPP 6

LICENSE No. 21
LICENSED TO POST WITH PAYMENT

ನೀವು ಓದಲೇಬೇಕಾದ ಪುಸ್ತಕಗಳು....

Edited by R. Boraiah, Printed by H. V. Sreenivasachar, Manager at Karnataka State Adult Education Council Press and Published by Karnataka State Adult Education Council, Mysore city (India)